ಕರ್ನಾಟಕ ವಿಧಾನಸಭೆ

ಗುರುವಾರ 20ನೇ ಮಾರ್ಚ್ 2003ರಂದು
ಸದನವು ವಿಧಾನಸಭೆಯಲ್ಲಿರುವ ಸಭಾಂಗಣದಲ್ಲಿ
ಬೆಳಿಗ್ಗೆ 10-10 ಗಂಟೆಗೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪರವರು
ಪೀಠವನ್ನು ಅಲಂಕರಿಸಿದ್ದರು)

ಸನ್ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ (ಮುಂದುವರಿದುದು)

ಅಧ್ಯಕ್ಷರು:- ಸಿಂಧ್ಯಾರವರೇ, ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರುವವರೆಗೂ ತಾವು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಿನ್ನೆ ನಾವು ಕೆಲವರು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿದ್ದೆವು. ದಯವಿಟ್ಟು ನಮಗೂ ಮಾತನಾಡುವುದಕ್ಕೆ ಅನಂತರ ಅವಕಾಶ ಕಲ್ಪಿಸಿಕೊಡಬೇಕು.

ಅಧ್ಯಕ್ಷರು:- ಮುಖ್ಯಮಂತ್ರಿಗಳು ಬರುವವರೆಗೂ ಮಾತನಾಡಲು ಅವಕಾಶ ಕಲ್ಪಿಸಿಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅವರು ಬರುವವರೆಗೂ ಅಂದರೆ, ಏನೆಂದರು ನಮಗೆ ಅರ್ಥವಾಗುವುದಿಲ್ಲ.

ಅಧ್ಯಕ್ಷರು:- ತಾವು ಮಾತನಾಡಬಾರದೆಂದಲ್ಲ, ಆಯವ್ಯಯದ ಮೇಲೆ ತಾವು ಮಾತನಾಡಬಹುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅವರು ಬರುವುದಕ್ಕಿಂತಲೇ ನಾವು ಮಾತನಾಡುವುದೇ?

ಅಧ್ಯಕ್ಷರು:- ಹಾಗಲ್ಲ, Don't think like that. ನಿನ್ನೆಯೇ ನಾವು ಈ ವಿಷಯವನ್ನು ಕ್ಲೋಸ್ ಮಾಡಿದ್ದೇವೆ. ಅವರು ಹದಿನೈದು ನಿಮಿಷ ಇಲ್ಲವೇ ಅರ್ಧಗಂಟೆ ಬಳಿಕ ಬರುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಈಗ ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯಾರವರು ಮಾತನಾಡುತ್ತಾರೆ. ಅವರು ಮಾತನಾಡಿದ ಬಳಿಕ ನಮ್ಮೆಲ್ಲರಿಗೂ ಮಾತನಾಡಲು ತಾವು ಅವಕಾಶ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನನಗೆ ಮಾತನಾಡುವ ಚಪಲ ಇಲ್ಲ ದಯವಿಟ್ಟು ಮಾತನಾಡುವವರು ಯಾರಾದರೂ ಇದ್ದರೆ ಮಾತನಾಡಬಹುದು, ನನ್ನದೇನೂ ತಕರಾರಿಲ್ಲ, ಮುಖ್ಯಮಂತ್ರಿಗಳು ಬರುವವರೆಗೂ ಮಾತನಾಡಬೇಕೆಂದು ಹೇಳಿ ಒಂದು ಕಾಲು ಮೇಲೆ ನಿಂತುಕೊಳ್ಳುವ ಶಿಕ್ಷೆ ನನಗೇನೂ ಬೇಕಾಗಿಲ್ಲ. ಅವರಿಗೆ ಮಾತನಾಡಲು ತಾವು ಅವಕಾಶ ಕೊಡಿ.

ಅಧ್ಯಕ್ಷರು:- ತಾವು ಮಾತನಾಡಿ. ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಉತ್ತರಿಸಿದ ಬಳಿಕ ಮೇಲ್ಮನೆಯಲ್ಲೂ ಉತ್ತರಿಸಬೇಕಲ್ಲಾ. ಅದರ ಬಗ್ಗೆ ನಾವು ಆಲೋಚಿಸಬೇಕಲ್ಲ. ಜೊತೆಗೆ ಮುಖ್ಯಮಂತ್ರಿಗಳು ನಾಳೆ ಬಜೆಟ್‌ಗೆ ತಯಾರಾಗಬೇಕಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಈ ಸದನಕ್ಕೆ ಮೊದಲ ಮತ್ತು ಎರಡನೆಯ ಸಲ ಚುನಾಯಿತರಾಗಿ ಬಂದ ಸದಸ್ಯರಿಗೆ ಮಾತನಾಡಲು ತಾವು ಅವಕಾಶ ಕಲ್ಪಿಸಿಕೊಡಿ. ಅನಂತರ ನಾನು ಮಾತನಾಡುತ್ತೇನೆ. ಬೇಕಾದರೆ ನಾನು ಕ್ಲಾರಿಫಿಕೇಶನ್ ಹಂತದಲ್ಲಿ ಕೇಳುತ್ತೇನೆ. There is a limit for all those things.

ಅಧ್ಯಕ್ಷರು:- ನಿನ್ನೆ ದಿವಸ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸಲು ಫಸ್ಟ್ ಟರ್ಮ್‌ನವರು ಎಂಟು ಜನ, ಸೆಕೆಂಡ್ ಟರ್ಮ್‌ನವರು ಹತ್ತು ಜನ ಮತ್ತು ಥರ್ಡ್ ಟರ್ಮ್‌ನವರು ಇಬ್ಬರು ಮಾತನಾಡಿದ್ದಾರೆ. ಆದ್ದರಿಂದ, ಫಸ್ಟ್ ಟರ್ಮ್‌ನವರು ಮಾತನಾಡಲೇ ಇಲ್ಲ, ಫ್ರಂಟ್ ಬೆಂಚ್ ಎನ್ನುವ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಒಂದೊಂದು ಸಲ ಆ ರೀತಿ ಆಗುತ್ತದೆ. ನಿಮ್ಮನ್ನು ನಾಯಕರನ್ನಾಗಿ ಮಾಡಿದ ಮೇಲೆ ಕೆಲವು ಇಶ್ಯೂಗಳನ್ನು ಮಾತನಾಡಲೇಬೇಕಲ್ಲ. ಸ್ವಲ್ಪ ಅಡ್ಜಸ್ಟ್ ಮಾಡಿಕೊಂಡು ಹೋಗಿ. ಆನಂತರ, ವಿಶ್ವೇಶ್ವರ ಹೆಗಡೆಯವರೆ, ತಮಗೆ ಆಕಸ್ಮಾತ್ ಸಮಯ ಸಿಗದೇ ಹೋದರೆ ತಾವು ಬಜೆಟ್ ಮೇಲೆ ಮಾತನಾಡಿ. ಸ್ಪೀಕರ್ ಏನು ಹೇಳುತ್ತಾರೆಂದು ಒಬ್ಬೆ ಮಾಡಿ. ನಿಮಗೂ ಒಳ್ಳೆಯದಾಗುತ್ತದೆ. ಬಜೆಟ್ ಮೇಲಿನ ಚರ್ಚೆಯಲ್ಲಿ ನಿಮಗೆ ಎಷ್ಟು ಬೇಕೋ ಅಷ್ಟು ಸಮಯ ಕಲ್ಪಿಸಿಕೊಡುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ):- ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣ ಯಾವುದೇ ಒಂದು ಸರ್ಕಾರದ ಉದ್ದೇಶಗಳ ಮತ್ತು ಸಾಧನೆಗಳ ಕೈಗನ್ನಡಿಯಾಗಬೇಕು. ಯಾವುದೇ ಒಂದು ಚುನಾಯಿತ ಸರ್ಕಾರದ ಉದ್ದೇಶ ಮತ್ತು ಸಾಧನೆಗಳೇನು ಎಂಬುದನ್ನು ಮೊದಲನೇ ವರ್ಷ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ರಾಜ್ಯಪಾಲರ ಮುಖಾಂತರ ಮಾಡಿಸುತ್ತಿರತಕ್ಕಂಥ ಐದನೆಯ ಭಾಷಣ ಇದಾಗಿದೆ. 1999ನೇ ಅಕ್ಟೋಬರ್ ತಿಂಗಳ 27ನೇ ತಾರೀಖು, 2000, 2001, 2002 ಮತ್ತು 2003ನೇ ಇಸವಿಗಳಲ್ಲಿ ರಾಜ್ಯಪಾಲರಿಂದ ಭಾಷಣ ಮಾಡಿಸಿದ್ದಾರೆ. ಈ ಎಲ್ಲಾ ಐದು ಭಾಷಣಗಳ ಸಾರಾಂಶವನ್ನು ನಾನು ಓದಿದ್ದೇನೆ. ಯಾವುದೇ ಒಂದು ಸರ್ಕಾರ ಆಡಳಿತಕ್ಕೆ ಬಂದಾಗ ರಾಜ್ಯಪಾಲರ ಭಾಷಣಕ್ಕೆ ಅದು ಆ ಆಡಳಿತ ಪಕ್ಷದ ಅಥವಾ ಈಗ ಕಾಂಗ್ರೆಸ್ ಪಕ್ಷ ರಾಜ್ಯವನ್ನು ಆಳುತ್ತಿದೆ. ಆ ಭಾಷಣ ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಭಾಷಣದಂತಾಗಬಾರದು. ಕಾಂಗ್ರೆಸ್ ಪಕ್ಷ ಒಂದು ಚುನಾವಣಾ ಪ್ರಣಾಳಿಕೆ ಮಾಡಿರುತ್ತದೆ. ಬಹುಶಃ ತಾವು ಆಗ ಕಾಂಗ್ರೆಸ್‌ನಲ್ಲಿದ್ದಿರಿ. ಚುನಾವಣಾ ಪ್ರಣಾಳಿಕೆ ತಯಾರಿಸುವುದರಲ್ಲಿ ನೀವು, ಬಿ.ಕೆ. ಚಂದ್ರಶೇಖರ್ ಅವರೆಲ್ಲರೂ ಸೇರಿಕೊಂಡು ಮಾಡಿದ್ದೀರೆಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ಮಾಡಿ ಎಂದು ಆದೇಶಿಸುವ ಅಧಿಕಾರ ಮಾನ್ಯ ಮುಖ್ಯಮಂತ್ರಿಗಳಿಗಿದೆ. ಈಗ ರಾಜ್ಯಪಾಲರ ಭಾಷಣಕ್ಕೆ ಹಾಗೂ ಭಾಷಣದ ಮೇಲಿನ ಚರ್ಚೆಗೆ ಒಂದು sanctity ಇದೆ. ರಾಜ್ಯಪಾಲರಿಂದ ಭಾಷಣ ಮಾಡಿಸುವ ಸಂದರ್ಭದಲ್ಲಿ ಅದು ಎಷ್ಟರಮಟ್ಟಿಗೆ ಅನುಷ್ಠಾನಗೊಂಡಿದೆ ಎಂಬುದನ್ನೂ ಸಹ ನೋಡಬೇಕಾಗುತ್ತದೆ. ಈ ವರ್ಷ ಮಾನ್ಯ ಮುಖ್ಯಮಂತ್ರಿಗಳಿಗೆ ಉಳಿದಿರುವ ಇನ್ನು ಹದಿನೆಂಟು ತಿಂಗಳುಗಳ ಸಂದರ್ಭದಲ್ಲಿ ಇದು ಮುಂದೆ ಬರಲಿರುವ ಅವಲೋಕನಾ ವರ್ಷವಾಗಿದೆ. ಅಂದರೆ, ಕಳೆದ ಮೂರೂವರೆ ವರ್ಷಗಳಲ್ಲಿ ಅವರು ಏನು ಮಾಡಿದ್ದಾರೆ, what all the promises he has made? How much he has fulfilled? This is the question. ರಾಜ್ಯಪಾಲರು ಮಾಡಿರುವ ಐದೂ ಭಾಷಣಗಳಲ್ಲೂ ಸಹ ನಮ್ಮ ಮಾನ್ಯ

ಮುಖ್ಯಮಂತ್ರಿಗಳು ಒಟ್ಟು 281 ಪ್ರಾಮಿಸಸ್ ಮಾಡಿದ್ದಾರೆ. So far, 281 promises he has made. There are few achievements. ಈಗ ನಾನು ಮಾತನಾಡುತ್ತಾ ಸರ್ಕಾರದ್ದು ಯಾವುದೇ ಅಚೀವ್‌ಮೆಂಟ್ಸ್ ಇಲ್ಲವೆಂದು ಹೇಳಿದರೆ ಬಹುಶಃ ನಮ್ಮ ಮಂತ್ರಿಗಳಿಗೆ ಬೇಸರವಾಗುತ್ತದೆ ಮತ್ತು ಮಾಡಿರುವ ಅಚೀವ್‌ಮೆಂಟ್ಸ್ ಅನ್ನು ಮಾನ್ಯ ಸದಸ್ಯರಾದ ಮುದ್ದಹನುಮೇಗೌಡರು ಹೇಳುತ್ತಾರೆಂದು ನಾನು ತಿಳಿದಿದ್ದೆ. ಆದರೆ, ಪರಿಣಾಮಕಾರಿಯಾಗಿ ಅವರಿಗೆ ಹೇಳಲು ಆಗಲಿಲ್ಲ. ಬಹುಶಃ ಅವರಿಗೆ ಆಸಕ್ತಿ ಕಡಿಮೆಯೆಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರದವರು ಏನಾದರೂ ಅಚೀವ್‌ಮೆಂಟ್ಸ್ ಮಾಡಿದ್ದಾರೆಯೆ? ಏನೂ ಸಾಧನೆಗಳನ್ನು ಮಾಡಿಲ್ಲವೆಂದು ಹೇಳಿದರೆ ನನ್ನ ಸ್ಥಾನಕ್ಕೆ ಅಗೌರವವುಂಟಾಗುತ್ತದೆ, ಚ್ಯುತಿ ಬರುತ್ತದೆ ಮತ್ತು ನನ್ನ ಮಾತಿಗೂ ಬೆಲೆ ಸಿಗುವುದಿಲ್ಲ, ಆದುದರಿಂದ, ಕೆಲವು ಸಾಧನೆಗಳನ್ನು ನೀವು ಮಾಡಿದ್ದೀರಿ. ಆ ಸಾಧನೆಗಳು ಏನೆಂದರೆ, ಆರ್ಥಿಕವಾಗಿ ದುರ್ಬಲರಿಗೆ ಮನೆಗಳನ್ನು ಕಟ್ಟಿಸಿಕೊಡುವ ವಿಚಾರ. ಹಿಂದಿನ ಎಲ್ಲಾ ಸರ್ಕಾರಗಳಿಗಿಂಥ ಸ್ವಲ್ಪ ಉತ್ತಮವಾದ ಪ್ರಗತಿ ಸಾಧಿಸಿದ್ದೀರಿ. ಪ್ರಗತಿ ಯಾವ ರೀತಿ ಆಗಿದೆಯೆಂದರೆ, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಗೆ ರಿಹ್ಯಾಬಿಲಿಟೇಶನ್ ಮಾಡತಕ್ಕಂಥ ಒಂದು ಕಾರ್ಯಕ್ರಮವಾಗಿದೆ. 2 ಸಾವಿರ, 3 ಸಾವಿರ ರೂಪಾಯಿಗಳಿಗೆ ಯಾರಿಗೂ ಮನೆ ಸಿಗುವುದಿಲ್ಲ. ಪರಿಶಿಷ್ಟ ಜಾತಿಗೆ ಸೇರಿರುವ ಬೇಲೂರು ಮತಕ್ಷೇತ್ರದ ಶಾಸಕರಾದ ಪುಟ್ಟರಂಗನಾಥ್‌ರವರಿಗೆ ಆಶ್ರಯ ಮನೆಗಳನ್ನು ವಿತರಿಸುವ ಸಂಬಂಧದಲ್ಲಿ ಉಂಟಾಗಿರುವ ಗತಿ ಹೀಗಾದರೆ, ಅವರು ಆಡಳಿತ ಪಕ್ಷಕ್ಕೆ ಬೆಂಬಲ ಕೊಟ್ಟಿದ್ದಾರೆ. ಆದರೆ, ಅವರ ಗತಿಯೇ ಹೀಗಾದರೆ ಇನ್ನು ಬೇರೆಯವರ ಗತಿ ಹೇಗಿರುತ್ತದೆಂಬುದನ್ನು ಸಚಿವರಾದ ಕಾಗೋಡು ತಿಮ್ಮಪ್ಪನಂತಹವರು ಯೋಚನೆ ಮಾಡಬೇಕು. ತಾವು ಹಿಂದುಳಿದ ವರ್ಗದ ಸಮಾಜದಿಂದ ಹೋರಾಟ ಮಾಡಿಕೊಂಡು ಅಧಿಕಾರಕ್ಕೆ ಬಂದಿರುವವರು. ಈ ವಿಚಾರದಲ್ಲಿ ಸ್ವಲ್ಪಮಟ್ಟಿನ ಸಾಧನೆಯಾಗಿದೆ. ರಸ್ತೆಗಳು ಮತ್ತು ಸೇತುವೆಗಳು. ಕೇಂದ್ರ ಮತ್ತು ರಾಜ್ಯ ಎರಡೂ ಸರ್ಕಾರಗಳು ಉತ್ತಮ ಕೆಲಸಗಳನ್ನು ಮಾಡಿವೆ. ಕಣ್ಣಿದ್ದವರಿಗೆ, ಕಿವಿ ಕೇಳಿಸುವವರಿಗೆ ಇದು ಅರ್ಥವಾಗುತ್ತದೆ. ಇವೊತ್ತು ಬೆಳಗಾವಿಯಿಂದ ಮುಂಬಯಿವರೆಗೆ ಮಾಡುತ್ತಿರತಕ್ಕಂಥ ರಸ್ತೆಕ್ರಾಂತಿ ಈ ದೇಶದಲ್ಲಿ ಮೊದಲನೆಯದು. ಇದನ್ನು ನಾವು ಮೆಚ್ಚಬೇಕಾಗುತ್ತದೆ. ಕೇಂದ್ರ ಸರ್ಕಾರದವರು ಸೆಂಟ್ರಲ್ ರೋಡ್ ಫಂಡ್‌ನಲ್ಲಿ ಇನ್ನೂರ ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರಕ್ಕೆ ಕಳೆದ ಮೂರು ವರ್ಷಗಳಲ್ಲಿ ಕೊಟ್ಟಿದ್ದಾರೆ. ಸುಮಾರು ಎರಡೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು quadrangle ರಸ್ತೆಗೆಂದು ಬಹುಶಃ ವಾಜಪೇಯಿಯವರ ಸರ್ಕಾರ ಮಾಡಿರುವ ಬಹಳ ದೊಡ್ಡ ಸಾಧನೆ ಇದಾಗಿದೆ. ನೀವೂ ಸಹ ಮಾಡಿದ್ದೀರಿ. ರಸ್ತೆ, ಸೇತುವೆಗಳ ವಿಚಾರದಲ್ಲಿ Karnataka Road Development Corporation (KRDB) ಮಾಡಿ ಕಾಮಗಾರಿಗಳನ್ನು ಕೈಗೊಂಡಿದ್ದೀರಿ. ಅನಂತರ, ಸಾರಿಗೆ ಸಂಸ್ಥೆಯನ್ನು ಡಿವೈಡ್ ಮಾಡಬೇಕೆಂದು ಉದ್ದೇಶಿಸಿ ಹಿಂದೆ ಜೆ.ಹೆಚ್. ಪಟೇಲ್‌ರವರ ಸರ್ಕಾರ ಇದ್ದಾಗ ನಾಲ್ಕೈದು ಡಿವಿಜನ್‌ಗಳಾದವು. ಬೆಂಗಳೂರು, ಮೈಸೂರು, ಹುಬ್ಬಳ್ಳಿಗೊಂದಾಗಿತ್ತು. ಕಲ್ಬುರ್ಗಿಗೆ ಆಗಿರಲಿಲ್ಲ, ಅದನ್ನು ಮಾಡಿದ್ದಾರೆ. ಇನ್ನು 'ಭೂಮಿ' ಕಾರ್ಯಕ್ರಮ ಕುರಿತು ಹೇಳುವುದಾದರೆ, ಸೋಮಶೇಖರ್‌ರವರ ಅಧಿಕಾರಾವಧಿಯಲ್ಲಿ ಸರ್ಕಾರಿ ಆಜ್ಞೆಯಾಗಿದ್ದನ್ನು ತಾವು ಅದನ್ನು ನಿಜವಾಗಿಯೂ ಚೆನ್ನಾಗಿ ಮಾಡಿದ್ದೀರಿ. I appreciate the officers including Mr. Chawla. ಅದು ಬೇರೆ ರಾಜ್ಯಗಳ ಮುಖ್ಯ ಮಂತ್ರಿಗಳು ಬಂದಂಥ ಸಂದರ್ಭದಲ್ಲಿ

ನಾವು ತೋರಿಸತಕ್ಕಂಥ ಷೋಕೇಸ್ ಮತ್ತು ಷೋ ಪೀಸ್ ಆಗಿದೆ. 'ಭೂಮಿ' ಕಾರ್ಯಕ್ರಮವನ್ನು ನಾನು ಮೆಚ್ಚುತ್ತೇನೆ. ಹೋಬಳಿ ಕೇಂದ್ರಗಳಲ್ಲಿ 'ರೈತ ಮಿತ್ರ' ಮಾಡಿದ್ದೀರಿ. ಅದರ ಫಂಕ್ಷನಿಂಗ್ ಇರಬಹುದು, but, the concept I appreciate. ಇದು ಸ್ವಲ್ಪಮಟ್ಟಿಗೆ ಆಗಿದೆ. ಇದಾದ ಬಳಿಕ ಮಹಿಳೆಯನ್ನು ಜಾಗೃತಿಗೊಳಿಸುವ ಸಂಬಂಧ ಹಮ್ಮಿಕೊಂಡಿರುವ 'ಸ್ತ್ರೀಶಕ್ತಿ' ಕಾರ್ಯಕ್ರಮ ಏನಿದೆ, ಅದು ದೇಶ ಮೆಚ್ಚತಕ್ಕಂಥ ಒಂದು ಕಾರ್ಯಕ್ರಮವಾಗಿದೆ. ಇದನ್ನು ನಾನು ವಿರೋಧ ಪಕ್ಷದಲ್ಲಿದ್ದು ಹೇಳುವ ಮಾತಲ್ಲ. ಕಾಂಗ್ರೆಸ್ ಪಕ್ಷಕ್ಕೆ ಸ್ವಲ್ಪಮಟ್ಟಿಗೆ ಇದರಿಂದ ಉಪಯೋಗವಾಗುತ್ತದೆ. ಇದರ ಲಾಭ ಸಹ ಬಹಳ ಚೆನ್ನಾಗಿ ಸುಯ್ಯಾಲೆ ಪದಗಳನ್ನು ಹೇಳುವುದರ ಮೂಲಕ ಎಐಸಿಸಿ ವರ್ಕಿಂಗ್ ಕಮಿಟಿ ಸದಸ್ಯರಾಗಿರುವ ಮೋಟಮ್ಮನವರು ಆ ಕಾರ್ಯಕ್ರಮವನ್ನು ಬಹಳ ಚೆನ್ನಾಗಿ ಅನುಷ್ಠಾನಗೊಳಿಸುತ್ತಾರೆ. But, I must appreciate the programme initiative you have taken. ನಂತರ, ಆವರ್ತ ನಿಧಿ ಕಾನ್‌ಸೆಪ್ಟ್ ಏನಿದೆ, ಅದು ಸರಿಯಾಗಿದೆ. ಅದೂ ಸಹ ಒಳ್ಳೆಯ ಕೆಲಸ. ನಾವು ಯಾವಾಗಲಾದರೊಮ್ಮೆ ಬೀದರ್, ಗುಲ್ಬರ್ಗಕ್ಕೆ ಹೋದರೆ, ನೀವು ಉತ್ತರ ಕರ್ನಾಟಕವನ್ನು ಉದಾಸೀನ ಮಾಡಿದ್ದೀರಿ, ಇಲ್ಲೊಂದು ತೊಗರಿ ಮಂಡಳಿ ಸ್ಥಾಪಿಸಬೇಕೆಂದು ಕೇಳಿದರು. ನೀಲಕಂಠಪ್ಪನವರೆ, ನಾನು ಹೇಳುತ್ತಿರುವುದನ್ನು ಸ್ವಲ್ಪ ಕೇಳಿಸಿಕೊಳ್ಳಿ. ತೊಗರಿ ಮಂಡಳಿ ಮಾಡಿದ್ದಾರೆ, ಅದಕ್ಕೆ ಸ್ವಲ್ಪಮಟ್ಟಿಗೆ ಹಣವನ್ನೂ ಸಹ ಬಿಡುಗಡೆ ಮಾಡಿ, ತೊಗರಿಯನ್ನು ಸಹ ಸ್ವಲ್ಪಮಟ್ಟಿಗೆ ಖರೀದಿಸಿದ್ದಾರೆ. ಬಹಳ ಪ್ರಮುಖವಾಗಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿರುವ ಕೆಲಸ. I appreciate this. I welcome this initiative taken by this Government. ಏಕೆಂದರೆ, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಇಲಾಖೆಗಳು ನೀವೇನಾದರೂ ಅಚೀವ್‌ಮೆಂಟ್ ಮಾಡಿದ್ದೇವೆಂದು ಹೇಳಿದರೆ, ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬತಕ್ಕಂಥ ಕೆಲಸದಲ್ಲಿ I appreciate because you have taken some initiative. ಅನಂತರ ಕಾವೇರಿ ನಾಲ್ಕನೇ ಹಂತದ ಯೋಜನೆ, ಬಿ.ಡಿ.ಎ. ನವರು, ಪರ್ಟಿಕ್ಯುಲರ್‌ಲಿ ಮಿಸ್ಟರ್ ಜಯಕರ್ ಜರೋಮೆರವರು ಬಿಡಿಎ ಕಮಿಷನರ್ ಆದ ಮೇಲೆ ಒಳ್ಳೆಯ ಕೆಲಸ ಆಗಿತ್ತಿದೆ. ಸಧ್ಯಕ್ಕೆ ನಮ್ಮ ಮುಖ್ಯಮಂತ್ರಿಗಳ ಮಾರಿ ಕಣ್ಣು ಅವರ ಮೇಲೆ ಬಿದ್ದಿಲ್ಲ. In site distribution a good job has been done in Bangalore for the first time after several long years. ದಾವಣಗೆರೆಯ ಸೋಮಣ್ಣನವರನ್ನು ನಾವು ನೆನಪಿಸಿಕೊಳ್ಳುತ್ತೇವೆ. ಅವರು ಆದ ಮೇಲೆ ಸೈಟುಗಳನ್ನು ಹಂಚಿರತಕ್ಕ ಕೆಲಸದಲ್ಲಿ ಕೆ.ಕೆ. ಮೂರ್ತಿಯವರು ಸ್ವಲ್ಪ ಒಳ್ಳೆಯ ಕೆಲಸವನ್ನು ಮಾಡಿದ್ದರು. ಆದಾದ ಮೇಲೆ ಈಗ ಇವರು ಒಳ್ಳೆಯ ಕೆಲಸ ಮಾಡುತ್ತಾ ಇದ್ದಾರೆ. ನಮ್ಮ ಜೆ.ಹೆಚ್. ಪಟೇಲರು ಕಾವೇರಿ ನಾಲ್ಕನೇ ಹಂತದ ಯೋಜನೆ ಪ್ರಾರಂಭ ಮಾಡಿದರು ಅದನ್ನು ತಾವು ಮುಗಿಸಿದ್ದೀರಿ. All these are good things. ಬಹಳ ಮುಖ್ಯವಾಗಿ ಬೆಂಗಳೂರನ್ನು ಇಂಪ್ರೂವ್‌ಮೆಂಟ್ ಮಾಡಬೇಕೆಂಬ ಕಾನ್‌ಸೆಪ್ಟ್ ಏನಿದೆ these are few and far between 281 promises. ಮುಖ್ಯಮಂತ್ರಿಗಳು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಬಹುಶಃ ಅವರ ಪಬ್ಲಿಕ್ ರಿಲೇಷನ್ ವರ್ಕ್ ದೇಶದಲ್ಲೇ ನಂಬರ್ ಒನ್. ಅವರಿಗೆ ಹೊಗಳುವವರನ್ನು ಕಂಡರೆ ಬಹಳ ಪ್ರೀತಿ. ಅವರ ಸುತ್ತ ಮುತ್ತ ಹೊಗಳು ಭಟ್ಟರೇ ಇದ್ದಾರೆ. ಫ್ರಂಟ್ ಬೆಂಚ್‌ನಲ್ಲಿರುವ ಜನರು ಏಕೆ ಆಬ್‌ಸೆಂಟ್ ಆಗುತ್ತಾರೆಂದರೆ ಅವರ್ಯಾರೂ ಹೊಗಳು ಭಟ್ಟರಲ್ಲ. ಸೆಕೆಂಡ್ ಬೆಂಚ್‌ನವರು ಬಹಳ ಜನ

ಹೊಗಳು ಭಟ್ಟರಲ್ಲ. ಇವರೆಲ್ಲಾ ಹೋಗಿ ಹೊಗಳುತ್ತಾರೆಂದು ನಾನು ಅಂದುಕೊಳ್ಳುವುದಿಲ್ಲ. ಆದರೆ ಹೊಗಳು ಭಟ್ಟರನ್ನು ಕೂರಿಸಿ ಕೊಂಡಿದ್ದಾರೆ. ನಾನೂ ಸಹ ಆ ಹೊಗಳು ಭಟ್ಟನ ಕೆಲಸವನ್ನು ಸ್ವಲ್ಪ ಮಾಡಬೇಕಾಗುತ್ತದೆ. ಏಕೆಂದರೆ, ಏನು ಸಿಂಧ್ಯಾರವರೇ ನಾವೇನೂ ಕೆಲಸ ಮಾಡಲೇ ಇಲ್ಲವೇ? ನಾವು ಇಷ್ಟೆಲ್ಲಾ ಕೆಲಸ ಮಾಡಿದ್ದೇವಲ್ಲಾ ಎಂದು ಹೇಳಿದಾಗ, ಸ್ವಲ್ಪ ಮುಖ್ಯಮಂತ್ರಿಗಳಿಗೆ ಬೇಜಾರಾಗಬಹುದೆಂದು ನಾನು ಈ ಮಾತುಗಳನ್ನು ಹೇಳುತ್ತೇನೆ. ಸರ್ಕಾರದ ವೈಫಲ್ಯಗಳೇನು ಎಂಬುದು ಬಹಳ ಮುಖ್ಯವಾಗಿರುವ ವಿಚಾರಗಳು. ತಾವೂ ಮರೆತಿದ್ದೀರಿ, ಏಕೋ ಏನೋ ಗೊತ್ತಿಲ್ಲ. 1999ನೇ ಇಸವಿಯಲ್ಲಿನ, ಮುಖ್ಯಮಂತ್ರಿಗಳ ಕಾರ್ಯವೈಖರಿಯ ಬಗ್ಗೆ ಅನಂತರ ಬರುತ್ತೇನೆ. ಮುಖ್ಯಮಂತ್ರಿಗಳ ಕಾರ್ಯದರ್ಶಿ ಶಂಕರಲಿಂಗೇಗೌಡ ರಿಂದ ದಿನಾಂಕ 11-11-1999 ರಂದು ನನಗೆ ಒಂದು ಪತ್ರ ಬಂತು. ಈ ಪತ್ರದಲ್ಲಿ ಏನಿದೆ ಎಂದರೆ, ತಾವುಗಳು ತಮ್ಮ ಮತ ಕ್ಷೇತ್ರದ ಹತ್ತು ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳೊಡನೆ ಚರ್ಚಿಸಲು ಅನುಕೂಲವಾಗುವಂತೆ ಅವರ ದೈನಂದಿನ ಕಾರ್ಯಕ್ರಮದ ಪಟ್ಟಿಯಲ್ಲಿ ಮಧ್ಯಾಹ್ನ ಮೂರರಿಂದ ನಾಲ್ಕೂವರೆ ಗಂಟೆಗೆ ವಿಧಾನಸೌಧದ ಕೊಠಡಿಯಲ್ಲಿ ಭೇಟಿಗೆ ಅವಕಾಶ ನೀಡಿದ್ದಾರೆ ಎಂದು ಪತ್ರ ಬಂದಿತ್ತು. ಹಾಗಿದ್ದರೆ ಎಷ್ಟು ಸಾರಿ ಅವಕಾಶ ನೀಡಿದ್ದಾರೆ? ಎಷ್ಟೊತ್ತಿಗೆ ಇವರು ಸಿಕ್ಕುತ್ತಾರೆ? ಎಂಬುದು ನನಗಂತೂ ಗೊತ್ತಿಲ್ಲ. ಮುಖ್ಯಮಂತ್ರಿಗಳ ಕಾರ್ಯವೈಖರಿಯ ಬಗ್ಗೆ ಮಾತನಾಡುವಾಗ ಅದರ ಬಗ್ಗೆ ಮಾತನಾಡುತ್ತೇನೆ. ಅದಕ್ಕೂ ಮೊದಲು, ಸರ್ಕಾರದ ಸಾಧನೆಗಳ ಜೊತೆಗೆ ನೀವೇ ಹೇಳಿರತಕ್ಕ ವೈಫಲ್ಯಗಳೇನು ಎಂಬ ಬಗ್ಗೆ ಸ್ವಲ್ಪ ಮಾತನಾಡಬೇಕಾಗುತ್ತದೆ. 1999ರ ಭಾಷಣದಲ್ಲಿ ಇವರು ಏನು ಹೇಳಿದ್ದಾರೆಂದರೆ, ಐದು ವರ್ಷಗಳ ಅವಧಿಯೊಳಗಾಗಿ ಎಲ್ಲಾ ಗ್ರಾಮಗಳಲ್ಲಿ ದಿನವೊಂದಕ್ಕೆ ತಲಾ ಕನಿಷ್ಟ 55 ಲೀಟರ್‌ನಷ್ಟು ಪ್ರತಿಯೊಬ್ಬರಿಗೂ ನೀರನ್ನು ಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಕಂದಾಯ ಸಚಿವರೇ, ಈ ಪ್ರಾಮಿಸ್ ಏನಾಯಿತು? 55 ಲೀಟರ್ ಪ್ರತಿ ದಿನ ಕೊಡುತ್ತೇನೆಂದು ಹೇಳಿದ್ದ ತಾವು, ಕನಿಷ್ಟ ದಿನಕ್ಕೆ ತಲಾ 5 ಲೀಟರ್ ಕೊಡುತ್ತಿದ್ದೀರಾ? ಒಬ್ಬ ಮನುಷ್ಯನಿಗೆ ಒಂದು ಮನೆಗೆ ಕನಿಷ್ಟ ಐದು ಲೀಟರ್ ನೀರನ್ನು ಕೊಡಲು ಆಗಿದೆಯೇ? ನಿಮ್ಮ ಕೈಯಲ್ಲಿ ಆಗಿಲ್ಲ. ಆಮೇಲೆ ಇನ್ನೊಂದು ಹೇಳಿದರು, ಸಾಕ್ಷರತಾ ಆಂದೋಳನ ಕಾರ್ಯಕ್ರಮದಲ್ಲಿ ಶೇಕಡ 80ರಷ್ಟಕ್ಕೆ ತೆಗೆದುಕೊಂಡು ಹೋಗುವ ಬೃಹತ್ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇನೆಂದು ಹೇಳಿದ್ದೀರಿ. ಆ ಬೃಹತ್ ಕಾರ್ಯಕ್ರಮ ಎಲ್ಲಿ? ಮೂರೂವರೆ ವರ್ಷಗಳಾಯಿತು, ಆ ಕಾರ್ಯಕ್ರಮ ಎಲ್ಲಿ ಎಂದು ನಾನು ಹುಡುಕುತ್ತಿದ್ದೇನೆ. ಇದು 1999ರಲ್ಲಾದರೆ, 2000ದಲ್ಲಿ ಇವರು ಮಾಡಿರತಕ್ಕ ಘೋಷಣೆಗಳು, ಧಾರವಾಡದಲ್ಲಿ ಕೃಷಿ ಶೃಂಗಮೇಳ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವರ ಸಂಪುಟದ ಉಪ ಸಮಿತಿ, ಆ ಉಪ ಸಮಿತಿ ಏನು ತೀರ್ಮಾನ ಮಾಡಿದೆ? ಆ ಶೃಂಗ ಸಮ್ಮೇಳನದ ತೀರ್ಮಾನಗಳೇನು? ಇಲ್ಲಿಗೆ ಮೂರು ವರ್ಷಗಳಾಯಿತಲ್ಲಾ, ಅದನ್ನು ಎಷ್ಟರಮಟ್ಟಿಗೆ ಜಾರಿಗೆ ತಂದಿದ್ದೀರಾ? ಇದನ್ನು ನೀವು ಜಯಿಸತಕ್ಕದ್ದು. It is out right to demand and the Chief Minister should say whether the sub-committe has met or not and what has been done. ಇದು ನಮಗೆ ಗೊತ್ತಾಗಬೇಕು. ಇದಾದ ಮೇಲೆ ಮುಂದೆ ಹೇಳಿಕೊಂಡು ಹೋಗುತ್ತಾರೆ, ಎನ್.ಡಿ.ಬಿ. ಯಿಂದ ನಾವು 500 ಕೋಟಿ ರೂ. ಸಾಲ ತೆಗೆದುಕೊಂಡು ಬರುತ್ತಿದ್ದೇವೆ, ಎಲ್ಲಿ ಬಂದಿದೆ ಆ 500 ಕೋಟಿ ರೂಪಾಯಿ, ಏನಾಗಿದೆ ಆ

ಕಾರ್ಯಕ್ರಮ? 2002ರಲ್ಲಿ ಹೇಳಿರುವುದಲ್ಲ 2000ನೇ ಇಸವಿ ಮಾರ್ಚ್ 15ರಂದು ಮಾಡಿರತಕ್ಕ ಭಾಷಣದಲ್ಲಿ ಹೇಳಿರುವ ವಿಚಾರ ಇದು. ರೇಷ್ಮೆ ವ್ಯವಸಾಯದ ಬಗ್ಗೆ ಹೇಳಿದ್ದರು. ರೇಷ್ಮೆ ಕ್ರಾಂತಿಯಿಂದ 30 ಲಕ್ಷ ಜನರಿಗೆ ಉದ್ಯೋಗ ಕೊಟ್ಟಿದೆಯೆಂದು ಹೇಳಿದರು. ಮಾನ್ಯ ರೇವಣ್ಣನವರು ಇಲ್ಲಿ ಇವತ್ತು ಇರಬೇಕಾಗಿತ್ತು. ರೇಷ್ಮೆ ವ್ಯವಸಾಯ ಇವತ್ತು ಯಾವ ಮಟ್ಟಕ್ಕೆ ಬಂದಿದೆಯೆಂದರೆ, ಮೊನ್ನೇ ತಾನೇ ರೀಲರ್ಸ್‌ಗಳೆಲ್ಲಾ ಮುಷ್ಕರ ಮಾಡಿದ್ದರು. ಎಲ್ಲಾ ಫಾರ್ಮರ್ಸ್ they were at the mercy of reelers. ರೀಲರ್ಸ್‌ಗೆ ಕಳೆದ ಮೂರು ವರ್ಷಗಳಲ್ಲಿ 12 ಸಾವಿರದಿಂದ ಐದು ಸಾವಿರಕ್ಕೆ ಇಳಿದಿದ್ದಾರೆ. Reelers have come down. ಅವರನ್ನು ಸ್ಟ್ರೆಂಗ್ತನ್ ಮಾಡಲು ಏನು ಕ್ರಮ ತೆಗೆದುಕೊಂಡಿದ್ದೀರಾ? ಸಂಜೆಯ ಹೊತ್ತಿಗೆ ಸೀರೆ ನೇಯುವವರು ತಾವು. ನೀವು ಸೀರೆ ನೇಯಲು ಹೊರಟಿದ್ದೀರಿ. ಕಳೆದ ಮೂರು ವರ್ಷಗಳಲ್ಲಿ ಅವರನ್ನು ಸ್ಟ್ರೆಂಗ್ತನ್ ಮಾಡಿದ್ದರೆ ಅವರ ಬೈಯಿಂಗ್ ಕೆಪಾಸಿಟಿ ಜಾಸ್ತಿಯಾಗಿರುತ್ತಿತ್ತು. ಅದನ್ನು ಇವತ್ತಿಗೂ ಸಹ ಮಾಡಿಲ್ಲ. ಬೆಂಬಲ ಬೆಲೆಯ ಬಗ್ಗೆ ಹೇಳಿದ್ದೀರಿ. ದಯಮಾಡಿ ಇವತ್ತಿನವರೆಗೆ ಎಷ್ಟು ಬಿಡುಗಡೆ ಮಾಡಿದಿದೀರಿ ಹೇಳಿ. ಒಂದು ದಿನಕ್ಕೆ ಮೂರು ಕೋಟಿ ರೂಪಾಯಿ ರೇಷ್ಮೆ ನೀವು ಕೊಂಡುಕೊಳ್ಳುತ್ತೀರಿ. ಒಂದು ವರ್ಷಕ್ಕೆ ಒಂದು ಸಾವಿರ ಕೋಟಿ ರೂಪಾಯಿ ರೇಷ್ಮೆ ಗೂಡನ್ನು ಕೊಂಡುಕೊಳ್ಳತಕ್ಕ ನೀವು ಬೆಂಬಲ ಬೆಲೆಯಾಗಿ ಇದುವರೆಗೆ ಬಿಡುಗಡೆ ಮಾಡಿರತಕ್ಕದ್ದು ಕೇವಲ ಒಂದೂವರೆ ಕೋಟಿ. ತಲಘಟ್ಟಪುರದಲ್ಲಿ ಒಂದು ಸಂಸ್ಥೆ ಇದೆ. ಈ ಇನ್ಸ್‌ಸ್ಟಿಟ್ಯೂಟ್‌ನ ಸಬ್ ಬ್ರಾಂಚಸ್ ಗುಲ್ಬರ್ಗಾದ ಕಡೆಗಂಚಿನಲ್ಲಿ, ತೀರ್ಥಹಳ್ಳಿ ಮೇಲಿನಕುರುವಳ್ಳಿಯಲ್ಲಿ, ಬಿ.ಆರ್. ಹಿಲ್ಸ್‌ನಲ್ಲಿ ಊಟಿಯಲ್ಲಿದೆ. ಈ ಇನ್ಸ್‌ಸ್ಟಿಟ್ಯೂಟನ್ನು ಸಂಪೂರ್ಣವಾಗಿ ಮುಚ್ಚಲು ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನೆಲ್ಲಾ ಮಾಡಿದ್ದೀರಿ. ಒಂದು ಕಡೆ ಬಯೋ ಟೆಕ್ನಾಲಜಿ ಕ್ರಾಂತಿ ಮಾಡುತ್ತೇವೆಂದು ಹೇಳುತ್ತೀರಿ. ಇನ್ನೊಂದು ಕಡೆ The only institute which was doing some research work in sericulture is being closed down. ನಾನು ಕಾಗೋಡು ತಿಮ್ಮಪ್ಪನವರು ಚೈನಾಕ್ಕೆ ಹೋಗಿದ್ದೆವು. ಅಲ್ಲಿ ರೇಷ್ಮೆಗೆ ಏನು ಮಹತ್ವ ಕೊಟ್ಟಿದ್ದಾರೆ ಎಂಬುದನ್ನು ಗಮನಿಸಿಕೊಂಡು ಬಂದರು. How they are dumping so much silk here? What is that we are doing? ಅದನ್ನು ನೀವು ದೊಡ್ಡದಾಗಿ ನಾವು ಕ್ರಾಂತಿ ಮಾಡಿಬಿಡುತ್ತೇವೆಂದು ಭಾಷಣ ಮಾಡಿದಿರಿ. ಇದಾದ ಮೇಲೆ 2001ನೇ ಇಸವಿಯ ಭಾಷಣಕ್ಕೆ ಬರುತ್ತಿದ್ದೇನೆ, ಸ್ವಚ್ಛ ಗ್ರಾಮಗಳು, 2001ರಲ್ಲಿ ಇವರು ಮಾಡಿದ ಭಾಷಣದಲ್ಲಿ, ಸ್ವಚ್ಛ ಗ್ರಾಮಗಳು, ಒಂದು ಸಾವಿರ ಗ್ರಾಮಗಳನ್ನು ಸ್ವಚ್ಛ ಮಾಡುತ್ತೇವೆ ಒಂದೊಂದು ವರ್ಷಕ್ಕೆ ಎಂದು ಹೇಳಿದ್ದೀರಿ, ಆದರೆ ಈಗ ಆ ಕಾರ್ಯಕ್ರಮಕ್ಕೆ ಎಳ್ಳುನೀರನ್ನು ಹಾಕಿ ಬಿಟ್ಟುಬಿಟ್ಟಿದ್ದಾರೆ. ಎಲ್ಲಿ ಕಾಂಟ್ರಾಕ್ಟ್‌ದಾರರು ಹಣವನ್ನು ಕಟ್ಟಿದ್ದಾರೆ ಅಲ್ಲಿ ಸ್ವಚ್ಛ ಗ್ರಾಮದ ಕಾರ್ಯಕ್ರಮಗಳು ಕರ್ನಾಟಕದ 36,000 ಗ್ರಾಮಗಳಲ್ಲಿ ತಾವು ತೆಗೆದುಕೊಂಡಿರುವುದು ಒಂದು ಸಾವಿರ ಗ್ರಾಮಗಳು. ಇದುವರೆಗೆ ಆಗಿರುವುದು ಒಂದು ಸಾವಿರ ಗ್ರಾಮಗಳು. ಆ ಒಂದು ಸಾವಿರ ಗ್ರಾಮಗಳಲ್ಲಿ ಪೂರ್ಣವಾಗಿರತಕ್ಕದ್ದು 40-50, ಇನ್ನೂ 600 ಗ್ರಾಮಗಳಲ್ಲಿ including my constituency, ಕೆಲಸಗಳು ಪೂರ್ಣವಾಗಿಲ್ಲ. ಅವರನ್ನು ಕೇಳಿದರೆ ದುಡ್ಡಿಲ್ಲ ಎಂದು ಹೇಳುತ್ತಾರೆ. 1400 ಕೋಟಿ ರೂ. ಪೆಂಡಿಂಗ್ ಬಿಲ್ಲನ್ನು ಇಟ್ಟುಕೊಂಡು ಕೆಲಸ ಮಾಡು ಎಂದು ಗುತ್ತಿಗೆದಾರರಿಗೆ ನಾವು ಹೇಗೆ ಹೇಳುವುದು? ಸ್ವಚ್ಛ ಗ್ರಾಮಗಳ ಕೆಲಸ ಇವತ್ತು ಸಂಪೂರ್ಣವಾಗಿ ನಿಂತಿದೆ. ನಮ್ಮ ಯುವಕ ಮಿತ್ರ ಕುಮಾರ ಬಂಗಾರಪ್ಪನವರು ಬಹಳ

ಉತ್ಸಾಹದಿಂದ ಇದ್ದರು. ಬಹುಶಃ ಅದಕ್ಕೋಸ್ಕರವೇ ಅವರ ಪೋರ್ಟ್‌ಫೋಲಿಯೋವನ್ನು ಕಿತ್ತು ಬಿಸಾಕಿದರು. 2001ರಲ್ಲಿ ಇದನ್ನು ಹೇಳಿದ್ದು. ಚುನಾವಣಾ ಪ್ರಣಾಳಿಕೆಯ ಬಗ್ಗೆ ಹೇಳಲು ಹೋಗುವುದಿಲ್ಲ. ಬಹಳ ಜನಕ್ಕೆ ಕೋಪ ಬಂದುಬಿಡುತ್ತದೆ. ಈಗ ಹೊಸ ಅಧ್ಯಕ್ಷರು ಆಗಿದ್ದಾರೆ, ಅವರಿಗೂ ಇನ್ನೂ ಕೋಪ ಬಂದುಬಿಡುತ್ತದೆ. ಆದ್ದರಿಂದ ನಾನು ಅದರ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಐದು ಸಾವಿರ ಹಳೆಯ ಕೆರೆಗಳನ್ನು ಜೀರ್ಣೋದ್ಧಾರ ಮಾಡುತ್ತೇವೆ ಎಂದು ಹೇಳಿದ್ದರು. ದಯಮಾಡಿ ಹೇಳಿ 500 ಕೆರೆಗಳು ಜೀರ್ಣೋದ್ಧಾರವಾಗಿದ್ದಿದ್ದರೆ ನಾನು ನಿಮಗೆ ಶಹಭಾಸ್‌ಗಿರಿಯನ್ನು ಕೊಟ್ಟುಬಿಡುತ್ತಿದ್ದೆ. ನೀವು ದೇಶದ ನಂಬರ್ ಒನ್ ಮುಖ್ಯಮಂತ್ರಿಯಾಗುತ್ತಿದ್ದಿರಿ. ತಾವು ಮಾಡಿದ್ದ ಭರವಸೆಯಲ್ಲಿ 500 ಕೆರೆಗಳನ್ನಾದರೂ ಮಾಡಿದ್ದೀರಿ? ಆದಾದ ಮೇಲೆ, ನಮ್ಮ ಇಂಡಸ್ಟ್ರೀಯಲ್ ಲಿಕ್ವಿಡೇಷನ್ ಮಂತ್ರಿಗಳು ಏಕೋ ಬಂದಿಲ್ಲ. ಬಹುಶಃ ನಮ್ಮ ನಾಯಕರಿಗೆ ಬೀಳ್ಕೊಡುಗೆ ಮಾಡಲು ಏರ್‌ಪೋರ್ಟ್‌ಗೆ ರಾತ್ರಿ ಹೋಗಿದ್ದರು. ಮಾನ್ಯ ಹೆಗಡೆಯವರಿಗೆ ಆರೋಗ್ಯ ಸರಿಯಾಗಿಲ್ಲ, ಏರ್ ಪೋರ್ಟ್‌ಗೆ ಹೋಗಿದ್ದರು, ಲೇಟ್ ಆಗಿರಬೇಕು ಬರುವುದಕ್ಕೆ, ಅವರು ಬಂದಿದ್ದರೆ ಚೆನ್ನಾಗಿತ್ತು. 27 ಸಾವಿರ ಕೋಟಿ ರೂಪಾಯಿ ಬಂಡವಾಳ, ಒಂದು ಲಕ್ಷಕ್ಕಿಂತ ಹೆಚ್ಚು ಜನರಿಗೆ ಉದ್ಯೋಗಾವಕಾಶ, ದಯಮಾಡಿ ಸರ್ಕಾರಕ್ಕೆ ಕೇಳುತ್ತೇನೆ, ಒಂದು ಲಕ್ಷ ಬೇಡ, ಸಾಫ್ಟ್‌ವೇರ್ ಇಂಡಸ್ಟ್ರೀಸ್ ಬಿಟ್ಟು ಬಾಕಿ ಯಾವ ಇಂಡಸ್ಟ್ರೀಸ್‌ನಲ್ಲಿ ಒಂದು ಸಾವಿರ ಜನರಿಗೆ ನೀವು ಕೆಲಸ ಕೊಟ್ಟಿದ್ದೀರಾ ಎಂಬುದನ್ನು ದಯಮಾಡಿ ಹೇಳಿ, ನನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗುತ್ತೇನೆ. ನಾನು ಸುಳ್ಳು ಹೇಳಿದ್ದರೆ. ಏಕೆ ಈ ತರಹದ ಬೊಗಳೆ ಭಾಷಣಗಳನ್ನು ನೀವು ಮಾಡುವುದಕ್ಕೆ ಹೋಗುತ್ತೀರಿ. ಅದಕ್ಕೆ ಎಂತದ್ದೋ ವಿಶ್ವಮೇಳ ಅಂತೆ. ಮಾನ್ಯ ಅಧ್ಯಕ್ಷರೇ, 2001ರ ರಾಜ್ಯಪಾಲರ ಭಾಷಣದ ಪೇಜ್ 28ರಲ್ಲಿ "ವಿವಿಧ ವಲಯಗಳಲ್ಲಿ ಸುಧಾರಣೆಗಳನ್ನು ತರುವುದಕ್ಕಾಗಿ ಕರ್ನಾಟಕ ರಾಜ್ಯಕ್ಕೆ 12 ಸಾವಿರ ಕೋಟಿ ರೂಪಾಯಿಗಳ ವಿಶ್ವ ಬ್ಯಾಂಕ್ ಸಾಲ...." ಎಂದು ಸರ್ಕಾರದವರು ಹೇಳಿದ್ದಾರೆ. I request the Chief Minister, I`urge upon him, ಯಾವ್ಯಾವ ಬಾಬಿಗೆ ಸಾಲ ತಂದಿದ್ದೀರಿ ಎಂಬುದನ್ನು ತಿಳಿಸಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಈಗ ಕೇಂದ್ರ ಸರ್ಕಾರವೂ reform ಮಾಡುತ್ತಿದೆ. ಕೇಂದ್ರ ಸರ್ಕಾರ It is for reformation. Nobody can stop this. ನಾವೆಲ್ಲಾ ಈ ಪ್ರವಾಹದಲ್ಲಿ ಮುಳುಗಿ ಹೋದೆವು. ಇವತ್ತಿನ ಜಗತ್ತಿನ ಜಾಗತೀಕರಣದ ಹಿನ್ನೆಲೆಯಲ್ಲಿ ನಾವೆಲ್ಲಾ ಮುಳುಗಿ ಹೋಗಿದ್ದೇವೆ. ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ದುಡಿಯುವ ವರ್ಗದವರು, ಮಧ್ಯಮ ವರ್ಗದ ಕುಟುಂಬಗಳು ಸಂಪೂರ್ಣವಾಗಿ ನಾಶವಾಗಿವೆ, ಈಗ ನಾನು ನಿಮ್ಮನ್ನು ಕೇಳುತ್ತಿದ್ದೇನೆ, 12 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಯಾವ್ಯಾವ ಬಾಬತ್ತಿಗೆ ತಂದಿದ್ದೀರಿ ಎನ್ನುವುದನ್ನು ಈ ಸದನಕ್ಕೆ ತಿಳಿಸಬೇಕು. ಏಕೆಂದರೆ ಇದು ಪವಿತ್ರವಾಗಿರತಕ್ಕಂಥ ಭಾಷಣ. 12 ಸಾವಿರ ಕೋಟಿ ರೂಪಾಯಿಗಳನ್ನು ಇಂಥಿಂಥ ಬಾಬತ್ತಿನಲ್ಲಿ ನಾವು ಸಾಲ ತೆಗೆದುಕೊಂಡು ಬಂದಿದ್ದೇವೆ ಅನ್ನುವುದನ್ನು ತಾವು ತಿಳಿಸಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಅಂದರೆ 2002ರಲ್ಲಿ ಇವರು ಭಾಷಣದಲ್ಲಿ ಹೇಳಿರತಕ್ಕಂಥ 2-3 ಮಾತುಗಳನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 2002ರ ರಾಜ್ಯಪಾಲರ ಭಾಷಣದಲ್ಲಿ 2001ನಲ್ಲಿ 1 ಲಕ್ಷ ಉದ್ಯೋಗ, 27 ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಕೊಟ್ಟಿದ್ದೇವೆ, 2002ರಲ್ಲಿ 45 ಸಾವಿರ ಜನರಿಗೆ

ಉದ್ಯೋಗ ಕೊಡುತ್ತೇವೆ ಎಂದು ಹೇಳಿದ್ದಾರೆ 45 ಸಾವಿರ ಜನರಿಗೆ ಉದ್ಯೋಗ. ಎಲ್ಲಿ ಕೊಟ್ಟಿದ್ದೀರಿ? ನನಗಂತೂ ಅರ್ಥವಾಗುತ್ತಿಲ್ಲ. ಅದರ ಜೊತೆಗೆ ಶಾದಿ ಮಹಲ್‌ಗಳನ್ನು ಕಟ್ಟಿಸಿದ್ದೇವೆ ಎಂದು ಸರ್ಕಾರ ಹೇಳಿಕೊಂಡಿದೆ. ಮಾನ್ಯ ರೋಷನ್ ಬೇಗ್‌ರವರೇ, ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರ, ನೀವು ಆ ಪಕ್ಷಕ್ಕೆ ಹೋದ ಮೇಲೆ ಅಧಿಕಾರಕ್ಕೆ ಬಂದಂತಹ ಸರ್ಕಾರ, ಎಷ್ಟು ಶಾದಿ ಮಹಲ್‌ಗಳನ್ನು ಕಟ್ಟಿದೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕು ಎನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ನಾನು ಬಹಳ ಪ್ರಮುಖವಾಗಿ ಪ್ರಸ್ತಾಪ ಮಾಡತಕ್ಕಂಥ ವಿಚಾರವೇನೆಂದರೆ, ಈ ಸರ್ಕಾರ ಯಾರಿಗೂ ಬೇಡದ ಸರ್ಕಾರವಾಗಿದೆ. ಯಾರಿಗೂ ಈ ಸರ್ಕಾರದ ಬಗ್ಗೆ ಅಭಿಮಾನ ಇಲ್ಲ. ನಮ್ಮ ಅಂಜನಮೂರ್ತಿಯವರು ಏಕೋ ಸಭೆಗೆ ಬಂದಿಲ್ಲ, ಬಹುಶಃ ತಡವಾಗಿ ಬರಬಹುದು. ಅವರಿಗೆ ಈ ಸರ್ಕಾರ ಬೇಕಾಗಿಲ್ಲ. ಅವರಿಗೊಂದು ಆಯೋಗವೆಂದು ಮಾಡಿದ್ದೀರಿ. ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಕೃಷ್ಣಪ್ಪನವರು ಈಗ ತಾನೇ ಸದನದಿಂದ ಎದ್ದು ಹೋದರು ಎಂದು ಕಾಣುತ್ತದೆ. ಎಸ್.ಸಿ:ಎಸ್.ಟಿ. ಆಯೋಗ ಎಂದು ಮಾಡಿದ್ದಾರೆ. ಆ ಆಯೋಗಕ್ಕೆ ಅಧಿಕಾರವೇ ಇಲ್ಲ, ಅಂಜನಮೂರ್ತಿಯವರಿಗೆ ಈ ಸರ್ಕಾರ ಬೇಕಾಗಿಲ್ಲ. ಇದು ಬೇಡದ ಕೂಸು. ಆಮೇಲೆ ಅಖಿಲ ಭಾರತ ವೀರಶೈವ ಮಹಾಸಭಾ ಉಪಾಧ್ಯಕ್ಷರಾದ ಮಾನ್ಯ ಬೆಲ್ಲದ್‌ರವರಿಗೆ ಇದು ಬೇಡದ ಸರ್ಕಾರವಾಗಿದೆ. ಇನ್ನು ಮಾನ್ಯ ಆತ್ಮಾನಂದವರ ಬಗ್ಗೆ ನಾನು ಮಾಡನಾಡುವುದಕ್ಕೆ ಹೋದರೆ, ಪಾಪ, ಅವರು ಬಹಳ ಬೇಸರವನ್ನು ಮಾಡಿಕೊಂಡು ಬಿಡುತ್ತಾರೆ. ಮಾನ್ಯ ಮಾದೇಗೌಡರಿಗೆ ಇದು ಬೇಡದ ಸರ್ಕಾರ. ಏಕೆ ಇದು ಬೇಡದ ಸರ್ಕಾರವಾಗಿದೆ ಎಂದು ನಾನು ಹೇಳುತ್ತೇನೆ. ಸ್ವಾಮಿ, ನಿಮ್ಮ ಕಾಂಗ್ರೆಸ್ ಸರ್ಕಾರ ಯಾವ ಆಧಾರದ ಮೇಲೆ ಅಧಿಕಾರಕ್ಕೆ ಬಂತು? On whose name you have come to the power. ಇದು ಗೊತ್ತಾಗಬೇಕು. ನೀವು People's power ನಿಂದ ಅಧಿಕಾರಕ್ಕೆ ಬಂದಿದ್ದೀರಿ. People ಅಂದರೆ ಯಾರು ಇವರು? ನಿಮ್ಮ ವೈಫಲ್ಯಗಳ ಬಗ್ಗೆ ನಾನು ಈಗ ಮಾತನಾಡುತ್ತಿದ್ದೇನೆ. ಕಳೆದ ರಾಜ್ಯಪಾಲರ ಐದು ಭಾಷಣಗಳಲ್ಲಿ ತಾವೇನು ಘೋಷಣೆಗಳನ್ನು ಮಾಡಿಸಿದ್ದೀರಿ ಎಂಬ ಬಗ್ಗೆ ನಾನಿಲ್ಲಿ ಹೇಳುತ್ತಿದ್ದೇನೆ. ಕಳೆದ ರಾಜ್ಯಪಾಲರ ಭಾಷಣಗಳಲ್ಲಿ ತಾವು 290 ಪ್ರಾಮಿಸ್‌ಗಳನ್ನು ಮಾಡಿ, ಅದರಲ್ಲಿ ಕೇವಲ 10 ಕೆಲಸಗಳನ್ನು ಮಾಡಿ, ನಂಬರ್ ಒನ್ ಮುಖ್ಯಮಂತ್ರಿಗಳು ಎಂದು ಬರೆಸಿಕೊಂಡಿದ್ದೀರಿ. ನಿಮ್ಮ ಸರ್ಕಾರದ ಸಾಧನೆಗಳೇನು? ನೀವು ಯಾರ ಆಧಾರದ ಮೇಲೆ ಅಧಿಕಾರಕ್ಕೆ ಬಂದಿದ್ದೀರಿ ಎಂಬುದನ್ನು ಮರೆತು ಬಿಟ್ಟಿದ್ದೀರಿ. ಮಾನ್ಯ ಅಧ್ಯಕ್ಷರೇ, ನಾನು ಈ ಸದನದ ಕಾರ್ಯಕಲಾಪಗಳನ್ನು ಇಲ್ಲಿ ಬಂದಾಗಿನಿಂದ ಅಂದರೆ, 1970 ರಿಂದಲೂ ನೋಡುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಸಿಂಧ್ಯಾರವರೇ, 'ಬರೆಸಿಕೊಂಡರು' ಎಂದೇಳಿ ಮಾಧ್ಯಮಗಳಿಗೆ ನೀವು ಛೇಡಿಸ್ಬೇಡಿ. ಬರೆದವರು ಯಾರು? ಬರೆಸಿದವರು ಯಾರು ಎಂಬುದನ್ನಾದರೂ ಹೇಳಿ. 'ಬರೆಸಿಕೊಂಡಿದ್ದೀರಿ' ಎಂದು ನೀವು ಹೇಳಿ, ಅಂತಹ ಪ್ರಖ್ಯಾತ ಪತ್ರಿಕೆಗಳಿಗೆಲ್ಲಾ ಅಪಚಾರ ಮಾಡಿ ಬಿಟ್ಟರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ಯಾರ ಮತಗಳ ಆಧಾರದ ಮೇಲೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ? 1970 ರಿಂದ 1999 ರವರೆಗೂ ಸಹಿತ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಗಳನ್ನು ಓದೋಣ. ಯಾರು ನಿಮಗೆ ಓಟು ಕೊಡುವವರು ಎಂದು

ನೀವು ಹೇಳಿಕೊಳ್ಳುತ್ತಿದ್ದೀರಿ? ನಿಮಗೆ ಅವರು ಓಟು ಕೊಡುತ್ತಾರೋ ಇಲ್ಲವೋ ಅದು ಬೇರೆ ವಿಚಾರ. ನೀವು ಮಾತೆತ್ತಿದ್ದರೆ reserved vote, scheduled caste, back ward classes, minority communities, ಈ ಮೂರು ವರ್ಗದ ಜನ ನಿಮ್ಮ ಓಟಿನ ಬ್ಯಾಂಕ್. ನೀವು ಅವರಿಗೆ ಎಷ್ಟೊಂದು ಕೃತಘ್ನರಾಗಿದ್ದೀರಿ ಎಂಬುದನ್ನು ನಾನು ಇವತ್ತು ಹೇಳಬೇಕಾಗುತ್ತದೆ. ಈ ವರ್ಗಗಳ ಬಗ್ಗೆ How much gratitude you are having? ಗಂಗಾ ಕಲ್ಯಾಣ ಕಾರ್ಯಕ್ರಮಕ್ಕೆ ಸಂಪೂರ್ಣವಾಗಿ ತಿಲಾಂಜಲಿ ಹಾಕಿದ್ದೀರಿ. ಏಕೆ ಎಂಬ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕು. That was the only programme which was helping the scheduled caste people. ಇವತ್ತು ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿದ 50 ಜನ ಶಾಸಕರು ಈ ಸದನದಲ್ಲಿದ್ದಾರೆ. ಮಾನ್ಯ ತಿಮ್ಮಪ್ಪನವರು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿದ್ದಿರಿ. ಒಂದು ಕೊಟ್ಟಿರಿ, ಅಣೇಲೆ ಐದು ಕೊಟ್ಟಿರಿ, ಅಮೇಲೆ ನಿಲ್ಲಿಸಿಯೇ ಬಿಟ್ಟಿದ್ದೀರಿ. ಮಾನ್ಯ ಅಧ್ಯಕ್ಷರೇ, ಈಗ ಗಂಗಾ ಕಲ್ಯಾಣದ ಕಾರ್ಯಕ್ರಮವನ್ನು ಈ ಸರ್ಕಾರ ಸಂಪೂರ್ಣವಾಗಿ ನಿಲ್ಲಿಸಿದೆ. ವಿದ್ಯುಚ್ಛಕ್ತಿಯ ಕನೆಕ್ಷನ್‌ಗಳನ್ನು ಕೊಡುತ್ತಿಲ್ಲ. ಬೋರ್‌ವೆಲ್‌ಗಳನ್ನು ಹಾಕಬೇಕೆಂದರೆ 'ದುಡ್ಡಿಲ್ಲ' ಎಂದೇಳಿ ಯಾರೂ ಬೋರ್‌ವೆಲ್ ಹಾಕುವುದಕ್ಕೆ ರಿಗ್‌ನವರೇ ಬರುವುದಿಲ್ಲ. ಮಾನ್ಯ ಅಧ್ಯಕ್ಷರೇ, Public Service Commission ಇದೆ. ಮಾನ್ಯ ರಂಗನಾಥ್‌ರವರು ಸದನಕ್ಕೆ ಇನ್ನೂ ಬಂದಿಲ್ಲ, ಮಾನ್ಯ ತಿಮ್ಮಪ್ಪನವರು ನಾನು ಹೇಳುವುದನ್ನು ಗಮನಿಸುತ್ತಾರೆಂದು ಅಂದುಕೊಂಡಿದ್ದೇನೆ. ಮಾನ್ಯ ತಿಮ್ಮಾಪ್ಪೂರ್‌ರವರ ಮಾತೇನು ನಡೆಯುವುದಿಲ್ಲ, ಅದಕ್ಕೋಸ್ಕರ ಹೇಳುತ್ತಿದ್ದೇನೆ. Public Service Commissionನಲ್ಲಿ ಜುಲೈ 2002 ರಂದು ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿದ ಒಂದು ಮೆಂಬರ್ ಶಿಪ್ ಖಾಲಿಯಾಯಿತು. One Mr. Nagaraj was there, as a PSC member. ಆ ಹುದ್ದೆ ಖಾಲಿಯಾಗಿ 6-8 ತಿಂಗಳಾಗಿದೆ. ಈ ನಡುವೆ 3000 ಜನರಿಗೆ Public Service Commission ನವರು ರೆಕ್ರೂಟ್ ಮಾಡಿದ್ದಾರೆ. ಈ ಸರ್ಕಾರದವರು ಹರಿಜನರ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿದ್ದಾರೆ. ಆ Public Service Commissionನ ಖಾಲಿ ಇರುವ ಒಬ್ಬ ಮೆಂಬರ್ ಹುದ್ದೆಗೆ recruitment ಮಾಡಲು ನಿಮ್ಮ ಕೈಯಲ್ಲಿ ಆಗುವುದಿಲ್ಲವೇ? ನಿಮಗೆ ಬಂದಿರುವ ತೊಂದರೆ ಏನು? ಹಾಗಿದ್ದರೆ, ರಿಕ್ರೂಟ್‌ಮೆಂಟ್ ನಿಂತು ಹೋಗಿದೆಯೇ? Yes, according to the Public Service Commission's rules, ಏಳು ಜನ ಮೆಂಬರ್ಸ್‌ನಲ್ಲಿ ಕೋರಂ ಐದು ಜನ ಮೆಂಬರ್ಸ್ ಇದ್ದರೆ ಸಾಕು. ಈಗ ಅಲ್ಲಿ ಐದು ಜನ ಇದ್ದಾರೆ, ರಿಕ್ರೂಟ್‌ಮೆಂಟ್ ನಡೆಯುತ್ತಿದೆ. ಒಂದು ಷೆಡ್ಯೂಲ್ಡ್ ಕ್ಯಾಸ್ಟ್ ಸೀಟು, ಇನ್ನೊಂದು ಬ್ಯಾಕ್‌ವರ್ಡ್ ಕ್ಲಾಸ್ ಸೀಟ್ ಅಲ್ಲಿ ಖಾಲಿ ಇದೆ. 2002ರ ಜುಲೈನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಸೀಟ್ ವೇಕೆಂಟ್ ಆಯಿತು. 2000ರ ಆಗಸ್ಟ್‌ನಲ್ಲಿ ಬ್ಯಾಕ್‌ವರ್ಡ್ ಕ್ಲಾಸ್‌ನ ಮುನಿಕೃಷ್ಣ ರಿಟೈರ್ಡ್ ಆದರು. ಆ ಖಾಲಿ ಹುದ್ದೆಗೂ ಸಹ ಏಕೆ ನೀವು appointment ಮಾಡುವುದಕ್ಕಾಗಿಲ್ಲ? 60 ಜನ ಬೋರ್ಡ್ಸ್, ಕಾರ್ಪೊರೇಷನ್ ಛೇರ್ಮನ್‌ಗಳನ್ನು appointment ಮಾಡಿದ್ದಾರೆ ನೀವು ಯಾವ consideration ಮೇಲೆ ಅವರ ನೇಮಕಾತಿ ಮಾಡಿದ್ದೀರಿ? ಆ 60 ಜನಗಳಲ್ಲಿ ಕೇವಲ 9 ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿದವರನ್ನು ನೀವು ನೇಮಕ ಮಾಡಿದ್ದೀರಿ. ಶ್ರೀಮತಿ ಮೋಟಮ್ಮನವರು ಇದನ್ನು ಗಮನಿಸಬೇಕು Out of the 60 Boards and Corporation's Chairman, only 9 belongs to Scheduled Caste. How many belong to OBC? Only 8. ನಾಚಿಕೆಯಾಗುವುದಿಲ್ಲವೇ ನಮಗೆ?

ನಿಮಗೆ ನಾಚಿಕೆಯಾಗಬೇಕೋ ನಮಗೆ ನಾಚಿಕೆಯಾಗಬೇಕೋ? Scheduled Caste, Backward Classes ಬಗ್ಗೆ ನೀವು ಮಾತನಾಡುತ್ತೀರಿ. ಒಬ್ಬ Public Service Commission Member ಅನ್ನು ನೀವು appointment ಮಾಡುವುದಕ್ಕಾಗಿಲ್ಲ. ನೀವು ಯಾರಿಗಾದರೂ ಮಾಡಿ. ಎಡಗೈ ಮಾಡಿ, ಬಲಗೈ ಮಾಡಿ, ಬೋವಿಗಳನ್ನು ಮಾಡಿ, ಕೊರಚರನ್ನು ಮಾಡಿ, ಕೊರವರನ್ನು ಮಾಡಿ, ಯಾರನ್ನು ಬೇಕಾದರೂ ಮಾಡಿ. ನೇಮಕ ಮಾಡುವುದಕ್ಕೆ ನಿಮಗೆ ತೊಂದರೆ ಏನಾಗಿದೆ? ಅದನ್ನು ನೀವು ಮಾಡುವುದಕ್ಕಾಗಿಲ್ಲ. ಬೋರ್ಡ್ಸ್ ಮತ್ತು ಕಾರ್ಪೋರೇಷನ್‌ಗಳಲ್ಲಿ 60 ಜನರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಕೇವಲ 9 ಜನ ಮಾತ್ರ. ಓಬಿಸಿಗಳು 8 ಜನ ಮಾತ್ರ. 175 Boards and Corporation's Members ಅನ್ನು ನೇಮಕಾತಿ ಮಾಡಿದ್ದೀರಿ. ಅದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಎಷ್ಟು ಜನರಿದ್ದಾರೆ ಎಂಬುದನ್ನು ಮಾನ್ಯ ತಿಮ್ಮಾಪೂರ್‌ರವರೇ, ತಾವು ಏನಾದರೂ ಲೆಕ್ಕ ಹಾಕಿಸಿದ್ದೀರಾ? ಅವರಲ್ಲಿ ಐದು ಜನ ಮಾತ್ರ ಎಸ್.ಸಿ. ಯವರು ಇದ್ದಾರೆ. Out of 175 Boards and Corporation's Members, which this Government has nominated, only five people belong to Scheduled Caste. ನಿಮ್ಮ ಕಣ್ಣಿಗೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಕಾಣಿಸುವುದಿಲ್ಲವೇ? ಓಟು ತೆಗೆದುಕೊಳ್ಳುವಾಗ ಮಾತ್ರ ಷೆಡ್ಯೂಲ್ಡ್ ಕ್ಯಾಸ್ಟ್ ಏರಿಯಾಗಳಿಗೆ ಹೋಗುತ್ತೀರಿ, ಅಂಬೇಡ್ಕರ್ ಹೆಸರು ಹೇಳುತ್ತೀರಿ, ಜಗಜೀವನರಾಮ್ ಹೆಸರು ಹೇಳುತ್ತೀರಿ, ಅವರನ್ನು ನಾಮಿನೇಟ್ ಮಾಡತಕ್ಕಂಥ ಕೆಲಸವನ್ನು ನೀವು ಮಾಡುವುದಿಲ್ಲ, ನಮ್ಮ ಪಾರ್ಟಿಯವರನ್ನು ನೀವು ಮಾಡುವುದಕ್ಕೆ ಹೋಗಬೇಡಿ. ನಿಮ್ಮ ಪಾರ್ಟಿಯವರನ್ನೇ ನೇಮಕ ಮಾಡುವುದಕ್ಕೆ ನಿಮಗೆ ತೊಂದರೆ ಏನಾಗಿತ್ತು? I would like to question this Government. SC/ST Corporation ಗೆ ಹಣ ಕೊಟ್ಟಿರುವುದು ಮಾನ್ಯ ತಿಮ್ಮಪ್ಪನವರ ಕಾಲಕ್ಕೇ ಮುಗಿಯಿತು. You took an initiative, but it stopped there. ಇವತ್ತು SC/ST Corporationನಲ್ಲಿ there is no money. ರಾಜ್ಯ ಸರ್ಕಾರದಿಂದ ಅವರಿಗೇ ದುಡ್ಡೇ ಕೊಟ್ಟಿಲ್ಲ ಇವತ್ತು ನಾನು ಕೇಂದ್ರ ಸರ್ಕಾರದ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ನಮ್ಮ ಲೋಕ ಸಭಾ ಸದಸ್ಯರುಗಳ ಜೊತೆಯಲ್ಲೂ ಸಹ ಮಾತನಾಡಿದ್ದೇನೆ. ನೀವು SCP ಕಾಂಪೋನೆಂಟ್‌ನಲ್ಲಿ ಪ್ರಪೋಸಲ್‌ಗಳನ್ನೇ ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ಕಳುಹಿಸುವುದಿಲ್ಲ. Why you have neglected this? ಏಕೆ ನೀವು ನೆಗ್ಲೆಟ್ ಮಾಡಿದ್ದೀರಿ. otherwise, ನೀವು ಸಬ್‌ಮಿಟ್ ಮಾಡಿದ್ದರೆ, ಉತ್ತರ ಕೊಡುವಾಗ ಇಷ್ಟು ಪ್ರಪೋಸಲ್ಸ್ ಸಬ್‌ಮಿಟ್ ಮಾಡಿದ್ದೇವೆ, ಇದು ಅಪ್ರೂವಲ್ ಮಾಡಿಲ್ಲ ಎಂದು ದಯವಿಟ್ಟು ನಮಗೆ ತಿಳಿಸಿ. So, I say, this Government is anti-Dalit. ನೀವು ಹರಿಜನರ ವಿರೋಧಿ ಸರ್ಕಾರ ಇದು. ಇಲ್ಲದೇ ಹೋಗಿದ್ದರೆ, ನನಗೆ ಕನ್‌ವಿನ್ಸ್ ಮಾಡಿ. 150 ಜನ ಬೋರ್ಡ್ಸ್ ಡೈರೆಕ್ಟರ್ ಅಂಡ್ ಮೆಂಬರ್ಸ್ ಪೈಕಿ ನಿಮಗೆ ಕೇವಲ ಐದು ಜನ ಮಾತ್ರ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಕಂಡರೇ? 60 ಜನ ಕಾರ್ಪೋರೇಷನ್ಸ್ ಅಧ್ಯಕ್ಷರ ಪೈಕಿ ಅಷ್ಟೇ ಜನಗಳೇ ನಿಮ್ಮ ಕಣ್ಣಿಗೆ ಬಿದ್ದರೇನು ನೀವೆಲ್ಲಾ ದೇವರಾಜ್ ಅರಸ್‌ರವರ ಶಿಷ್ಯರು, ಗೋಪಾಲಗೌಡರ ಶಿಷ್ಯರು, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಬ್ಯಾಕ್‌ವರ್ಡ್ ಕ್ಲಾಸಸ್ ಬಗ್ಗೆ ಏಕೆ ಇಷ್ಟು ಅನಾದರ? ಅಮೇಲೆ ಎಸ್.ಸಿ : ಎಸ್.ಟಿ. ಗಳಿಗೆ ಮಂತ್ರಿಮಂಡಲದಲ್ಲಿ ಯಾವ ರೀತಿಯಾದ ಸ್ಥಾನ ಕೊಟ್ಟಿದ್ದೀರಿ? ಪಾಪ, ತಿಮ್ಮಾಪೂರ್‌ರವರು ಸ್ಟೇಟ್ ಮಿನಿಸ್ಟರ್ ಆಗಿದ್ದರು, ಕ್ಯಾಬಿನೆಟ್ ಮಾಡಿ ಎಂದು ಕೇಳಿಕೊಂಡಿದ್ದರು,

ಅವರನ್ನು ಕ್ಯಾಬಿನೆಟ್ ದರ್ಜೆಗೆ ಏರಿಸಿದರು. ಅವರಿಗೆ ಯಾವ portfolio ಕೊಟ್ಟಿದ್ದಾರೆ? 'ಅಂಕಿ ಅಂಶಗಳು'. ಪುಸ್ತಕ ಓದಿಕೊಂಡು ನೀನು ಇರಪ್ಪ ಎಂದೇಳಿ. ಆ ಚೌಹಾಣ್‌ಗೆ ವಾಚನಾಲಯ ಕೊಟ್ಟಿದ್ದೀರಿ. ಆ ಶಿವಣ್ಣನವರಿಗೆ ತೋಟಗಾರಿಕೆ, ಶ್ರೀಮತಿ ಸುಮಾ ವಸಂತ್‌ಗೊಂದು ಮುಜರಾಯಿ ಎಂದು ಕೊಟ್ಟು ಕೂರಿಸಿದ್ದೀರಿ. ಇವರೆಲ್ಲಾ ನಿಮ್ಮ ಸರ್ಕಾರದ ಮಂತ್ರಿಮಂಡಲದಲ್ಲಿ ಇರುವ ಷೆಡ್ಯೂಲ್ಡ್ ಕ್ಯಾಸ್ಟ್ ಮಂತ್ರಿಗಳು. ಆದರೆ ಪವರ್ ಮಾತ್ರ ನಿಮ್ಮ ಕೈಯ್ಯಲ್ಲೇ ಇರಬೇಕು. ಫೈನಾನ್ಸ್ ಇರಬೇಕು, ಪವರ್ ಇರಬೇಕು, ಬೆಂಗಳೂರ್ ಡೆವಲಪ್‌ಮೆಂಟ್ ಇರಬೇಕು, ಕೆಐಎಡಿಬಿ ಇರಬೇಕು, ಕೆಯುಡಬ್ಲ್ಯೂಡಿ ಇರಬೇಕು, ಇಂಟೆಲಿಜೆನ್ಸ್ ಬೇಕು, ಡಿಪಿಎಆರ್ ಬೇಕು, ಯಾವ ಪವರ್ ನಿಮಗೆ ಬೇಕಾಗಿಲ್ಲ? ಯಾವುದು ನಿಮಗೆ ಬೇಕಾಗಿಲ್ಲ ಎಂದು ಹೇಳಿ ನೋಡೋಣ. ಎಲ್ಲಾ ಅಧಿಕಾರವನ್ನೂ ಕೂಡ ನೀವು ಸೆಂಟ್ರಲೈಸ್ ಮಾಡಿ ಇಟ್ಟುಕೊಳ್ಳುತ್ತೀರಿ.

10.40 ಎ.ಎಂ.

ಈ ಮಂತ್ರಿಗಳಿಗೆ ಯಾವ ತರಹ ಅಧಿಕಾರ ಹಂಚಿದ್ದಾರೆ, ಅದೇ ತರಹ ಶೆಡ್ಯೂಲ್ಡ್ ಕ್ಯಾಸ್ಟ್ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಅಧಿಕಾರವನ್ನು ಹಂಚಿದ್ದಾರೆ. For the first time in the history of Karnataka, IAS, IPS and IFS are divided on the caste lines.

ಇದನ್ನು ದಯವಿಟ್ಟು ಮಾಡುವುದಕ್ಕೆ ಹೋಗಬೇಡಿ. ನೀವು ಪರ್ಮನೆಂಟ್ ಆಗಿ ಇರುವುದಿಲ್ಲ. ಬ್ಯಾಕ್‌ವರ್ಡ್ ಕ್ಲಾಸ್ ಶೆಡ್ಯೂಲ್ಡ್ ಕ್ಯಾಸ್ಟ್ ಕಮಿಟ್‌ಮೆಂಟ್ ಇರತಕ್ಕಂತಹ ಅಧಿಕಾರಿಗಳಿಗೆ that this government is not protecting us... ಎನ್ನುವ ಭಾವನೆ ಬರುತ್ತದೆ. You must set a right. There is still time. ಒಂದೂವರೆ ವರ್ಷ ಸಮಯ ಇದೆ. ಸೆಟ್‌ರೈಟ್ ಮಾಡಿಕೊಳ್ಳಿ. ಮಾನ್ಯ ತಿಮ್ಮಪ್ಪನವರೇ, ನಾನು ಪಾಲಿಟಿಕ್ಸ್ ಮಾಡುತ್ತಿಲ್ಲ. You should know the position of our party. ನಾನು ಪಾಲಿಟಿಕ್ಸ್ ಮಾಡುತ್ತಿಲ್ಲ. ಈ ಜನಗಳ ಹೆಸರಿನಲ್ಲಿ ನೀವು ಅಧಿಕಾರಕ್ಕೆ ಬಂದಿರಿ. ಎಷ್ಟು ಅಂಬೇಡ್ಕರ್ ಭವನಗಳನ್ನು ಕಟ್ಟಿದ್ದೀರಿ ತಾವು ದಯವಿಟ್ಟು ಹೇಳಿ. Every day atrocities on scheduled castes is increasing because the Hon'ble Home Minister has completely lost the grip over the SPS. ಏಕೆಂದರೆ ಎಸ್‌ಪಿಗಳಿಗೆ ಹೆದರಿಕೆ ಇದೆ. ಡಿಸಿಗಳಿಗೆ ಯಾವ ಗಳಿಗೆಯಲ್ಲಿ ಏನು ಮಾಡುತ್ತಾರೋ ಎಂಬ ಹೆದರಿಕೆ ಇದೆ. ಡಿಸಿಯವರು ಮಂತ್ರಿ ಸಾಸನೂರ್‌ರವರ ಮಾತು ಕೇಳುವುದಿಲ್ಲ. ಎಸ್‌ಪಿ, ಡಿಸಿಗಳಿಗೆ ಆರು-ಆರು ತಿಂಗಳುಗಳಿಗೆ ಎತ್ತಂಗಡಿ ಮಾಡುತ್ತೀರಿ. ಆಗಲೇ ನಾನು ಇರಲಿಲ್ಲ, ಶೇಷಾದ್ರಿ ಗವಾಯಿಯವರು ತೀರಿಕೊಂಡರು, ಅವರ ಅಂತ್ಯಕ್ರಿಯೆಗೆ ಹೋಗಿದ್ದೆ. ಬಹಳ ಸೀರಿಯಸ್ ಛಾರ್ಜಸ್‌ನ್ನು ಮಾನ್ಯ ರಾಮದಾಸ್‌ರವರು ಮಾಡಿದ್ದಾರೆ. What is the answer the chief minister has given for that? ಒಬ್ಬ ಡಿಸಿಗೆ ಒಂದು ಜಾಗಕ್ಕೆ ಹಾಕಿದರೆ, ಒಬ್ಬ ಎಸ್‌ಪಿಗೆ ಒಂದು ಜಾಗಕ್ಕೆ ಹಾಕಿದರೆ ಮಿನಿಮಮ್ ಮೂರು ವರ್ಷ, ನಾಲ್ಕು ವರ್ಷ ಎರಡು ವರ್ಷಗಳಾದರೂ ಅಲ್ಲಿ ಇಡದೆ ಆರು-ಆರು ತಿಂಗಳುಗಳಿಗೆ ಎತ್ತಂಗಡಿ ಮಾಡುತ್ತಾರೆ. ಜಿಲ್ಲಾ ಮಂತ್ರಿಗಳು ಹೇಳುತ್ತಾರಾ? ನನಗೆ ಗೊತ್ತಿರುವ ಹಾಗೆ ಯಾವ ಜಿಲ್ಲಾ ಮಂತ್ರಿಗಳ ಮಾತೂ ನಡೆಯುವುದಿಲ್ಲ. ಯಾವ ಜಿಲ್ಲಾ ಮಂತ್ರಿಗಳ ಮಾತೂ ಕೇಳಿಕೊಂಡು

ಎಸ್‌ಪಿ ಡಿಸಿಗಳಿಗೆ ಹಾಕಿಲ್ಲ, ಹಾಕುವುದೂ ಇಲ್ಲ. The whole power is with the Chief Minister. ಇದು ಆದ ಮೇಲೆ ನೀವು ಪ್ಲಾನ್ ಕಟ್ ಮಾಡುವಾಗ ಕನಿಷ್ಟ ಪಕ್ಷ ಯಾರ ಹೆಸರಿನಲ್ಲಿ ನೀವು ಅಧಿಕಾರಕ್ಕೆ ಬಂದಿದ್ದೀರಿ, ಶೆಡ್ಯೂಲ್ ಕ್ಯಾಸ್ಟ್ ಬ್ಯಾಕ್‌ವರ್ಡ್ ಕ್ಲಾಸ್ ಹೆಸರಿನಲ್ಲಿ ಅಲ್ಲಿಯಾದರೂ ಪ್ಲಾನ್ ಕಟ್ ಎಕ್ಸಮ್‌ಷನ್ ಮಾಡಿದ್ದೀರಾ? ಅಲ್ಲಿ 10 ಪರ್ಸೆಂಟ್ ಪ್ಲಾನ್ ಎಸ್‌ಸಿಪಿಯಲ್ಲಿ ಕಟ್ ಮಾಡಿದ್ದೀರಿ. ಒಬಿಸಿನಲ್ಲಿ ಕಟ್ ಮಾಡಿದ್ದೀರಿ ಇದಾದ ಮೇಲೆ ನಿಗಮ ಮಂಡಳಿಗಳಲ್ಲಿ ಏನಾಯಿತು? ಬ್ಯಾಕ್‌ವರ್ಡ್ ಕ್ಲಾಸ್‌ಗೆ ಗಂಗಾ ಕಲ್ಯಾಣ, ಯೋಜನೆ ಇದೆ. ಯಾರು ಬ್ಯಾಕ್‌ವರ್ಡ್ ಕ್ಲಾಸ್ ಮಿನಿಸ್ಟರ್ ಎಂದು ನನಗೆ ಇನ್ನು ಸರಿಯಾಗಿ ಗೊತ್ತಿಲ್ಲ. ನಾನು ಮಾನ್ಯ ಕೃಷ್ಣಪ್ಪನವರು ಎಂದು ಅಂದುಕೊಂಡಿದ್ದೇನೆ. ಅವರು ಬ್ಯಾಕ್‌ವರ್ಡ್ ಕ್ಲಾಸ್‌ನವರು ಆಗಿರುವುದರಿಂದ ಜ್ಞಾಪಕ ಮಾಡುತ್ತಿದ್ದೇನೆ. ಬ್ಯಾಕ್‌ವರ್ಡ್ ಕ್ಲಾಸ್‌ಗೆ ಒಂದು ತಾಲ್ಲೂಕಿಗೆ ಒಂದು ಬೋರ್‌ವೆಲ್ ಕೊಡುತ್ತಾರೆ. What is the percentage of backwardclassed in Karnataka? It is 32%. 32 ಪರ್ಸೆಂಟ್ ಲ್ಯಾಂಡ್ ಹೋಲ್ಡರ್ಸ್ ಜನಗಳಿಗೆ ಒಂದು ತಾಲ್ಲೂಕಿಗೆ ಒಂದು ವರ್ಷಕ್ಕೆ ಒಂದು ಬೋರ್‌ವೆಲ್ ಹಾಕುತ್ತಿದ್ದೀರಿ. ಮಂತ್ರಿಗಳಿಗೆ ಹೇಗೆ ಅಧಿಕಾರ ಕೊಟ್ಟಿದ್ದಾರೆ, ಚಿಂಚನಸೂರ್‌ರವರಿಗೆ ಲಾಟರಿ ಮಾರಾಟ ಮಾಡುವ ಅಧಿಕಾರ, ರೇವಣ್ಣನವರಿಗೆ ಮುಚ್ಚಿ ಹೋಗುತ್ತಿರುವ ಕೆಎಸ್‌ಐಸಿ ರೇಷ್ಮೆ ಇಲಾಖೆ, ಅಮರೇಶ್ವರನಾಯಕ್‌ರವರಿಗೆ ಬಂದೀಖಾನೆ ದೊಡ್ಡ ಒಳ್ಳೆಯ ಪೋರ್ಟ್‌ಫೋಲಿಯೋ ಕೊಟ್ಟಿದ್ದೀರಿ? These are the people who have voted you to power. This section of the society which needs to be strengthened. But what have you give to these people? ಬಾಕಿ ಎಲ್ಲಾ ಬೆಣ್ಣೆ ಇರತಕ್ಕಂತಹ ಇಲಾಖೆಗಳು ನಿಮ್ಮ ಜೊತೆಯಲ್ಲಿ ಇರಬೇಕು. ಹಿಂದುಳಿದ ವರ್ಗದವರು ಓಟು ಹಾಕಬೇಕು, ಆದರೆ ಆ ವರ್ಗದ ಜನಗಳಿಗೆ ನೀವು ಕೊಟ್ಟಿರತಕ್ಕಂಥದ್ದು ಏನು? ಪಿಎಸ್‌ಸಿ ಮೆಂಬರ್ ಮುನಿಕೃಷ್ಣ ಎನ್ನುವವರು ರಿಟೈರ್ಡ್ ಆಗಿ ಎಂಟು ತಿಂಗಳಾಯಿತು. He belongs to a backward community. ನೀವು ಯಾರಿಗಾದರೂ ಮಾಡಿ ಈಡಿಗರು, ಕುರುಬರು, ಕುಂಬಾರರು, ಬೆಸ್ತರು, ದರ್ಜಿಗಳು ಮತ್ತು ಗಾಣಿಗರು ಯಾರೂ ನಿಮಗೆ ಸಿಗಲಿಲ್ಲವಾ? ಇದು ನನಗೆ ಅರ್ಥವಾಗುತ್ತಿಲ್ಲ. 'ನೇರ ಸಂವಾದ' ಎಂದು ಈ ವರ್ಷ ಹೇಳಿದ್ದಾರೆ. ನೇರ ಸಂವಾದ ಮಾಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಜೊತೆಯಲ್ಲಿ ಏನು ನೇರ ಸಂವಾದ ಮಾಡಿರುವುದು? ಎಷ್ಟು ಅರ್ಜಿಗಳು ವಿಲೇವಾರಿ ಆಗಿವೆ? ನನಗೆ ಹೇಳಿಕೊಳ್ಳುವುದಕ್ಕೆ ನಾಚಿಕೆಯಾಗುತ್ತದೆ. ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹ ಮಾಡಲಿಕ್ಕೆ 711 ಪ್ರಕರಣಗಳಲ್ಲಿ ದುಡ್ಡು ಕೊಟ್ಟಿದ್ದಾರೆ. ಇಂಟರ್‌ಕ್ಯಾಸ್ಟ್ ಮ್ಯಾರೇಜ್‌ಗೆ ಇದು ಹೊಸ ಕಾರ್ಯಕ್ರಮವಾ? ದೇವರಾಜ ಅರಸ್ ಇದ್ದಾಗ 30 ವರ್ಷಗಳ ಹಿಂದೆ ಪ್ರಾರಂಭವಾದಂಥ ಕಾರ್ಯಕ್ರಮ ಇದು. ಅಧಿಕಾರದ ಮದ ಕೊಬ್ಬಿದ ಕುರಿಯ ಕಣ್ಣಿಗೆ ಬಂದ ಹಾಗೆ ಕೆಲವು ಮುಖಂಡರಿಗೆ ಬಂದಿದೆ. ಯಾವ ವರ್ಗದ ಜನಗಳ ಆಧಾರದ ಮೇಲೆ ನೀವು ಇಲ್ಲಿ ಅಧಿಕಾರಕ್ಕೆ ಬಂದಿದ್ದೀರಿ. ಅವರನ್ನು ನೀವು ಮರೆತಿದ್ದೀರಿ. ಇದು ಆದ ಮೇಲೆ ಅಲ್ಪಸಂಖ್ಯಾತರ ವಿಚಾರದಲ್ಲಿ ಎಷ್ಟು ಜನ ಅಲ್ಪಸಂಖ್ಯಾತರು ಇವತ್ತು ಇದ್ದಾರೆ? ಅಲ್ಪಸಂಖ್ಯಾತರು ಇವತ್ತು ಹೆದರಿದ್ದಾರೆ. ಇರಾಕ್ ಯುದ್ಧದ ಬಗ್ಗೆ ಪ್ರಸ್ತಾಪ ಮಾಡಿದರೆ ಇದರ ಬಗ್ಗೆ ಅಲ್ಪ ಸಂಖ್ಯಾತರು ಹೆದರಿದ್ದಾರೆ. ಅವರಿಗೆ ಈ ಸರ್ಕಾರದಲ್ಲಿ ರಕ್ಷಣೆ ಸಿಗಲಿಲ್ಲ. ಯಾವ ಕಾರ್ಯಕ್ರಮ ಮಾಡಿದ್ದಾರೆ? ಈ ಹಜ್‌ಗೆ ಹೋಗತಕ್ಕಂತಹ ಪಿಲ್‌ಗ್ರಿಮ್ಸ್‌ಗಳಿಗೆ

ಮಾನ್ಯ ರೋಷನ್ ಬೇಗ್‌ರವರು ಪರ್ಸನಲ್ ಇಂಟರೆಸ್ಟ್ ತೆಗೆದುಕೊಂಡು ಮಾಡುತ್ತಿರುವ ಕೆಲಸ ಅದನ್ನು ಬಿಟ್ಟು ಯಾವ ಡೆವಲಪ್‌ಮೆಂಟ್ ವರ್ಕ್ಸ್‌ನ್ನು ಮೈನಾರಿಟೀಸ್ ಕಮ್ಯುನಿಟಿಗೆ ನೀವು ಮಾಡಿದ್ದೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು. ಮೈನಾರಿಟಿ ಡೆವಲಪ್‌ಮೆಂಟ್‌ಗೆ ನಾಲ್ಕು ಕೋಟಿ ರೂ. ದುಡ್ಡು ಸಾಲ ಕೊಡುತ್ತಿದ್ದೀರಿ. ಅದನ್ನು ಈ ವರ್ಷ ಒಂದೂವರೆ ಕೋಟಿ ರೂಪಾಯಿಗೆ ಇಳಿಸಿದ್ದೀರಿ. ನಿಮಗೆ ಮೈನಾರಿಟೀಸ್ 10 ಪರ್ಸೆಂಟ್ ಜನ ಓಟು ಹಾಕುತ್ತಾರೆ. ಆ ಆರಾಧನಾದಿಂದ ದುಡ್ಡು ಕೊಡುತ್ತಿದ್ದೀರಿ, ಮಸೀದಿಗಳಿಗೆ ಒಂದೊಂದು ಕಾನ್‌ಸ್ಟಿಟ್ಯೂಯೆನ್ಸಿಗೆ ಎರಡು ಲಕ್ಷ, ಮೂರು ಲಕ್ಷ, ನಾಲ್ಕು ಲಕ್ಷ ರೂ. ಹೀಗೆ ಇಳಿಸಿದ್ದೀರಿ. ಎಷ್ಟು ಮಸೀದಿಗಳಿಗೆ ದುಡ್ಡು ಕೊಟ್ಟಿದ್ದೀರಿ? ಎಷ್ಟು ಶಾದಿ ಮಹಲ್‌ಗಳನ್ನು ಕಟ್ಟಿದ್ದೀರಿ? ಎಷ್ಟು ಜನ ಬೀಡಿ ಕಾರ್ಮಿಕರಿಗೆ ಮನೆ ಕೊಟ್ಟಿದ್ದೀರಿ? ನೀವು ಅಧಿಕಾರಕ್ಕೆ ಬಂದಿರುವುದು ಅಲ್ಪಸಂಖ್ಯಾತರು. ಹಿಂದುಳಿದ ವರ್ಗದವರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಗಳಿಂದ. ಆ ವರ್ಗದ ಜನಗಳಿಗೆ ನೀವು ದ್ರೋಹ ಮಾಡಬಾರದು. ದ್ರೋಹ ಮಾಡಿದರೆ ಅದು ಕಾಂಗ್ರೆಸ್ ಸರ್ಕಾರ ಆಗುವುದಿಲ್ಲ. ಅದು ಬೇರೆ ಪಕ್ಷದ ಸರ್ಕಾರ ಆಗುತ್ತದೆ. ಬೇರೆ ಪಕ್ಷದ ಸರ್ಕಾರ ಇದು ಮಿಶ್ರ ಸರ್ಕಾರ, ನಮ್ಮ ತಳಿ ಇರುವುದೇ ಹೀಗೆ ಎಂದರೆ, ನಮ್ಮದೇನೂ ತಕರಾರು ಇಲ್ಲ. ಆದರೆ ಆ ವರ್ಗದ ಜನಗಳಿಗೆ ನಾನು ಒಂದು ಸಂದೇಶ ಕೊಡಲಿಕ್ಕೆ ಬಯಸುತ್ತೇನೆ. ಈ ಕಡೆ ನಾವು ನೋಡಿದ್ದೇವೆ ಮಾನ್ಯ ತಿಮ್ಮಪ್ಪನವರು, ಬಂಗಾರಪ್ಪನವರು, ಬಸವಲಿಂಗಪ್ಪನವರು ಮತ್ತು ವೀರಪ್ಪ ಮೊಯಿಲಿಯವರು ಇಲ್ಲಿ ಕುಳಿತು ಏನೇನು ಭಾಷಣ ಮಾಡುತ್ತಿದ್ದರೆಂದು ಅವರು ಭಾಷಣಗಳೆಲ್ಲಾ ಏನಾಯಿತು? ಅವರ ಹೆಸರಿನಲ್ಲಿ ನೀವು ಅಧಿಕಾರ ಅನುಭವಿಸುತ್ತಿರುವುದು. ಅರಸ್ ಅವರ ಹೆಸರಿನಲ್ಲಿ, ಇಂದಿರಾಗಾಂಧಿಯವರ ಹೆಸರಿನಲ್ಲಿ 20 ಅಂಶದ ಕಾರ್ಯಕ್ರಮ, 21 ವರ್ಷದ ಕಾರ್ಯಕ್ರಮ, ದಿವಂಗತ ರಾಜೀವ್ ಗಾಂಧಿಯವರ ಕಾರ್ಯಕ್ರಮ ಏನಾಯಿತು ನಿಮ್ಮ ಕಾರ್ಯಕ್ರಮ? ಇದಾದ ಮೇಲೆ ಒಂದು ಸಮಸ್ಯೆ ಇದೆ, ಉದಾರೀಕರಣ ನಮ್ಮ ಲಿಕ್ವಿಡೇಷನ್ ಆಫ್ ಇಂಡಸ್ಟ್ರೀಸ್, ಇಂಡಸ್ಟ್ರೀಸ್ ಮಿನಿಸ್ಟರ್ ಇಲ್ಲಿ ಬಂದಿದ್ದಾರೆ, ಅವರಿಗೆ ಜ್ಞಾಪಕ ಮಾಡುತ್ತೇನೆ. What were your promises in the last $3^{1}/_{2}$ years? ಮೂರು ವರೆ ವರ್ಷದಲ್ಲಿ ಮಾನ್ಯ ದೇಶಪಾಂಡೆ ಸಾಹೇಬರೆ, ಒಂದು ಲಕ್ಷ ಕೋಟಿ ರೂ. ಬಂಡವಾಳ ತೆಗೆದುಕೊಂಡು ಬರುತ್ತೇವೆಂದು ಪ್ರತಿ ಭಾಷಣದಲ್ಲಿ ರಾಜ್ಯಪಾಲರ ಮೂಲಕ ಹೇಳಿಸಿದ್ದೀರಿ. ಎರಡೂವರೆ ಲಕ್ಷ ಜನಗಳಿಗೆ ಉದ್ಯೋಗ, as I know every year 1000 software Engineers are coming back from America. In Bangalore alone for the last 12 months, 500 software companies have been closed. There is no money. ಒಂದು ಸಿನಿಮಾ ಬಂದಿದೆ, ಅತ್ಯಂತ ಒಳ್ಳೆಯ ನಿರ್ದೇಶನ ಪ್ರಕಾಶ್ ಬೆಳವಾಡಿಯವರ 'ಸ್ಟಂಬಲ್' ಈ ಸಿನಿಮಾವನ್ನು ದಯವಿಟ್ಟು ಹೋಗಿ ನೋಡಿ, ನಿಮ್ಮ ಬಲ್ಪ್ 'ಏನು ಊದಿಸಿದ್ದಿರಿ ಸಾಫ್ಟ್‌ವೇರ್, ಬಯೋ ಟೆಕ್ನಾಲಜಿ ಬಲ್ಬ್ ಅದು ಯಾವ ರೀತಿ ಬರ್ಸ್ಟ್ ಆಗಿದೆ ಎಂದು ಹೋಗಿ ನೋಡಿ. 500 companies have been closed. ಆ ಕ್ಲೋಸ್ ಡೌನ್ ಕಂಪನಿಗಳಿಗೆ ಜಮೀನು ಕೊಟ್ಟು ಅಲ್ಲಿರತಕ್ಕಂತಹ ಅವರ ಸ್ಟಾಂಪ್ ಡ್ಯೂಟಿ ಎಕ್ಸಮ್‌ಷನ್ ಮಾಡಿರುವುದೂ ಕೂಡ ನೀವು ಬೆನ್ನು ತಟ್ಟಿಕೊಂಡಿದ್ದೀರಿ. ಮಾನ್ಯ ನಾರಾಯಣ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದರು. ಆ ಸಮಿತಿ ವರದಿ ಏನಾಯಿತು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಒಂದು

ಪ್ರಾಬ್ಲಮ್ ಇದೆ, ಕೇಂದ್ರ ಸರ್ಕಾರ ಉದಾರೀಕರಣದ ನೀತಿಯನ್ನು 1991 ರಿಂದ ಪ್ರಾರಂಭ ಮಾಡಿರುವುದರಿಂದ ಒಂದು ಅನ್ವೇಷಣೆಯನ್ನು ನಾವು ನೀವು ಕುಳಿತು ಮಾಡಬೇಕಾಗುತ್ತದೆ. It is not the responsibility, as you claim, of the congress party alone. ಇದು ಬರೀ ಕಾಂಗ್ರೆಸ್ ಪಕ್ಷದ ಗುತ್ತಿಗೆ ಅಲ್ಲ. ಅಲ್ಪಸಂಖ್ಯಾತರು ಬಡವರು, ದುಡಿಯುವ ರೈತರು ಇವತ್ತು ರೈತರು ಯಾವ ಕಷ್ಟದಲ್ಲಿದ್ದಾರೆ ಎಂದು ಬರಗಾಲದ ಬಗ್ಗೆ ಮಾತನಾಡುವಾಗ ರೈತರ ಬಗ್ಗೆ ನಾವೆಲ್ಲಾ ಮಾತನಾಡಿದ್ದೇವೆ. ರೈತರು ನಿಮ್ಮ ಬಗ್ಗೆ ಸಿಡಿದೆದ್ದಿದ್ದಾರೆ. ಮಾದೇಗೌಡರು ಸಿಡಿದೆದಿದ್ದಾರೆ. ಎಸ್‌ಸಿ ಎಸ್‌ಟಿಗಳು ಸಿಡಿದೆದ್ದಿದ್ದಾರೆ. ಬ್ಯಾಕ್‌ವರ್ಡ್ ಕ್ಲಾಸ್‌ನವರು ನಿಮ್ಮ ವಿರುದ್ಧ ಸಿಡಿದೆದಿದ್ದಾರೆ. ಇಲ್ಲದಿದ್ದರೆ ನೀವು 40 ಜನ ಮಂತ್ರಿಗಳು ಅಲ್ಲಿ ಹೋಗಿ ಉಪ ಚುನಾವಣೆಯಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ. ಇದು ಒಂದು ಚಿಂತನೆ ಆಗಬೇಕಾಗುತ್ತದೆ. ಮಾನ್ಯ ತಿಮ್ಮಪ್ಪನವರೇ ನಾನು ಏನು ಸಲಹೆ ಮಾಡುತ್ತೇನೆಂದರೆ, ಬಹಳ ಜನ ನುರಿತ ಮುಖಂಡರುಗಳು ಬಂದಿದ್ದೀರಿ, ಮಾನ್ಯ ಮಂತ್ರಿಗಳೂ ಇಲ್ಲಿದ್ದಾರೆ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ, ಉದಾರೀಕರಣದ ಹಿನ್ನೆಲೆಯಲ್ಲಿ ಮೀಸಲಾತಿ ವಿಷಯ ಏನಿದೆ, ಎಸ್‌ಸಿ ಎಸ್‌ಟಿಗಳಿಗೆ, ಬ್ಯಾಕ್‌ವರ್ಡ್ ಕ್ಲಾಸ್‌ಗಳಿಗೆ ಮತ್ತು ಮೈನಾರಿಟೀಸ್‌ಗೆ ಎಂಪ್ಲಾಯ್‌ಮೆಂಟ್ ಅಂಡ್ ಸೋಷಿಯಲ್ ಸ್ಟೇಟ್ಸ್ ಎರಡೂ ಈ ಪಾಯಿಂಟ್ ಆಫ್ ವ್ಯೂವ್ ನಿಂದ ಒಂದು ರಿವ್ಯೂ ಆಗಬೇಕಾಗುತ್ತದೆ. A Commission is necessary. ದೇವರಾಜ ಅರಸ್ ರವರ ಹೆಸರಿನಲ್ಲಿ ನಾವು ಒಂದು ಇನ್‌ಸ್ಟಿಟ್ಯೂಟ್ ಮಾಡಿದ್ದೇವೆ. ಎಸ್‌ಸಿಎಸ್‌ಟಿ ವೆಲ್‌ಫೇರ್ ನೋಡಲಿಕ್ಕೆ ಒಂದು ಕಮಿಷನ್ ಅಪಾಯಿಂಟ್ ಮಾಡಿ ಅದಕ್ಕೆ ಏನೂ ಅಧಿಕಾರ ಕೊಟ್ಟಿಲ್ಲ. ಕೆಲವು ತಜ್ಞರನ್ನು ಒಳಗೊಂಡ ಉದಾರೀಕರಣದ ಹಿನ್ನೆಲೆಯಲ್ಲಿ ಯಾವ ರೀತಿ 1973-74ರಲ್ಲಿ ದೇವರಾಜ ಅರಸ್‌ರವರು ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ ಮತ್ತು ಹರಿಜನರಿಗೆ ಇಡೀ ದೇಶಕ್ಕೆ ಮಾದರಿ ಆದ ಕಾರ್ಯಕ್ರಮವನ್ನು ಕೊಟ್ಟಿದ್ದರು. ಆ ರೀತಿಯ ಕಾರ್ಯಕ್ರಮ ಕೊಡಲಿಕ್ಕೆ ನೀವು ನಾಂದಿ ಹಾಕಿ. ಆಗ ನಿಮಗೆ ಮೆಚ್ಚತಕ್ಕಂತಹ ಕೆಲಸ ಇದು. ಇದು ಮೆಚ್ಚತಕ್ಕಂತಹ ಕೆಲಸ. ನನಗೆ ಅರ್ಥವಾಗದೆ ಇರತಕ್ಕಂಥದ್ದು There are two lines of thoughts. One I consider Mamohansingh philosophy. ಏಕೆಂದರೆ 1990-91ರ ನಂತರ ಶ್ರೀಮಾನ್ ನರಸಿಂಹರಾವ್‌ರವರ ಸರ್ಕಾರದಲ್ಲಿ ಉದಾರೀಕರಣ ಪ್ರಾರಂಭ ಮಾಡಿದರು. ನಿಮ್ಮ ಪಕ್ಷದಲ್ಲಿ ಇನ್ನೂ ಇಂತಹ ಫಿಲಾಸಫಿ ಇದೆ. 1971ರವರೆಗೆ ಪ್ರಣಬ್ ಕುಮಾರ್ ಮುಖರ್ಜಿಯವರ ಫಿಲಾಸಫಿ, ಯಾವ ಫಿಲಾಸಫಿ ನೀವು ಒಪ್ಪುತ್ತೀರಿ? Do you want Pranab Mukherjee or you want to go with Manmohan Singh? ನೀವು ಇದನ್ನು ತೀರ್ಮಾನ ಮಾಡಬೇಕು. ಇದು ರಾಷ್ಟ್ರ ಮಟ್ಟದಲ್ಲಿ ಆಗುವ ಕೆಲಸ. ರಾಷ್ಟ್ರ ಮಟ್ಟದಲ್ಲಿ ಇದು ಚಿಂತನೆಯಾಗಬೇಕು. ಯಾವ ರೀತಿ ಮೀಸಲಾತಿಗೆ ಅರ್ಥವನ್ನು ಕೊಡುವುದು, ಯಾವ ರೀತಿ ಹಿಂದುಳಿದ ವರ್ಗದವರಿಗೆ ಶಕ್ತಿಯನ್ನು ಕೊಡುವುದು ಎಂಬ ಬಗ್ಗೆ ಚಿಂತನೆ ಮಾಡಬೇಕು. ಆ ದೃಷ್ಟಿಯಿಂದ ಒಂದು ಚಿಂತನೆ ಆಗಬೇಕಾಗುತ್ತದೆ. ಅದಕ್ಕೆ ಒಂದು ತಜ್ಞರ ಆಯೋಗವನ್ನು ನೇಮಕ ಮಾಡಿ. ಈ ಉದಾರೀಕರಣದ ಹಿನ್ನೆಲೆಯಲ್ಲಿ ಎಲ್ಲಾ ಕೈಗಾರಿಕೆಗಳನ್ನು ಮುಚ್ಚುವಾಗ ರೈತರು ಸಂಕಷ್ಟದಲ್ಲಿರುವಾಗ, ಕೃಷಿ ಕ್ಷೇತ್ರ ಸಂಪೂರ್ಣವಾಗಿ ನಾಶವಾಗುತ್ತಿರತಕ್ಕಂತಹ ಅಂಚಿನಲ್ಲಿರುವಾಗ ಈ ವರ್ಗದ ಜನಗಳ ರಕ್ಷಣೆಯನ್ನು ಹೇಗೆ ಮಾಡುವುದು? ಇದನ್ನು ತಾವು ಯೋಚನೆ ಮಾಡಬೇಕೆಂದು ಒತ್ತಾಯ ಮಾಡಿ, ಮಾನ್ಯ

ಮುಖ್ಯ ಮಂತ್ರಿಗಳ ಕಾರ್ಯವೈಖರಿ ಇದು ಬಹಳ ಪ್ರಮುಖವಾದ ವಿಚಾರ. ತಾವು ಹೇಳಿದಿರಿ, 10.30ಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಬರುತ್ತಾರೆಂದು. ಇನ್ನೂ ಬಂದಿಲ್ಲ, ಉತ್ತರಗಳ ತಯಾರಿಯಲ್ಲಿರಬಹುದು. ಎಲ್ಲಾ ಇಲಾಖೆಗಳು ಕೇಂದ್ರೀಕೃತ ಆಗಬೇಕು. ಎಲ್ಲಾ ಇವರ ಹತ್ತಿರ ಇರಬೇಕು. ಹಣಕಾಸು ಇವರ ಹತ್ತಿರ ಇರಬೇಕು, ಹಣಕಾಸಿನ ಅನುಭವ ಇರುವ ಯಾವ ಮಂತ್ರಿಗಳು ನಿಮ್ಮಲ್ಲಿ ಇಲ್ಲ? ಡಿಪಿಎಆರ್ ಇವರಿಗೆ ಬೇಕು, ಬೆಂಗಳೂರು ಅಭಿವೃದ್ಧಿ ಇವರಿಗೆ ಬೇಕು ನಮ್ಮನ್ನು ಕೇಳಿ ಇಟ್ಟುಕೊಳ್ಳಬೇಕಾಗಿಲ್ಲ. ರಾಜ್ಯದ ಜನತೆಗೆ ಹೇಳಬೇಕಾಗುತ್ತದೆ. ನನ್ನನ್ನು ಕೇಳಿ ಎಂದು ಎಲ್ಲಿ ಹೇಳಿದೆ? ಯಾವ ಅಧಿಕಾರಿಗಳ ವರ್ಗಾವಣೆಗೆ ನಾನು ನಿಮ್ಮ ಬಳಿ ಬಂದಿದ್ದೇನೆ? ನಾನು ನಿಮ್ಮ ಹತ್ತಿರ ಬರುವುದಿಲ್ಲ. ನನಗೆ ಏಕೆ ಹೇಳುತ್ತೀರಿ? ರಾಜ್ಯದ ಜನತೆ ನನಗೆ ಇಲ್ಲಿ ಕೇಳುವ ಅಧಿಕಾರವನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಕೇಳುತ್ತೇನೆ, ತಾವುಗಳೆಲ್ಲರೂ ದೇವರಾಜ ಅರಸ್‌ರವರ ಜೊತೆಯಲ್ಲಿ ಕೆಲಸ ಮಾಡಿದವರು. ಬರಗಾಲ ಬಂದರೆ ಸ್ವತಃ ದೇವರಾಜ ಅರಸ್‌ರವರು ಎಷ್ಟು ಕಡೆ ಹೋಗಿ ಕ್ಯಾಂಪ್ ಮಾಡುತ್ತಿದ್ದರು, ಜಿಲ್ಲೆಗಳಲ್ಲಿ ಯಾವ ತರಹ ಕ್ಯಾಂಪ್ ಮಾಡುತ್ತಿದ್ದರು, ತಾಲ್ಲೂಕುಗಳಲ್ಲಿ ಯಾವ ತರಹ ಕ್ಯಾಂಪ್ ಮಾಡುತ್ತಿದ್ದರು ಈಗ ಏನಾದರೂ ಮುಖ್ಯ ಮಂತ್ರಿಗಳ ಪ್ರವಾಸ ನೋಡಿದ್ದೀರಾ? ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಪಾಟೀಲ್ ಪುಟ್ಟಪ್ಪನವರು ಯಾವ ರೀತಿ ಏನು ಹೇಳಿದರು ಎಂಬುದು ನಿಮಗೆ ಗೊತ್ತಿರುವ ವಿಚಾರ. ಯಾವುದಾದರೂ ಜಿಲ್ಲೆಗೆ ಹೋಗಿ ರಾತ್ರಿ ತಂಗಿ ನಿಮ್ಮ ಕಾಂಗ್ರೆಸ್ ಪಾರ್ಟಿ ಕಾರ್ಯಕರ್ತರಿಗೆ ಭೇಟಿ ಮಾಡಿ ನಮ್ಮ ಕಾರ್ಯಕರ್ತರಿಗೆ ಲಾಠಿ ಛಾರ್ಜ್ ಮಾಡಿ ಕಳುಹಿಸಿ ತೊಂದರೆ ಇಲ್ಲ. ಕಾಂಗ್ರೆಸ್ ಕಾರ್ಯಕರ್ತರಿಗಾದರೂ ಭೇಟಿ ಮಾಡಿ. ಬರಗಾಲದ ಪರಿಸ್ಥಿತಿಯನ್ನು ನಿಭಾಯಿಸತಕ್ಕಂತಹ ವಿಚಾರದಲ್ಲಿ ಮುಖ್ಯ ಮಂತ್ರಿಗಳು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಇವರು ಹೋಗಿ ಈ ಗವರ್ನೆನ್ಸ್ ಅಲ್ಲ, ಈ ಗವರ್ನೆನ್ಸ್‌ನಲ್ಲಿ ಡೆಪ್ಯುಟಿ ಕಮಿಷನರ್‌ಗಳು ನಿಮಗೆ ಎಷ್ಟು ಬೇಕಾದರೂ ರಿಪೋರ್ಟ್ಸ್ ಕಳುಹಿಸುತ್ತಾರೆ, ಅದನ್ನು ಮಾಡಬೇಕಾದವರು ಮುಖ್ಯ ಮಂತ್ರಿಗಳು. ಏಕೆಂದರೆ, ಡಿಸಿ, ಎಸ್‌ಪಿ ನಿಮ್ಮ ಆಡಳಿತದಲ್ಲಿ ಬರುತ್ತಾರೆ. ಮುಖ್ಯ ಮಂತ್ರಿಗಳ ಹಕ್ಕು ಅದು. ಏಕೆಂದರೆ, ಡಿಪಿಎಆರ್ ಅವರಿಗೇ ಸೇರುತ್ತದೆ. ಅದರ ಜವಾಬ್ದಾರಿ ಅಕೌಂಟಬಿಲಿಟಿ ಇರುವವರು. ಐಎಎಸ್ ಐಪಿಎಸ್ ಅಧಿಕಾರಿಗಳ ವರ್ಗಾವಣೆ, ಬಗ್ಗೆ ಹೇಳುವುದಾದರೆ ಐಎಎಸ್ ಐಪಿಎಸ್ ಅಧಿಕಾರಿಗಳು ರಾಜ್ಯದಲ್ಲಿ ಭಯಭೀತರಾಗಿದ್ದಾರೆ. ಏನು ಕಾರಣ? ಇದರ ಬಗ್ಗೆ ನೀವು ಮೂರು ಅಲ್ಲ ನಾಲ್ಕು ಅಲ್ಲ ಆರು ಸಾರಿ ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾ ಪೋಲೀಸ್ ವರಿಷ್ಠ ಅಧಿಕಾರಿಗಳ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ್ದೀರಿ. ಪ್ರತಿ ಸಂದರ್ಭದಲ್ಲಿ ಏನು ಹೇಳುತ್ತೀರಿ? ಪ್ರತಿ ಸಭೆಯಲ್ಲಿ ಎಚ್ಚರಿಕೆ ಕೊಡುತ್ತಿದ್ದೀರಿ. ನೀವು ಸಹಕಾರ ಕೊಡುತ್ತಿಲ್ಲ, ನೀವು ಮೂರುವರೆ ವರ್ಷಗಳು ಕಳೆದ ಮೇಲೆಯೂ ಅವರ ಸಹಕಾರ ತೆಗೆದುಕೊಳ್ಳುವುದರಲ್ಲಿ ವಿಫಲರಾಗಿದ್ದೀರಿ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿ. ನಿಮಗೆ ಜನಗಳು ಅಧಿಕಾರದ ಅಸ್ತ್ರ ಕೊಟ್ಟಿರತಕ್ಕಂಥದ್ದು ಅವರನ್ನು ನೀವು ಸಂಭಾಳಿಸಬೇಕಾದರೆ You should be like a mother and a father. ಅದು ಆಗಿಲ್ಲ. For the first time in Karnataka among the IAS and IPS one set of officers are ruling. ಹೇಳುವವರು, ಕೇಳುವವರು ಇಲ್ಲದ ಹಾಗಾಗಿದೆ. ಪ್ರಾಮಾಣಿಕ ಅಧಿಕಾರಿಗಳಿಗೆ ನೀವು ಸರಿಯಾಗಿ ಪೋಸ್ಟಿಂಗ್ಸ್ ಕೊಡುತ್ತಿಲ್ಲ. ಸೋಷಿಯಲ್ ಜಸ್ಟೀಸ್ ಮಾಡುತ್ತಿಲ್ಲ.

ಆದ್ದರಿಂದ ಏನಾಗುತ್ತಿದೆ ಎಂದರೆ, ನಿಮ್ಮ ಆಡಳಿತದ ಮೇಲೆ ತಾವು ನಿಯಂತ್ರಣವನ್ನು ಕಳೆದುಕೊಳ್ಳುತ್ತಿದ್ದೀರಿ. ನಿಮಗೆ ಏನಿದ್ದರೂ ನಿಮ್ಮ ಇಮೇಜ್, you are an image conscious Chief Minister. ನಿಮ್ಮ ಇಮೇಜ್ ಹೆಚ್ಚು ಪ್ರಮುಖವಾಗಿರಬೇಕು. ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು ಕಳುಹಿಸಿರತಕ್ಕಂತಹ ಒಂದು ಪತ್ರವನ್ನು ತಮಗೆ ಕಳುಹಿಸುತ್ತೇನೆ. 1999ರ ಅಕ್ಟೋಬರ್‌ನಲ್ಲಿ ಇವರ ಕಾರ್ಯದರ್ಶಿಗಳು ನನಗೆ ಬರೆದಿರುವ ಪತ್ರ. ಪ್ರತಿ ದಿನ ನಾನು ಮೂರರಿಂದ ನಾಲ್ಕೂವರೆ ಗಂಟೆಗೆ ಎಲ್ಲರಿಗೂ ನೋಡುತ್ತೇನೆ. ಬೆಳಿಗ್ಗೆ ಹೊತ್ತು ಜನತಾ ಸಂದರ್ಶನ ಮಾಡುತ್ತೇನೆಂದರು ಅದನ್ನು ಏಕೆ ಮೂರೂವರೆ ವರ್ಷದ ಒಳಗಡೆ ನೀವು ಮರೆತು ಹೋಗಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮೈಸೂರಿನಲ್ಲಿ ನೀವು ಭಾಷಣ ಮಾಡಿದಿರಿ, ಇನ್ನೂ ಏಳೂವರೆ ವರ್ಷಗಳ ಕಾಲ ನಮ್ಮ ಪಕ್ಷ ಅಧಿಕಾರದಲ್ಲಿ ಇರುತ್ತದೆ, ನಾನು ಇರುತ್ತೇನೆಂದು ಹೇಳಿದಿರಿ, ಇರಿ ಸಂತೋಷ. ಆದರೆ ಇಷ್ಟು ಬೇಗ ನೀವು ಕೊಟ್ಟಿರತಕ್ಕಂತಹ ಘೋಷಣೆಗಳನ್ನು ಏಕೆ ಮರೆತಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇವತ್ತು ತಾಲ್ಲೂಕಿನ ಆಡಳಿತ ಸಂಪೂರ್ಣವಾಗಿ ಮಧ್ಯವರ್ತಿಗಳ ಕೈಗೆ ಹೋಗಿದೆ. ಯಾವ ತಾಲ್ಲೂಕು ಕಛೇರಿಗೆ ಬೇಕಾದರೂ ಹೋಗಿ ನೋಡಿ.

ಅಧ್ಯಕ್ಷರು:- 11.00 ಗಂಟೆಗೆ ಉತ್ತರ ಎಂದು ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಹೇಳಿದ್ದಾರೆ. ತಾವು ದಯವಿಟ್ಟು 11 ಗಂಟೆಗೆ ಮುಗಿಸಿದರೆ ಉತ್ತಮ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾಲ್ಲೂಕಿನ ಆಡಳಿತ ಮಧ್ಯವರ್ತಿಗಳ ಕೈಗೆ ಹೋಗಿದೆ. ನಾವು ಆಡಳಿತ ನಡೆಸುವಾಗ ಯಾರು ಮಧ್ಯವರ್ತಿಗಳು ನಮ್ಮ ಸುತ್ತ ಮುತ್ತ ಇರುತ್ತಿದ್ದರು ಅವರೆಲ್ಲಾ ನಿಮ್ಮ ಪಾರ್ಟಿಗೆ ಈಗ ಸೇರಿಕೊಂಡಿದ್ದಾರೆ. ನಿಮ್ಮ ಪಕ್ಷದ ಮುಖಂಡರ ಸುತ್ತಮುತ್ತ, ಶಾಸಕರ ಸುತ್ತಮುತ್ತ ಇದ್ದಾರೆ. ತಾವು ಪರೀಕ್ಷೆ ಮಾಡಿ ನೋಡಿ. ಲೋಕಾಯುಕ್ತದಿಂದ ವರದಿ ತರಿಸಿಕೊಳ್ಳಿ. ನಿಮ್ಮ ಇಂಟಲಿಜೆನ್ಸ್ ವರದಿ ತರಿಸಿಕೊಳ್ಳಿ. ಬರಗಾಲದ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಹೇಳಿದೆ. ನಮ್ಮ ಕೆಲಸಗಳಲ್ಲಿ ಶೇಕಡ 45 ರಷ್ಟು ಪರ್ಸೆಂಟೇಜ್ 100 ರೂಪಾಯಿ ಕೆಲಸವಾದರೆ 45 ರೂಪಾಯಿ ಕಂಟ್ರಾಕ್ಟರ್‌ನಿಂದ ಹಿಡಿದು ಎಕ್ಸಿಕ್ಯೂಟೀವ್ ಇಂಜಿನಿಯರ್‌ವರೆಗೆ ಕಟ್ ಆಗುತ್ತದೆ. ಒಂದು ಆಶ್ರಯ ಮನೆ ತೆಗೆದುಕೊಳ್ಳಬೇಕಾದರೆ, ನೀವು ಕೇಳಿಸಿಕೊಳ್ಳಲಿಲ್ಲ, ನಿಮ್ಮ ಸಾಧನೆಗಳು ಕೆಲವು ಹೇಳಿದ್ದೇನೆ, ನಿಮ್ಮ ಕಾನ್‌ಸೆಪ್ಟ್ ನೀವು ಏನು ಮಾಡಬೇಕೆಂದು ಇದ್ದೀರಿ, ನಾಲ್ಕು ವರ್ಷಗಳ ಐದು ಭಾಷಣಗಳಲ್ಲಿ ಮಾಡಿರುವ ವಿಚಾರಗಳು, ನಿಮ್ಮ ಸಾಧನೆಗಳನ್ನು ಹೇಳುವುದರ ಜೊತೆಗೆ ಈ ವೈಫಲ್ಯಗಳಿಗೆ ನಾನು ಬಂದಿದ್ದೇನೆ. ಇದರಲ್ಲಿ ಮೊದಲನೇ ವೈಫಲ್ಯ, ತಾವು ಆಡಳಿತದ ಮೇಲೆ ಸಂಪೂರ್ಣವಾದ ನಿಯಂತ್ರಣ ಕಳೆದುಕೊಂಡಿದ್ದೀರಿ. ತಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳ ಸಹಕಾರ ಬೇರೆ ಮಾತು, ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಿಮಗೆ ಅದು ಹಳೆಯದಾಗಿ ಬಿಟ್ಟಿದೆ. ನೀವು ನಾನು ನಡೆದುಕೊಂಡು ಹೋಗುತ್ತಿದ್ದೇನೆಂದು ಹೇಳುತ್ತೀರಿ. ನಡೆದುಕೊಂಡು ಹೋಗುತ್ತಾರೆ ಅದರಲ್ಲಿ ಏನೂ ಸಂಶಯ ಇಲ್ಲ. ನೀವು ಈ ಸಾರಿ ಭಾಷಣದಲ್ಲಿ ಇದನ್ನು ಹೇಳಬಾರದಾಗಿತ್ತು. ಬೆಂಗಳೂರು ಸಿಟಿಯಲ್ಲಿ ಟಾಯ್ಲೆಟ್‌ಗಳನ್ನು ಕಟ್ಟಿರುವುದು, ಬಸ್ ಶೆಲ್ಟರ್‌ಗಳನ್ನು ಕಟ್ಟಿರುವುದು ಎಂಪಿ ಫಂಡ್‌ನಿಂದ ಕಟ್ಟಿರತಕ್ಕಂಥದ್ದು ನಿಮ್ಮ ಸಾಧನೆ ಎಂದು ಬರೆಸಿದ್ದೀರಿ. ಇದೇ ನಿಮ್ಮ ಸಾಧನೆಯಾ? ಹಾಗಾದರೆ ನಾನು ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುವ ಬಹಳ ಪ್ರಮುಖವಾದ ಅಂಶವೇನೆಂದರೆ,

your government is against the backward classes; you are against scheduled castes and the minority communities. ನಾನು ಎಲ್ಲಾ ಅಂಕಿ ಅಂಶಗಳನ್ನು ಕೊಟ್ಟು ಮಾತನಾಡಿದ್ದೇನೆ. ಪಬ್ಲಿಕ್ ಸರ್ವಿಸ್ ಕಮಿಷನ್ ಮೆಂಬರ್‌ನ್ನು ಎಂಟು ತಿಂಗಳುಗಳಿಂದ ಅಪಾಯಿಂಟ್ ಮಾಡುವುದಕ್ಕಾಗಲಿಲ್ಲ. 165 ಬೋರ್ಡ್ ಕಾರ್ಪೋರೇಷನ್, ಛೇರ್ಮನ್ ಹಾಗೂ ಮೆಂಬರ್ಸ್ ಅಪಾಯಿಂಟ್‌ಮೆಂಟ್ ಮಾಡಿದ್ದೀರಿ. 60 ಜನರನ್ನು ಬೋರ್ಡ್ಸ್ ಅಂಡ್ ಕಾರ್ಪೋರೇಷನ್‌ಗೆ ಅಪಾಯಿಂಟ್ ಮಾಡಿದ್ದೀರಿ. 9 ಜನ ಎಸ್‌ಸಿಯವರು, 7 ಜನ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಅಪಾಯಿಂಟ್ ಮಾಡಿದ್ದೀರಿ. 5 ಜನ ಎಸ್‌ಸಿಯವರು ಈ ವರ್ಗದ ಜನ ಇವತ್ತು ಯಾರ ಹತ್ತಿರ ಹೋಗಬೇಕು? ಯಾರಿಗೆ ಕೇಳಬೇಕು? ನೀವು ಹೇಗೆ ಸಂಮೃದ್ಧ ಕರ್ನಾಟಕ ಕಟ್ಟುವುದಕ್ಕಾಗುತ್ತದೆ? ಆದ್ದರಿಂದ ಈ ಸರ್ಕಾರದ ಕೆಲವು ಒಳ್ಳೆಯ ಕೆಲಸಗಳನ್ನು ಹೇಳಿದ ಮೇಲೆ ವೈಫಲ್ಯಗಳನ್ನು ಹೇಳಿ ನೀವು ಸಮಯ ರಿಸ್ಟ್ರಿಕ್ಟ್ ಮಾಡಿರುವುದರಿಂದ ಕೊನೆಯದಾಗಿ ಕೆಲವು ಅಗ್ರಹಗಳನ್ನು ಮಂಡಿಸಲಿಕ್ಕೆ ತಮ್ಮ ಅನುಮತಿ ಕೇಳುತ್ತೇನೆ. ಒಂದೆರಡು ನಿಮಿಷಗಳಲ್ಲಿ ಅವರ ಅಗ್ರಹಗಳು ಏನೆಂದು ತಿಳಿಸಬೇಕಾಗುತ್ತದೆ. ತಕ್ಷಣ ತುರ್ತಾಗಿ ಆಗಬೇಕಾಗಿರುವ ಕೆಲಸ ಬೋರ್‌ವೆಲ್‌ಗಳನ್ನು ಅಳಪಡಿಸುವ ಕೆಲಸವನ್ನು ಯುದ್ಧದೋಪಾದಿಯಲ್ಲಿ ಮಾಡುತ್ತೇವೆಂದು ಹೇಳಿದ್ದೀರಿ, ಪ್ರಾಮಾಣಿಕವಾಗಿ ಹೇಳುತ್ತೇನೆ, ಒಂದು ತಾಲ್ಲೂಕಿನಲ್ಲಿ ಕಳೆದ ನಾಲ್ಕು ತಿಂಗಳುಗಳಲ್ಲಿ 20 ರಿಂದ 30 ಬೋರ್‌ವೆಲ್‌ಗಳನ್ನು ಜಾಸ್ತಿ ಅಳಪಡಿಸುವುದಕ್ಕೆ ಆಗಲಿಲ್ಲ. ಯಾವ ರಿಗ್‌ನವರೂ ಬರುತ್ತಿಲ್ಲ. ದುಡ್ಡು ಕೊಡುವುದಿಲ್ಲವೆಂದು ರಿಗ್‌ನವರು ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಬೋರ್‌ವೆಲ್‌ಗಳನ್ನು ಅಳವಡಿಸುವುದಕ್ಕೆ ಒಂದು ಕನಿಷ್ಟ ಪಕ್ಷ ಒಂದು ತಾಲ್ಲೂಕಿಗೆ 100 ಬೋರ್‌ವೆಲ್‌ಗಳಾದರೂ ಹಾಕಬೇಕು. ನನ್ನ ಸ್ವಂತ ಕ್ಷೇತ್ರದ ಬಗ್ಗೆ ನಾನು ಹೇಳುತ್ತಿದ್ದೇನೆ. ಮೊನ್ನೆ ನಾನು 10 ದಿನ ಕಂಟಿನ್ಯೂಯಸ್ಸಾಗಿ ಟೂರ್ ಮಾಡಿದ್ದೇನೆ. 70 ಹಳ್ಳಿಗಳಲ್ಲಿ ಸಂಪೂರ್ಣವಾಗಿ ಬೋರ್‌ವೆಲ್‌ಗಳು ಡ್ರೈ ಆಗಿದೆ. ಹೊಸ ರಿಸೋರ್ಸಸ್ ಹುಡುಕಬೇಕು. ಬೋರ್‌ವೆಲ್ ಹಾಕಬಾರದು ಎಂದು ನಿಮ್ಮ ಡಿಸಿಯವರು ಹೇಳುತ್ತಾರೆ. ದುಡ್ಡು ಇಲ್ಲ ಏನು ಮಾಡುವುದು ಎಂದು ಹೇಳುತ್ತಾರೆ. ತಕ್ಷಣ ನೀರಿನ ವ್ಯವಸ್ಥೆ ಮಾಡಬೇಕು. 250 ಜನ ಆಫೀಸರ್ಸ್ ಇದ್ದಾರೆ. ನಿಮ್ಮ ಭಾಷಣದಲ್ಲಿ ಏನು ಹೇಳಿದ್ದೀರಿ ಎಂದರೆ, how you have failed? ಎನ್ನುವುದಕ್ಕೆ ಹೇಳುತ್ತೇನೆ. ಪೇಜ್ ನಂ. ಎರಡರಲ್ಲಿ ಏನು ಹೇಳಿದ್ದೀರಿ? ಈ ವರ್ಷದ ಭಾಷಣದಲ್ಲಿ ಕಳೆದ ಐದು ವರ್ಷಗಳಲ್ಲಿ ಸತತವಾಗಿ 12 ತಾಲ್ಲೂಕುಗಳಲ್ಲಿ, ಕಳೆದ ನಾಲ್ಕು ವರ್ಷಗಳಲ್ಲಿ ಸತತವಾಗಿ 13 ತಾಲ್ಲೂಕುಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ 17 ತಾಲ್ಲೂಕುಗಳಲ್ಲಿ ಎಂದರೆ, 50 ತಾಲ್ಲೂಕುಗಳಲ್ಲಿ ಕಳೆದ ಐದರಿಂದ 3 ವರ್ಷಗಳ ಒಳಗೆ ಸತತವಾಗಿ ಬರಗಾಲ ಇದೆ. What is the special programme you have taken up for these taluks?

ಎಲ್ಲರಿಗೂ ಹೇಳಿದ ಹಾಗೆ ಒಂದಿಷ್ಟು ಅಕ್ಕಿ ಕಾಳು ಕೊಡಲಿಕ್ಕೆ ಡೆಪ್ಯೂಟಿ ಕಮಿಷನರ್‌ಗೆ ಹೇಳಿದ್ದೀರಿ. ಅವರು 151 ತಾಲ್ಲೂಕಿಗೆ ಹಂಚುತ್ತಾರೆ, ಹೊರತು ನಿಮಗೆ ಇರತಕ್ಕಂಥ ಕಮಿಟ್‌ಮೆಂಟ್ ಅನ್ನು ಆಕ್ಷನ್‌ನಲ್ಲಿ ತೋರಿಸಬೇಕಾದರೆ ನೀವು ಮಾಡಿರತಕ್ಕಂಥಾದ್ದು ಏನು ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ಈ 150 ತಾಲ್ಲೂಕುಗಳ ಪೈಕಿ ಇಂಟೆನ್ಸೀವ್ ಬರಗಾಲ 51 ತಾಲ್ಲೂಕುಗಳು ಎಂದು ತೆಗೆದುಕೊಳ್ಳಬಹುದಾಗಿತ್ತು. ಅದೆಲ್ಲಾ ಉತ್ತರ ಕರ್ನಾಟಕದಲ್ಲಿ ಬರುತ್ತವೆ. ಇನ್ನು ಮೇವು ಬ್ಯಾಂಕುಗಳ ಬಗ್ಗೆ ಹೇಳುವುದಾದರೆ ನಮ್ಮ ಕಾಲದಲ್ಲಿ ಬರಗಾಲ ಎಂದು ಸಾರಿ ಬಂದಿತ್ತು. ಆಗ

ನಾವು ಪಂಜಾಬ್‌ನಿಂದ ಮೇವನ್ನು ತರಿಸಿಕೊಂಡಿದ್ದವು. ಈಗ ಬೇರೆ ಬೇರೆ ಜಿಲ್ಲೆಗಳಿಂದ ಆದರೂ ಅಥವಾ ಪಕ್ಕದ ರಾಜ್ಯಗಳಿಂದ ತರಿಸಿಕೊಳ್ಳುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರೀ? ರೈತರು ಹುಲ್ಲನ್ನು ಅಲ್ಲಿಂದ, ಇಲ್ಲಿಂದ ತೆಗೆದುಕೊಂಡು ಬಂದರೆ ಟ್ರಾನ್ಸ್‌ಪೋರ್ಟ್‌ನ್ ಸಬ್ಸಿಡಿ ಒಂದು ಕಿಲೋಮೀಟರ್‌ಗೆ ಇಪ್ಪತ್ತು ಅಥವಾ 30 ಪೈಸೆ ಕೊಡುತ್ತಾರೆ. ಅದು ಯಾವ ಕಡೆಗೆ ಸಾಕಾಗುತ್ತದೆ? ಹೇಗೆ ದನಕರುಗಳನ್ನು ಬದುಕಿಸಿಕೊಳ್ಳುವುದು? ನನಗಂತೂ ಅರ್ಥವಾಗುತ್ತಿಲ್ಲ. ನಿಮ್ಮಲ್ಲಿ 225 ಜನನೋ 300 ಜನನೋ ಐ.ಎ.ಎಸ್. ಅಧಿಕಾರಿಗಳು ಇದ್ದಾರೆ. ಈ 151 ತಾಲ್ಲೂಕುಗಳಿಗೆ ಅವರನ್ನು ಒಬ್ಬೊಬ್ಬರನ್ನು ನೋಡಲ್ ಆಫೀಸರ್ ಎಂದು ಪೋಸ್ಟ್ ಮಾಡಿ. ಈ ಮುಂದಿನ ಮೂರು ತಿಂಗಳ ಕಾಲ ಅವರು ಅಲ್ಲಿ ಕೆಲಸ ಮಾಡಲಿ. ಕೋ ಆರ್ಡಿನೇಟ್ ಮಾಡಲಿ, ಅದನ್ನು ಮಾಡುವುದಕ್ಕೆ ನಿಮಗೆ ಸಾಧ್ಯವಿದೆ. ಮತ್ತೆ ಬಹಳ ಮುಖ್ಯವಾಗಿ ಕಳೆದ ಮೂರು ವರ್ಷಗಳಿಂದ ನಾವು ಸತತವಾಗಿ ಹೇಳಿಕೊಂಡು ಬಂದಿದ್ದೇವೆ. ಆದರೆ ನೀವು ಒಂದಲ್ಲ ಒಂದು ರೀತಿಯಿಂದ ತಪ್ಪಿಸಿಕೊಂಡು ಹೋಗುತ್ತಿದ್ದೀರಿ. ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಸ್ವಾಮಿ ನಿಮ್ಮ ಲೆಕ್ಕಾಚಾರದ ಪ್ರಕಾರವಾಗಿ 280ಕ್ಕೂ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನೀವು ಈಗ ಮುಖ್ಯಮಂತ್ರಿಗಳಾಗಿದ್ದೀರಿ. ಐದು ವರ್ಷ ತಾವು ರಾಜ್ಯಸಭೆಯಲ್ಲಿ ಇದ್ದೀರಿ. ಆ ಸಂದರ್ಭದಲ್ಲಿ ಈ ಕಡೆ ಮಾನ್ಯ ಖರ್ಗೆ ಹಾಗೂ ಹೆಚ್.ಕೆ. ಪಾಟೀಲ್ ಕುಳಿತುಕೊಂಡು ಅವರು ಏನು ಭಾಷಣ ಮಾಡಿದ್ದಾರೆ ಎನ್ನುವುದನ್ನು ನೀವು ತೆಗೆದು ನೋಡಿ. ನಾವು ಒಂದೊಂದು ಲಕ್ಷ ರೂಪಾಯಿ ಆ ಕುಟುಂಬಗಳಿಗೆ ಕೊಡುತ್ತಿದ್ದೆವು, ತಮಗೆ ಕೊಡುವುದಕ್ಕೆ ತೊಂದರೆ ಏನು ಎಂಬುದು ಅರ್ಥವಾಗುತ್ತಿಲ್ಲ. ಬೇರೆಯದೆಲ್ಲಾ ಮಾಡುತ್ತೀರಿ. ಇದು ಪಕ್ಷಾತೀತವಾಗಿ ಇರತಕ್ಕಂಥ ಬೇಡಿಕೆ. ಇದನ್ನು ಮಾಡುವುದಕ್ಕೆ ನಿಗಮ ತೊಂದರೆ ಏನು? ಇನ್ನು ವಿದ್ಯುಚ್ಛಕ್ತಿ, ನಿಗಮ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ನಾನು ಎಲ್ಲೋ ಒಂದು ಕಡೆ, ಮಾನ್ಯ ಮುಖ್ಯಮಂತ್ರಿಗಳು ಬೆಳಗಿನ ಜಾವ ಎರಡು ಗಂಟೆಗೆ ತೋಟಕ್ಕೆ ಹೋಗಿ ನೀರು ಬಿಡಲಿ ಎಂದು ಭಾಷಣ ಮಾಡಿದೆ. ಅದಕ್ಕೆ ನಿಮ್ಮ ಸಚಿವ ಸಂಪುಟದ ಸದಸ್ಯರೊಬ್ಬರು ಬಹಳ ಸಿಟ್ಟು ಮಾಡಿಕೊಂಡಿದ್ದರು. ತಾವು ದಯವಿಟ್ಟು ರಿಪೋರ್ಟ್ ತರಿಸಿಕೊಳ್ಳಿ. ಅಥವಾ ನೀವೇ ಎಲ್ಲಾದರೂ ಹೋದಾಗ ಸಾಯಂಕಾಲದ ಹೊತ್ತು ನೋಡಿ. ಎರಡು ಮೂರು ಗಂಟೆ ವಿದ್ಯುಚ್ಛಕ್ತಿ ಬರುವುದಿಲ್ಲ. ಕೆಲವು ದೂರದ ಹಳ್ಳಿಗಳಿಗೆ ನಾಲ್ಕೈದು ದಿನಗಳಾದರೂ ವಿದ್ಯುಚ್ಛಕ್ತಿ ಬರುವುದಿಲ್ಲ. ಅವರು ಹೇಗೆ ಬದುಕುವುದು? ದಯವಿಟ್ಟು ನೀವೇ ಹೇಳಿ. ಅವರು 15 ದಿವಸಕ್ಕೆ ಒಂದು ಸಾರಿ ನೀರು ತೆಗೆದುಕೊಂಡು ಹೋಗಿ ಶೇಖರಣೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಈ ಸಂದರ್ಭದಲ್ಲಿ ನಾನು ನಜೀರ್‌ಸಾಬ್ ಅವರನ್ನು ನೆನಪಿಸಿಕೊಳ್ಳುತ್ತೇನೆ. 1980ರಲ್ಲಿ ಬರಗಾಲ ಬಂದಂತಹ ಸಂದರ್ಭದಲ್ಲಿ ಕೆರೆ ಕುಂಟೆಗಳಿಂದ ಹಳ್ಳಗಳಿಂದ ಕೆರೆಗಳಿಂದ ನೀರು ತಂದು ಕುಡಿಯುವಂತಹ ಪರಿಸ್ಥಿತಿ ಇತ್ತು. ಇವತ್ತು ಆ ಸ್ಥಿತಿಗೆ ಮತ್ತೆ ನಾವು ಬಂದಿದ್ದೇವೆ. ಕೊನೆ ಪಕ್ಷ ನೀವು ವಿದ್ಯುಚ್ಛಕ್ತಿಯನ್ನು ಥ್ರೀ ಫೇಸ್ಟ್ ಕರೆಂಟನ್ನು ಸತತವಾಗಿ 24 ಗಂಟೆ ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ನೀವು ತಪ್ಪಿಸಿಕೊಳ್ಳುವುದಕ್ಕೊಂದೇ ಬರಗಾಲ ಬಂತು. ಅದಕ್ಕೆ ನಾನೇನು ಮಾಡಲಿ? ನೀವು ಕರೆಂಟ್ ಅನ್ನು ಬೇರೆ ರಾಜ್ಯಗಳಿಂದ ತರಿಸಿಕೊಳ್ಳಿ. ಅದಕ್ಕೆ ನೀವು ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಇಲ್ಲದೆ ಇದ್ದರೆ ಅವರು ಕೊಡುವುದಿಲ್ಲ. ನಾನು ಬಿಡಿಎ ಒಳ್ಳೆಯ ಕೆಲಸ ಮಾಡಿದೆ ಎಂದು ಹೇಳಿದೆ. ಅದರ ಜೊತೆಗೆ ಡಿ-ನೋಟೀಫಿಕೇಷನ್ ವಿಚಾರದಲ್ಲಿ ಅನೇಕ ಅನುಮಾನಗಳಿಗೆ

ಇವತ್ತು ಎಡೆ ಮಾಡಿಕೊಟ್ಟಿದೆ. ಅನೇಕ ಜನರಿಗೆ ಬಿಡಿಎ ಏರಿಯಾದಲ್ಲಿ ನೀವು ಡಿ-ನೋಟಿಫೈ ಮಾಡಿದ್ದೀರಿ. ಎಷ್ಟು ಎಕರೆ ಮಾಡಿದ್ದೀರಿ? ಸುಮಾರು ಒಂದು ಸಾವಿರ ರೂಪಾಯಿ ಬೆಲೆ ಬಾಳುವ ಆಸ್ತಿಗೆ ನೀವು ಡಿನೋಟಿಫೈ ಮಾಡಿದ್ದೀರಿ. One thousand crores according to me. ನೀವು ಯಾವ ಕನ್ಸಿಡರೇಷನ್ ಮೇಲೆ ಮಾಡಿದ್ದೀರಿ? I would like to know it. People should know it. ನೀವು ಮುಖ್ಯಮಂತ್ರಿಗಳಾದ ಮೇಲೆ ಎಷ್ಟು ಬಿಡಿಎ ನಲ್ಲಿ ಡಿ-ನೋಟಿಫೈ ಮಾಡಿದ್ದೀರಿ ಎಂಬುದನ್ನು ತಿಳಿಸಬೇಕಾಗುತ್ತದೆ. ರಾಜ್ಯದ ಬೊಕ್ಕಸದ ಹಿತದೃಷ್ಟಿಯಿಂದ, One thousand crores, there is a loss of revenue according to me by these denotifications. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಮಾಹಿತಿಯನ್ನು ತಕ್ಷಣ ತರಿಸಿಕೊಳ್ಳುವುದಕ್ಕೆ ಆಗದೇ ಇರಬಹುದು, ಇನ್ನು ಒಂದು ವಾರ ಸದನ ಇದೆ, ಅಷ್ಟರಲ್ಲಿ ಯಾವ್ಯಾವುದನ್ನು ಡಿ-ನೋಟಿಫೈ ಮಾಡಿದ್ದೀರಿ ಎನ್ನುವುದನ್ನು ತಿಳಿಸಬೇಕು. ನನಗೆ ಇನ್ನೊಂದು ಸುದ್ದಿ ಬಂದಿದೆ. ಅದೇನೆಂದರೆ ಯಾವ ಫೈಲ್ ಡಿ-ನೋಟೀಫೈ ಆಗುತ್ತದೆ, ಆ ಸರ್ಕಾರಿ ಆದೇಶ ಸಂಬಂಧಪಟ್ಟ ಬೆನಿಫಿಷರಿಸ್‌ಗೆ ಹೋದ ಮೇಲೆ ಆ ಫೈಲ್ ಮಿಸ್ಸಿಂಗ್ ಅಂತೆ. ಆ ಫೈಲ್ ಸಿಗುವುದಿಲ್ಲ. ಏಕೆ ಸಿಗುವುದಿಲ್ಲ? ಇನ್ನೊಂದು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಕಿವಿ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಮತ್ತು ಸರ್ಕಾರಕ್ಕೆ ಎಚ್ಚರಿಕೆ ಕೊಡುವುದಕ್ಕೆ ಬಯಸುತ್ತೇನೆ. ಈ ಬೆಂಗಳೂರು ಸುತ್ತ ಬರತಕ್ಕಂಥ ರಿಂಗ್ ರೋಡ್ ಆದ ಮೇಲೆ ಬೇಕಾದಷ್ಟು ಸಿಎಂಸಿ ಮತ್ತು ಟಿಎಂಸಿ ಆಗಿದೆ. ನೀವು ಹೆಚ್‌ಯುಡಿ ಮಿನಿಸ್ಟರ್ ಆಗಿದ್ದೀರಿ. ಅಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಬಿಡಿಎ ಗೆ ಬಂದಿರತಕ್ಕಂಥ ಪ್ರಾಪರ್ಟಿಯನ್ನು ನಿಮ್ಮ ಕೆಲವು ಜನ ಸರ್ಕಾರದಲ್ಲಿ ಪ್ರಭಾವ ಇರತಕ್ಕಂಥವು ಬಿಡಿಎನವರ ಮೇಲೆ ಇನ್‌ಫ್ಲೂಯೆನ್ಸ್ ತೆಗೆದುಕೊಂಡು ಬಂದು ಇನ್ನೂ ಎರಡು ಸಾವಿರ ಕೋಟಿ ರೂಪಾಯಿ ಬೆಲೆ ಬಾಳುವಂತಹ ಜಮೀನನ್ನು ಡಿ-ನೋಟಿಫೈ ಮಾಡುವುದಕ್ಕೆ ಹೊರಟಿದ್ದಾರೆ. ಅದಕ್ಕೆ ತಕ್ಷಣ ನೀವು ಇವತ್ತಿನಿಂದ ನಿಮ್ಮ ಹೆಚ್‌ಯುಡಿ ಹಾಗೂ ಬಿಡಿಎನವರಿಗೆ ಇನ್‌ಸ್ಟ್ರಕ್ಷನ್ ಕೊಡಬೇಕು. ಈ ಸಿಎಂಸಿ ಮತ್ತು ಟಿಎಂಸಿ ನಲ್ಲಿ ಆಗುತ್ತಿರುವಂತಹ ಅವ್ಯವಹಾರವನ್ನು ಕಳೆದ ವಿಧಾನಸಭೆಯಲ್ಲಿ ಮಾನ್ಯ ಜಗದೀಶ್ ಶೆಟ್ಟರೆ, ಮಾನ್ಯ ಬೈರೇಗೌಡ ಹಾಗೂ ಮಾನ್ಯ ಸೋಮಶೇಖರ್ ನಾವೆಲ್ಲಾ ಸಾಕಷ್ಟು ಮಾತನಾಡಿದ್ದೇವೆ. ಇದರ ಬಗ್ಗೆ ಪುನಃ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ, ರಾಜ್ಯದ ಹಿತದೃಷ್ಟಿಯಿಂದ ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವಂತಹ ಜಮೀನಿಗೆ ಏನು ಡಿ-ನೋಟಿಫೈ ಮಾಡುವುದಕ್ಕೆ ಹೊರಟಿದ್ದಾರೆ, ಅದನ್ನು ನಿಲ್ಲಿಸಬೇಕೆಂದು ಆಗ್ರಹ ಮಾಡುತ್ತೇನೆ. ಮತ್ತೆ ನಿಮ್ಮ ಸರ್ಕಾರ ಬಂದಮೇಲೆ ಹೊಸ ಏಳು ಜಿಲ್ಲೆಗಳಾಗಿವೆ. ಅದಕ್ಕೆ ಇನ್‌ಫ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡುವ ದೃಷ್ಟಿಯಿಂದ ಇದುವರೆಗೂ ಸಹ ಏನು ಅಟೆಂಪ್ಟ್ ಆಗಿಲ್ಲ. ಹಾವೇರಿ, ಗದಗ್, ಕೊಪ್ಪಳ, ಚಾಮರಾಜನಗರ ಯಾವುದೇ ಜಿಲ್ಲೆಗೆ ಹೋಗಿ. ಯಾವ ಜಿಲ್ಲೆಗೆ ಹೋದರ ಕೂಡ ಏನೂ ಆಗಿಲ್ಲ. It is a glorified Assistant Commissioner Office. ನೀವು ಒಂದು ಸ್ಪೆಷಲ್ ಲೋನ್ ಆದರೂ ತೆಗೆದುಕೊಂಡು ಇದಕ್ಕೆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಶಾಸಕರ ಅನುದಾನದ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಬಹಳ ಬುದ್ಧಿವಂತರು. ನೀವು ನಮಗೆ ಥ್ಯಾಂಕ್ಸ್ ಹೇಳಿದ್ದೀರಿ. ಶಾಸಕರುಗಳಿಗೆ

ನಾನು ತುಂಬಾ ಚಿರರುಣಿಯಾಗಿದ್ದೇನೆ ಎಂದು ಹೇಳಿದ್ದೀರಿ. ಸ್ವಾಮಿ ನನಗೆ ಏಕೆ ಚಿರರುಣಿಯಾಗಿರುತ್ತೀರಿ? ನಿಮ್ಮ ಟ್ರೆಷರಿ ಕಾಸು ಅದು. ನೋಡಿ ಯಾವ ರೀತಿ ಯಾಮಾರಿಸುತ್ತೀರಿ? ಮಾನ್ಯ ಮುಖ್ಯಮಂತ್ರಿಗಳು ಯಾಮಾರಿಸುವುದರಲ್ಲಿ ನಿಸ್ಸೀಮರು. ಹೇಗೆ ಯಾಮಾರಿಸಿದ್ದಾರೆ ಎಂದರೆ ಒಬ್ಬೊಬ್ಬ ಎಂಎಲ್‌ಗೆ 40 ಲಕ್ಷ ರೂಪಾಯಿ ಅನುದಾನ. ಹೋದ ವರ್ಷ 25 ಲಕ್ಷ ರೂಪಾಯಿ ಅನುದಾನ ಅದೇನೋ 'ಈಗ ರಿಲೇಜ್ ಆಗುತ್ತಿದ್ದು, ಅದರಲ್ಲಿ 50 ಪರ್ಸೆಂಟ್ ಆಕ್ಕಿ ಕೊಡುತ್ತಾರಂತೆ. ಈ ವರ್ಷದ 40 ಲಕ್ಷ ರೂಪಾಯಿ ಅನುದಾನದಲ್ಲಿ ಹತ್ತು ಲಕ್ಷ ರೂಪಾಯಿ ಬರಗಾಲಕ್ಕೆ ತೆಗೆದುಕೊಂಡಿದ್ದೀರಿ. ಇನ್ನು ಉಳಿದಂತಹ 30 ಲಕ್ಷ ರೂಪಾಯಿ ಏನು ಮಾಡಿದ್ದೀರಿ ಎಂದರೆ ಸಾಲದ ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ಮಾಡಿಕೊಂಡಿದ್ದೀರಿ. ಜೊತೆಗೆ ಎಂ.ಪಿ. ಗಳದ್ದು ಒಂದು ಕಾಟ ನಮಗೆ. ಆದರೆ ನನಗೆ ಏನೂ ಇಲ್ಲ ಆ ತರಹ. ನಮ್ಮ ಎಂ.ಪಿ. ಯವರು ನಾನು ಹೇಳಿದ್ದು ಕೇಳುತ್ತಾರೆ. ಕೆಲವು ಕಡೆಗಳಲ್ಲಿ ಕೇಳಿ ಬಂದಿರುವುದು. ನಾನು ಸುಳ್ಳು ಹೇಳುವುದಿಲ್ಲ, ನನಗೆ ಯಾರದ್ದೂ ಹೆದರಿಕೆ ಇಲ್ಲ.

ಶ್ರೀ ಹೆಚ್.ಎಂ. ರೇವಣ್ಣ:- ಖಂಡಿತಾ ಕೊಟ್ಟಿದ್ದಾರಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾನು ಬಹಳ ಹೆಮ್ಮೆಯಿಂದ ಈ ಮಾತನ್ನು ಹೇಳುತ್ತೇನೆ. ಮಾನ್ಯ ಕೃಷ್ಣರವರು ನಮ್ಮ ತಾಲ್ಲೂಕಿಗೆ ರಾಜ್ಯಸಭಾ ಸದಸ್ಯರಾಗಿದ್ದಾಗ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಎರಡು ಕೋಟಿ ರೂಪಾಯಿ ದುಡ್ಡು ಕೊಟ್ಟಿದ್ದರು. ಈಗ ಏಕೋ ನಮ್ಮ ಮೇಲೆ ಅವರ ವಕ್ರ ಕಣ್ಣು ಬಿದ್ದಿದೆ. ಆದರೆ ಈಗ ಅವರು ಮುಖ್ಯಮಂತ್ರಿಗಳಾದ ಮೇಲೆ ಕೊಡುತ್ತಿಲ್ಲ. ಏಕೆ, ಎಲ್ಲಿ ಕೊಟ್ಟಿದ್ದಾರೆ ಎಂದು ನಮಗೂ ಗೊತ್ತಿದೆ. ನಮ್ಮ ಲೋಕಸಭಾ ಸದಸ್ಯರು ಮಾತ್ರ ನಾನು ಹೇಳಿದ ಹಾಗೆ ಒಂದು ಕೋಟಿ ರೂಪಾಯಿಗೆ ಅತ್ಯಂತ ಪ್ರಾಮಾಣಿಕವಾಗಿ ಅಪ್ರೂವಲ್ ಕೊಟ್ಟು, ಕೆಲಸಗಳನ್ನೆಲ್ಲಾ ಪ್ರಾರಂಭ ಮಾಡಿಸಿ ಕುಡಿಯುವ ನೀರಿಗೆ ಸ್ವಲ್ಪ ಸಹಾಯ ಮಾಡಿದ್ದಾರೆ. ಆದರೆ ನಿಮಗೆ ಆ ಸತ್ಯ ಹಿಡಿಸುವುದಿಲ್ಲ, ನಾನು ಏನು ಮಾಡುವುದಕ್ಕಾಗುತ್ತದೆ? ಅದು ಇರಲಿ. ಈಗ ಎಂಪಿ ಗಳದ್ದು ಒಂದು ಕಾರುಬಾರು ನಡೆಯುತ್ತಿದೆ. ಅವರಿಗೆ ಎಲ್ಲಾ ಸಿದ್ಧತೆಗಳನ್ನು ಸರ್ಕಾರದಿಂದ ಮಾಡಿಕೊಟ್ಟಿದೆ. ಅದಕ್ಕೆ ನನ್ನದೇನೂ ತಕರಾರಿಲ್ಲ. ಅವರಿಗೆ ಒಂದು ಕಾರು ಕೊಟ್ಟಿದ್ದೀರಿ, ಬೇಕಾದರೆ ಮುಂದೆ ಕಾರು ಕೊಡಿ ತೊಂದರೆ ಏನೂ ಇಲ್ಲ. ಇವತ್ತು ಪತ್ರಿಕೆಗಳಲ್ಲಿ ಕೆಲವು ವಿಐಪಿಗಳಿಗೆ, ನನಗೂ ಸೇರಿಸಿ ಸೆಕ್ಯೂರಿಟಿ ಕೊಟ್ಟಿದ್ದಾರೆ ಎಂದು ವರದಿಯಾಗಿದೆ. ನನಗೂ ಕೂಡ ಸೆಕ್ಯೂರಿಟಿಯನ್ನು ಕೊಟ್ಟಿದ್ದಾರೆ, ಏಕೆಂದರೆ ನಮ್ಮ ಗೃಹ ಮಂತ್ರಿಗಳು, ವೀರಪ್ಪನ್ ನಿನ್ನ ಮೇಲೆ ಕಣ್ಣಿಟ್ಟಿದ್ದಾನೆ, ಹುಷಾರಾಗಿ ಇರಿ ಸೆಕ್ಯೂರಿಟಿ ಕೊಟ್ಟಿದ್ದಾರೆ ಎಂದು ಎಂಪಿ ಗಳಿಗೆ ಕೊಡಿ ನಮ್ಮದೇನು ತಕರಾರು ಇಲ್ಲ. ಇವರದು ಒಂದು ಕಾರುಬಾರು ಈಗ ಶುರುವಾಗಿದೆ. ಎರಡು ಕೋಟಿ ರೂಪಾಯಿ ಅವರಿಗೆ ಬರುತ್ತಿದೆ. ಪಾಪ ಎಂಎಲ್‌ಎಗಳ ಜೊತೆ ಎಂಎಲ್‌ಸಿಗಳು ಬೇರೆ, ಅವರಿಗೂ ನೀವು ಕೊಡಲೇ ಬೇಕು. ಅವರಿಗೂ ನಮ್ಮಷ್ಟೇ ಎಲ್ಲಾ ಸ್ಟೇಟಸ್ ಇರಬೇಕು. ಸಮಾನವಾಗಿರಬೇಕು ಯಾವುದರಲ್ಲೂ ಅವರಿಗೆ ಏನೂ ಕಡಿಮೆ ಇರಬಾರದು. ಅವರಿಗೆ ಇನ್ನೂ ಸ್ವಲ್ಪ ಹೆಚ್ಚಿರಬೇಕು. ಏಕೆಂದರೆ ಅವರು ಮೇಲ್ಮನೆ ಸದಸ್ಯರು. ಹಿರಿಯ ಸದಸ್ಯರು, ಅವರಿಗೆ ಹೆಚ್ಚಿಗೆ ಇರಬೇಕು. ನಾನೂ ಕೂಡ ಒಂದು ಸಾರಿ ಆ ಮನೆಯಲ್ಲಿ ಇದ್ದೆ. ಪೊಲೀಟಿಕಲ್ ಕನ್‌ವಿನಿಯನ್ಸ್‌ಗೋಸ್ಕರ ಸೀಟನ್ನು ಹೆಗಡೆಯವರಿಗೆ ನಾನು ವೆಕೇಟ್ ಮಾಡಿದ್ದೆ. ಆ ಸಂದರ್ಭದಲ್ಲಿ

ಆರು ತಿಂಗಳು ನಾನು ಅಪ್ಪರ್ ಹೌಸ್‌ನಲ್ಲಿ ಇದ್ದೆ. ಅವರಿಗೂ ಕೊಟ್ಟಿದ್ದೀರಿ ಬಹಳ ಸಂತೋಷ. ಇನ್ನು ಎಂಎಲ್‌ಎ ಗಳು ಸೆಕ್ಷನ್ ಆದ ಮೇಲೆ ಅವರವರ ಕ್ಷೇತ್ರಕ್ಕೆ ಹೋದರೆ, ತಂದೆ ಸಂತೆಗೆ ಹೋಗಿ ಬಂದರೆ ಮಕ್ಕಳು ಚಾಕಲೇಟು, ಕಡ್ಲೆಪುರಿ ತಂದು, ಕೊಡು ಎಂದು ಹೇಗೆ ಮಾಡುತ್ತಾರೆ ಹಾಗೆ ನಮಗೆ ಜನ ಹಿಡಿದುಕೊಳ್ಳುತ್ತಾರೆ. ಆದುದರಿಂದ ದಯಮಾಡಿ ನೀವು ಬಡ್ಡಿ ಮನ್ನಾ ಮಾಡಬೇಕೆಂದು ಇದ್ದರೆ, ನಮ್ಮ ಸರ್ಕಾರದಲ್ಲಿ ಮೂರು ಬಾರಿ 350, 400 ಹಾಗೂ 600 ಕೋಟಿ ರೂಪಾಯಿ ಮನ್ನಾ ಮಾಡಿದ ಹಾಗೆ ಮಾಡಿ. ನಮ್ಮ ಮಾನ್ಯ ಸಿದ್ಧರಾಮಯ್ಯ, ಹೆಗಡೆಯವರಿಗೆ ಮಾನ್ಯ ಜೆ.ಹೆಚ್. ಪಟೇಲ್ ರವರನ್ನು ಇವರೆಲ್ಲರನ್ನು ಈ ಸಂದರ್ಭದಲ್ಲಿ ನೆನಸಿಕೊಳ್ಳುತ್ತೇನೆ. ಏಕೆ ನಿಮ್ಮ ಸರ್ಕಾರಕ್ಕೆ ಅದು ಆಗುತ್ತಿಲ್ಲ? ನೀವು ದುಡ್ಡನ್ನು ಚಾಕಲೇಟು ತೋರಿದ ಹಾಗೆ ತೋರಿಸಿಬಿಟ್ಟು ಅದನ್ನು ನಿಮ್ಮ ಬಾಯಿಗೆ ಹಾಕಿಕೊಳ್ಳುತ್ತಿದ್ದೀರಲ್ಲಾ, ಇದು ನನಗೆ ಅರ್ಥವಾಗುತ್ತಿಲ್ಲ. ಇದು ಶಾಸಕರ ಅನುದಾನ. ಇದಾದಮೇಲೆ ಆಲಮಟ್ಟಿ ನಿರಾಶ್ರಿತರು, ಅಲ್ಲಿ ತಾವು ಹೋದಿರಿ. ಅಲ್ಲಿ ನಿಮ್ಮನ್ನು ಅತ್ತು ಕರೆದು ಕರೆಸಿಕೊಂಡರು. ಚರಂತಿ ಮಠ್ ಅವರ ನಾಯಕತ್ವದಲ್ಲಿ ನಿಮ್ಮ ಪೂಜಾರ್, ನಾಡಗೌಡರು ಎಲ್ಲಾ ಸೇರಿಕೊಂಡು ದೊಡ್ಡ ಹೋರಾಟ ಮಾಡಿದರು. ಸರ್‌ನಾಯಕ್, ಜಿ.ಎಸ್. ಪಾಟೀಲ್ ಎಲ್ಲರೂ ಇದ್ದರು. ಅದಕ್ಕೆ 600 ಕೋಟಿ ರೂಪಾಯಿ ಸ್ಪೆಷಲ್ ಪ್ಯಾಕೇಜ್ ಅನೌನ್ಸ್ ಮಾಡಿದಿರಿ. ಬಹಳ ಸಂತೋಷ. ಆದರೆ ನೀವು ಅದನ್ನು ಕನಿಷ್ಟ ಪಕ್ಷ ಸಾಲದ ರೂಪದಲ್ಲಿದರೂ ತೆಗೆದುಕೊಳ್ಳಿ. ಅದನ್ನು 2-3 ವರ್ಷಗಳಲ್ಲಿ ಆ ಹಣವನ್ನು ತೀರಿಸುವಂತಹ ಕೆಲಸವನ್ನು ಮಾಡಬೇಕು, ಇಲ್ಲದಿದ್ದರೆ ಉತ್ತರ ಕರ್ನಾಟಕವನ್ನು ನಮ್ಮನ್ನು ನೆಗ್ಲೆಟ್ ಮಾಡುತ್ತಾರೆ, ನಮ್ಮನ್ನು ಇಗ್ನೋರ್ ಮಾಡುತ್ತಾರೆಂಬುದು ಯಾವಾಗಲೂ ಶಾಶ್ವತವಾಗಿ ಇರುತ್ತದೆ. ಈ ಕೂಡಲ ಸಂಗಮದ ಬಗ್ಗೆ ಹೇಳುವುದೇನೆಂದರೆ ತಾವು ಅಲ್ಲಿ ಹೋಗಿ ನೋಡಿದ್ದಿರೋ, ಇಲ್ಲವೋ ಗೊತ್ತಿಲ್ಲ. ಅಲ್ಲಿ ಮಾನ್ಯ ಜೆ.ಹೆಚ್. ಪಟೇಲ್‌ರವರ ಪ್ರತಿಮೆಯನ್ನು ಸ್ಥಾಪನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ, ಏಕೆಂದರೆ 12ನೇ ಶತಮಾನದ ಬಸವಣ್ಣನವರ ಸಂಗಮ ಮುಳುಗಿ ಹೋಗುತ್ತಿದ್ದಂತಹ ಸ್ಥಳಕ್ಕೆ ಜೀವವನ್ನು ಕೊಟ್ಟು, ಅದನ್ನು ಅಂತರಾಷ್ಟ್ರೀಯ ಕೇಂದ್ರವನ್ನಾಗಿ ಮಾಡಿರುವಂತಹ ಕೀರ್ತಿ, ದಿವಂಗತ ಕೀರ್ತಿ ಶ್ರೇಷ್ಟರಾದ ಶ್ರೀಮಾನ ಜೆ.ಹೆಚ್. ಪಟೇಲ್‌ರವರಿಗೆ ಹೋಗಬೇಕು, ಆದುದರಿಂದ ಅವರ ಪ್ರತಿಮೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ, ಈಗ ಅಲ್ಲಿಗೆ ಲಕ್ಷಾಂತರ ಜನರು ಹೋಗುತ್ತಿದ್ದಾರೆ, ದಯಮಾಡಿ ಇವರ ಪ್ರತಿಮೆಯನ್ನು ಅಲ್ಲಿ ಮಾಡಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ಕೊನೆಯದಾಗಿ ಕಬ್ಬು ಬೆಳೆಗಾರರದ್ದು ಕಷ್ಟ ಪರಿಸ್ಥಿತಿ ಇದೆ, ನೀವು ಕಾವೇರಿ ನೀರನ್ನು ಬಿಟ್ಟಿದ್ದೀರಿ. ಕೆಲವು ಸಾರಿ ಅನಿವಾರ್ಯವಾಗಿ ಸುಪ್ರೀಂ ಕೋರ್ಟ್‌ನ ತೀರ್ಪಿನಂತೆ ಬಿಡಬೇಕಾಗುತ್ತದೆಂದು ಹೇಳಿದ್ದೀರಿ, ಕೆಲವು ಸಾರಿ ಪ್ರಮಾಣವಚನ ಮಾಡಿದ್ದಿರಿ, ಕೆಲವು ಸಾರಿ ಕೇಂದ್ರ ಸರ್ಕಾರದತ್ತ ಬೆರಳು ಮಾಡಿ ತೋರಿಸಿದಿರಿ, ಕೆಲವು ಸಾರಿ ಅನಿವಾರ್ಯವೆಂದು ಹೇಳಿದ್ದಿರಾ, ಕೆಲವು ಸಾರಿ ಪಾದಯಾತ್ರೆಯನ್ನು ಮಾಡಿದ್ದಿರಾ, ನಿಮಗೂ ಸುಸ್ತು ಆಯಿತು. ಇಷ್ಟೆಲ್ಲಾ ಆದ ಮೇಲೂ ಸಹಿತ ನಿಮಗೆ ನೀರನ್ನು ಉಳಿಸಿಕೊಳ್ಳುವುದಕ್ಕೆ ಆಗಲಿಲ್ಲ. ಈಗ ಏನಾಗಿದೆ ಎಂದರೆ, ಸಕ್ಕರೆ ಕಾರ್ಖಾನೆಗಳನ್ನು ಮುಚ್ಚಿದ್ದಾರೆ, ಕೇವಲ ಮಂಡ್ಯ ಜಿಲ್ಲೆಯಲ್ಲಿ ಮಾತ್ರವಲ್ಲ, ಬೆಳಗಾವಿ ಜಿಲ್ಲೆಯಲ್ಲೂ ಕೂಡ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವುದಕ್ಕೆ ನೀರಿಲ್ಲ, ಇಂತಹ ಸಂದರ್ಭದಲ್ಲಿ ಬೇರೆ ಬೇರೆ ಕಡೆಗಳಿಗೆ ನಮ್ಮ ರೈತರು ಕಬ್ಬನ್ನು ಸಾಗಿಸಬೇಕಾಗಿದೆ. ಅದಕ್ಕೆ ಸ್ವಲ್ಪ ಆದರೂ

ಟ್ರಾನ್ಸ್‌ಪೊರ್ಟೇಶನ್ ಸಬ್ಸಿಡಿಯನ್ನು ಕೊಡಲೇ ಬೇಕೆಂದು ಹೇಳಿ, ನಾನು ಒತ್ತಾಯ ಮಾಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೇ, ಈ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ನಾವು ಮಾತನಾಡುತ್ತೇವೆಂದು ಬಹಳ ಜನರು, ಸಂಘ ಸಂಸ್ಥೆಗಳವರೂ ನೋಡುತ್ತಿರುತ್ತಾರೆ. ಇಲ್ಲಿ ತಾವು ಒಂದು ಆದೇಶವನ್ನು ಮಂತ್ರಿಗಳಿಗೆ ಕೊಡಬೇಕು, ಏನೆಂದರೆ ಅಂಗನವಾಡಿ ಕಾರ್ಯಕರ್ತರು, ಸಾರ್ವಜನಿಕ ಗ್ರಂಥಾಲಯದ ಮೇಲ್ವಿಚಾರಕರು, ಅರೆ ಸರ್ಕಾರಿ ಮತ್ತು ದಿನಗೂಲಿ ನೌಕರರು, ಚಿತ್ರಕಲಾ ಮತ್ತು ಸಂಗೀತದ ಅಧ್ಯಾಪಕರು, ಇವರೆಲ್ಲರೂ ಸಹಿತ ವಿಧಾನಸೌಧದಲ್ಲಿ ವಿಧಾನಸಭೆ ನಡೆಯುತ್ತದೆಂದು ಹೇಳಿ, with some expectations. ಅವರೆಲ್ಲಾ ಇಲ್ಲಿಗೆ ಆರ್ಗನೈಸ್ ಮಾಡಿಕೊಂಡು ಬರುತ್ತಾರೆ. ನೀವು ಎಸ್‌ಪಿಯಲ್ಲಿದ್ದಂಥವರು, ಹೋರಾಟ ಮಾಡಿ ಬಂದಿರುವಂಥವರು, ಇಲ್ಲಿ ಕನಿಷ್ಠ ಪಕ್ಷ ಮಾನ್ಯ ಮಂತ್ರಿಗಳು ಹೋಗಿ ಅವರನ್ನು ಏನು ಎಂದು ಕೇಳುವಂತಹ ಸೌಜನ್ಯತೆಯನ್ನು ತೋರಿಸುವುದಿಲ್ಲ, ಇವರನ್ನು ಅವರು ಏನೂ ಹೊಡೆಯುವುದಿಲ್ಲ, ಬಡಿಯುವುದಿಲ್ಲ, ಅನೇಕ ಮಂತ್ರಿಗಳು ಇದ್ದಾರೆ, ಕೆಲವರು ಸೌಜನ್ಯತೆಯನ್ನು ತೋರಿಸಿದ್ದಾರೆ, ಅವರನ್ನು ಕರೆಸಿ ಅವರ ಸಮಸ್ಯೆಗಳನ್ನು ಸ್ಪಂದಿಸುವಂತಹ ಕೆಲಸ ಮಾನ್ಯ ಮುಖ್ಯಮಂತ್ರಿಯವರಿಂದ ಆಗಬೇಕು. It must be done from your side. ಆಗ ಏನಾಗುತ್ತದೆಂದರೆ ಆ ಆಫೀಸರ್‌ಗೆ ಒಂದು ಸಿಗ್ನಲ್ ಹೋಗುತ್ತದೆ. ಆದುದರಿಂದ ತಾವು ಈ ಕೆಲಸವನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ, ಮಾನ್ಯ ಮುಖ್ಯಮಂತ್ರಿಯವರೇ, ನಾನು ಬಹಳ ದುಃಖದಿಂದ ಈ ಮಾತನ್ನು ಹೇಳುತ್ತಿದ್ದೇನೆ, ನಾನು ಇತ್ತೀಚೆಗೆ ಒಂದು ಕೆಲಸದ ಮೇಲೆ ದೆಹಲಿಗೆ ಹೋಗಿದ್ದಂತಹ ಸಂದರ್ಭದಲ್ಲಿ, ಕೇಂದ್ರ ಸರ್ಕಾರದ ಕೆಲವು ಅಧಿಕಾರಿಗಳನ್ನು ಭೇಟಿ ಮಾಡಿದ್ದೆ. ನಮ್ಮ ಸ್ಟೇಟ್ ಗೌವರ್ನಮೆಂಟ್‌ನ ಪ್ರಪೋಸಲ್ಸ್ ಯೂನಿಯನ್ ಗೌವರ್ನಮೆಂಟ್‌ಗೆ ಹೋಗುತ್ತಿಲ್ಲ. I am sorry for say this. "ಸ್ವಜನಾಧಾರ" ಕಾರ್ಯಕ್ರಮದಲ್ಲಿ, ಒಂದು ಸಾವಿರ ಕೋಟಿ ರೂಪಾಯಿಗಳನ್ನು ಆಂಧ್ರ ಸರ್ಕಾರ ತೆಗೆದುಕೊಂಡಿದೆ, ಇದನ್ನು ನೀವು ಏಕೆ ತೆಗೆದುಕೊಳ್ಳುವುದಕ್ಕೆ ಆಗಿಲ್ಲ? ಇದುವರೆಗೂ ನೀವು ಕಳುಹಿಸಿರುವಂತಹ ಪ್ರಪೋಸಲ್ಸ್ 70 80 ಇದೆ ನೀವು ಕಳುಹಿಸುವುದಕ್ಕೆ ತೊಂದರೆ ಏನಿದೆ? ಎಂಬುದು ನನಗೆ ಅರ್ಥವಾಗುತ್ತಿಲ್ಲ. ಜಿಲ್ಲಾ ಮಂತ್ರಿಗಳು ಸಂಬಂಧಪಟ್ಟ ಶಾಸಕರನ್ನು ಕರೆಸಿ ಅಲ್ಲಿರತಕ್ಕಂಥ ರಿಸೋರ್ಸ್ಸ್ ಅನ್ನು ಮೊಬಲೈಸ್ ಮಾಡಿಸಿ, ಅದನ್ನು ಮಾಡತಕ್ಕಂಥವರಿಗೆ ಅಧಿಕಾರವನ್ನು ಕೊಡಿ ಬೇಗ ಕ್ಯಾಬಿನೆಟ್ ರೀಷಫಲ್ ಆದರೂ ಮಾಡಿ, ಮಾಡಿದರೆ ಸ್ವಲ್ಪ ಅನುಕೂಲವಾಗಬಹುದು. ಈ ಸೆಂಟ್ರಲ್ ರೋಡ್ ಫಂಡ್‌ನಲ್ಲಿ. I appreciate Mr. Dharmasingh. ಇವರು ಇನ್ನೂರು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಬಂದಿದ್ದಾರೆ. ಅವರು ನಮಗೆ ಹೇಳಿದರು, ಇನ್ನೂ ನಮಗೆ ಅವಕಾಶವಿದೆ, ಕೇಂದ್ರ ಸರ್ಕಾರದವರು ದುಡ್ಡು ಕೊಡುತ್ತಿದ್ದಾರೆಂದು ಹೇಳಿದರು. ನ್ಯಾಷನಲ್ ಹೈವೇ ಗ್ರಾಂಟ್ಸ್ ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಪ್ರಪೋಸಲ್ಸ್ ಇಲ್ಲ, This is a very very important ವಿಚಾರವಾಗಿದೆ. ಸಮಾಜದ ಹಿಂದುಳಿದ ಜನಾಂಗದವರಿಗೆ, ದುರ್ಬಲವರ್ಗದವರಿಗೆ, ನೀವು ಸಹಾಯ ಮಾಡಬೇಕೆಂದು ಇದ್ದರೆ, ಕೇಂದ್ರ ಸರ್ಕಾರದ ಬಗ್ಗೆ ವಿಚಾರ ಮಾಡಬೇಕೆಂದು ಹೇಳುತ್ತೇನೆ, ಇನ್ನು ಅರಣ್ಯ ಭೂಮಿಯ ವಿಚಾರ ಮಾನ್ಯ ಅರಣ್ಯ ಮಂತ್ರಿಯವರು ಇದರ ಸತ್ಯಾಸತ್ಯತೆಯನ್ನು ರಾಜ್ಯದ ಜನರಿಗೆ ತಿಳಿಸಬೇಕು, ಏನೆಂದರೆ ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಿಯವರು ಏನು ಹೇಳಿದ್ದಾರೆಂದರೆ, ಕರ್ನಾಟಕ ರಾಜ್ಯ ಸರ್ಕಾರದವರು ಅರಣ್ಯ ಭೂಮಿಯನ್ನು

ಸಕ್ರಮಗೊಳಿಸುವುದಕ್ಕೆ, ಯಾವುದೂ ಪ್ರಪೋಸಲ್ಸ್ ಕೊಟ್ಟಿಲ್ಲವೆಂದು ಲೋಕಸಭೆಯಲ್ಲಿ ಹೇಳಿದ್ದಾರೆ. ಇವರು ಬೇರೆ ಎಲ್ಲೂ ಹೇಳಿಲ್ಲ, He has told on floor of the Parliament, why you have not sent. What is the position ಇಲ್ಲಿ ಸುಮಾರು ಎರಡೂವರೆ, ಮೂರು ಲಕ್ಷ ಜನರು, ಇಲ್ಲಿ ತಾವು ನಿನ್ನೆ ದಿವಸ ಹೇಳಿದಂತಹ ವಿಚಾರ ಬೇರೆ. ಹಳೆಯ ಕರ್ನಾಟಕದಲ್ಲೂ ಇದ್ದಾರೆಂಬುದು ತಮಗೂ ಗೊತ್ತಿದೆ, ಮಲೆನಾಡು ಪ್ರದೇಶದಲ್ಲೂ, ಇದ್ದಾರೆಂಬುದು ಗೊತ್ತಿದೆ, ಇಲ್ಲಿ ನಿಮಗೆ ತೊಂದರೆ ಏನಿದೆ? ನಿಮ್ಮ ಕ್ಯಾಬಿನೆಟ್ ಮೀಟಿಂಗ್, ಸಬ್ ಕಮಿಟಿ ಮಿಟಿಂಗ್ ಮಾಡುವುದಕ್ಕೆ ಜಾಗವಿಲ್ಲವೋ? ಟೈಮ್ ಇಲವೋ, ಏನು ತೊಂದರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇನ್ನು ಸಾಹಿತ್ಯ ಪರಿಷತ್ತಿನ ಕೆಲವು ನಿರ್ಣಯಗಳು, ಈ ವಿಚಾರವಾಗಿ ನೀವು ಮಾತನಾಡುವಾಗ ಇದ್ದೀರಿ, ಈ ನಿರ್ಣಯಗಳನ್ನು ಜಾರಿಗೊಳಿಸುವುದಕ್ಕೆ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿ, ಏಕೆಂದರೆ ಸಾಹಿತ್ಯ ಪರಿಷತ್ತು ಕೇವಲ ಸಾಹಿತಿಗಳ ಸಾಹಿತ್ಯವನ್ನು ಚರ್ಚೆ ಮಾಡುವಂತಹ ವೇದಿಕೆಯಾಗಿಲ್ಲ. ಇದು ರಾಜ್ಯದ ನೆಲ, ಜಲ, ಭಾಷೆಯನ್ನು ಸಂರಕ್ಷಣೆ ಮಾಡುವಂತಹ ವೇದಿಕೆಯಾಗಿದೆ, ಅದರಲ್ಲೂ ಗಡಿ ವಿಚಾರದಲ್ಲಿ, ನಾನು ಒತ್ತಾಯ ಮಾಡುತ್ತಿದ್ದೇನೆ. ಈಗ ಮಹಾರಾಷ್ಟ್ರ ಸರ್ಕಾರದವರು ಕೇಂದ್ರ ಸರ್ಕಾರದ ಬಳಿ ಹೋಗುತ್ತಿದ್ದಾರೆ, ತಾವು ಸದನದ ಹೊರಗಡೆ ಏನು ಹೇಳಿದ್ದೀರಿ, 'ಎಂದರೆ ಮಹಾಜನ್ ವರದಿಯ ವಿಚಾರದಲ್ಲಿ ನಮ್ಮ ತೀರ್ಪು ಅಂತಿಮ, ಮಹಾರಾಷ್ಟ್ರ ಸರ್ಕಾರದವರು ದೆಹಲಿಗೆ ಹೋಗಿ ತಂಟೆ ಮಾಡಿದರೆ, ಅದಕ್ಕೆ ನಾವು ತಜ್ಞರನ್ನೊಳಗೊಂಡ ವಕೀಲರುಗಳ ಸಮಿತಿಯನ್ನು ನೇಮಕ ಮಾಡುತ್ತೇವೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಆ ರೀತಿ ಮಾಡಿದರೆ ಸಂತೋಷ, ಆ ರೀತಿ ಏನಾದರೂ ಮಾಡದಿದ್ದರೆ ತಕ್ಷಣ ಮಾಡಬೇಕೆಂದು ನನ್ನ ಆಗ್ರಹ ಇದೆ, ಈ ಕೆಲಸ ಆಗಲೇ ಬೇಕಾಗಿದೆ. ಇನ್ನು ಆಯೋಗಗಳ ಬಗ್ಗೆ ಹೇಳುವುದಾದರೆ ಎಷ್ಟು ಆಯೋಗಗಳನ್ನು ಮಾಡಿದ್ದೀರಿ? ಮಾನ್ಯ ಎಂ. ವೀರಪ್ಪಮೊಯಿಲಿಯವರು, ಇವರು ಖಾತರದಿಂದ ಇದ್ದಾರೆ. ನನ್ನ ವರದಿ ಯಾವಾಗ ಇಂಪ್ಲಿಮೆಂಟ್ ಆಗುತ್ತದೆಂದು ಕಾಯುತ್ತಿದ್ದಾರೆ. ಮತ್ತೆ ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರ ವರದಿ, ಹಾಗೂ ಡಾ|| ಸುದರ್ಶನ್‌ರವರ ವರದಿ, ನಾರಾಯಣ ಮೂರ್ತಿಯವರ ವರದಿ, ಮಾನ್ಯ ವಾಟಾಳ್ ನಾಗರಾಜ್‌ರವರ ವರದಿ, ಮಾನ್ಯ ಬರಗೂರು ರಾಮಚಂದ್ರಪ್ಪನವರ ವರದಿ, ಹೀಗೆ ವರದಿಗಳನ್ನು ತರಿಸಿಕೊಂಡು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ? ಇದು ಟಾಸ್‌ಫೋರ್ಸ್ ಇದ್ದ ಹಾಗೆ, ಆ ವರದಿಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಇನ್ನು ನಿಮಗೆ ಉಳಿದಿರುವುದು 18 ತಿಂಗಳುಗಳು ಮಾತ್ರ ಇದೆ. ಈಗ ನೀವು ಸಮರೋಪಾದಿಯಾಗಿ ಕೆಲಸವನ್ನು ಮಾಡಬೇಕಾಗಿದೆ. ನಿಮ್ಮ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ನಾಯಕರುಗಳು ಇಲ್ಲಿಗೆ ಬಂದು, ಗ್ರಾಮ ಪಂಚಾಯತ್‌ನಲ್ಲಿ ಕಾಂಗ್ರೆಸ್ ಕಮಿಟಿಯನ್ನು ಮಾಡಬೇಕೆಂದು ಇದ್ದಾರಲ್ಲಾ, ಇದು ಸಂತೋಷದ ವಿಚಾರ, ಇದಕ್ಕೆ ನಾವು ಸದನದ ಹೊರಗಡೆ ಉತ್ತರವನ್ನು ಕೊಡುತ್ತೇವೆ. ಆದರೆ ತಾವು ಕಾಂಗ್ರೆಸ್ ಪಕ್ಷದ ವತಿಯಿಂದ ಮುಖ್ಯಮಂತ್ರಿಗಳಾಗಿರುವವರು, ನನ್ನ ಅಭಿಪ್ರಾಯದಲ್ಲಿ ಇದನ್ನು ತಕ್ಷಣ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಆಗ್ರಹ ಮಾಡುತ್ತೇನೆ. ಇನ್ನು ಟ್ರಾನ್ಸ್‌ಫರೆನ್ಸಿ ಆಕ್ಟ್‌ನಲ್ಲಿ ಅನೇಕ ಕಡೆಗಳಲ್ಲಿ ಎಕ್ಸಮ್ಷನ್ ಕೊಟ್ಟಿದ್ದಾರೆ. ನಾನು ಸದನದಲ್ಲಿ ಪ್ರಸ್ತಾಪ ಮಾಡಿದಾಗ ತಾವು ಇರಲಿಲ್ಲ. ಈ ಎಕ್ಸ್‌ಮಷನ್ ಏಕೆ ಕೊಟ್ಟಿದ್ದಿರಾ? ಅದರ ಬಗ್ಗೆ ಯಾವ ಯಾವ ಕೇಸ್‌ನಲ್ಲಿ ಟ್ರಾನ್ಸ್‌ಫರೆನ್ಸಿ ಆಕ್ಟ್‌ನಲ್ಲಿ ಎಕ್ಸಮ್‌ಷನ್ ಕೊಟ್ಟಿದ್ದಿರಾ, ಎಂಬುದನ್ನು ಪಬ್ಲಿಷ್ ಮಾಡಬೇಕೆಂದು

ಹೇಳುತ್ತೇನೆ. It is necessary. ನೀವು ಒಂದು ಕಡೆ ಟ್ರಾನ್ಸ್‌ಫರೆನ್ಸಿ ಆಕ್ಟ್ ಮಾಡಿಕೊಂಡಿದ್ದೀರಿ, ಇನ್ನೊಂದು ಕಡೆ ಮುಳುಗುತ್ತಿರುವಂತಹ ಬೋರ್ಡ್ಸ್, ಕಾರ್ಪೋರೇಷನ್‌ಗಳಲ್ಲಿ ಅಲ್ಲೂ ಕೂಡ ಟ್ರಾನ್ಸ್‌ಫರೆನ್ಸಿ ಆಕ್ಟ್ ಅನ್ನು ಎಗ್ಸಮ್ಟ್ ಮಾಡುವುದಕ್ಕೆ ಇನ್ನು ಒಂದು ವರ್ಷ ಟೈಮ್ ಕಾನೂನು ಸಚಿವರು ತೆಗೆದುಕೊಂಡರು. ನಾನು ಅವತ್ತೇ ಹೇಳಿದೆ ನೀವು ಎಷ್ಟು ಕೇಸ್‌ಗಳಲ್ಲಿ ಟ್ರಾನ್ಸ್‌ಫರೆನ್ಸ್ ಕೇಸ್‌ಗಳಲ್ಲಿ ಎಕ್ಸಮ್‌ಷನ್ ಕೊಟ್ಟಿದ್ದೀರಿ? ಯಾವ ಘನ ಉದ್ದೇಶಕ್ಕೆ ಕೊಟ್ಟಿದ್ದೀರೆಂಬುದನ್ನು ತಿಳಿಸಬೇಕೆಂಬ ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರಿಗೆ ಸಮಯವಿರುವುದಿಲ್ಲ, ತಮ್ಮ ಕಾರ್ಯದರ್ಶಿಯವರಿಗೆ ಹೇಳಿ, ಸಿಎಜಿಯವರು ಒಂದು ರಿಪೋರ್ಟ್ ಕಳುಹಿಸುತ್ತಾರೆ. ನಾವು ಪಬ್ಲಿಕ್ ಅಕೌಂಟ್ ಕಮಿಟಿಯಲ್ಲಿ ಈ ಸಿಎಜಿ ರಿಪೋರ್ಟ್‌ಗಳೆಲ್ಲವನ್ನು ಓದುತ್ತಿದ್ದೇವೆ. ನಮ್ಮ ಸರ್ಕಾರದಲ್ಲಿದ್ದಂತಹ ಅವ್ಯವಸ್ಥೆಯು ರಿಫ್ಲೇಕ್ಟ್ ಆಗಿದೆ, ನಿಮ್ಮ ಸರ್ಕಾರದ್ದು ಕೆಲವು ರಿಫ್ಲೆಕ್ಟ್ ಆಗುತ್ತಿದೆ, ತಾವು ಅದನ್ನು ದಯಮಾಡಿ ತರಿಸಿಕೊಂಡು ಓದಬೇಕು. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು 25,000 ಹಳ್ಳಿಗಳಲ್ಲಿ ಕುಡಿಯುವುದಕ್ಕೆ ಯೋಗ್ಯವಲ್ಲದ, ನೀರನ್ನು ಕೊಡುತ್ತಿದ್ದೇವೆ. ಮತ್ತೆ ಹಣಕಾಸಿನ ದುರುಪಯೋಗ ಪರಮಾವದಿಯನ್ನು ಮುಟ್ಟಿದೆ, ಆ ಸಿಸ್ಟಂ ಅನ್ನು ಇಂಪ್ರೂಮೆಂಟ್ ಮಾಡುವುದಕ್ಕಾದರೂ, ಆ ರಿಪೋರ್ಟ್‌ಗಳನ್ನು ತಾವು ಓದಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಈ ಪ್ರತ್ಯೇಕ ರಾಜ್ಯವಾಗಬೇಕೆಂದು ಕೂಗು ಏನಿದೆ, ಅದನ್ನು ಕೊನೆಗಾಣಿಸಬೇಕಾದರೆ ಡಾ|| ನಂಜುಂಡಪ್ಪನವರ ವರದಿಗೆ ನಾಳೆ ಮಂಡಿಸುವಂತಹ ಬಜೆಟ್‌ನಲ್ಲಿ ಅವರು 8,000 ಕೋಟಿ ರೂಪಾಯಿಗಳನ್ನು ಏನು ಕೇಳಿದ್ದಾರೆ, 8 ಸಾವಿರ ಕೋಟಿ ರೂ. ಯನ್ನು ಅವರು 6 ವರ್ಷಗಳಲ್ಲಿ ಕೇಳಿದ್ದಾರೆ, ಅದನ್ನು ಸಾಲದ ರೂಪದಲ್ಲಾದರೂ ಸರಿ, ಏಕೆಂದರೆ ಇಲ್ಲಿ ಎರಡು ಕರ್ನಾಟಕವಾಗುವುದು ಬೇಡವೆನ್ನುವಂಥಾದ್ದು, ನಮಗೆಲ್ಲರಿಗೂ ಗೊತ್ತಿರುವಂತಹ ವಿಚಾರ. ಇದು ಅದೇ ರೀತಿಯಲ್ಲಿ ಪ್ರಾರಂಭದಲ್ಲಿರುತ್ತದೆ, ಮುಂದೆ ಅದು ದೊಡ್ಡ ಹೆಮ್ಮರವಾಗಿ ಬೆಳೆಯುವುದಕ್ಕೆ ಮುಂಚೆ, ಈಗ ಹುಬ್ಬಳ್ಳಿ ಹೈಕೋರ್ಟ್ ಪೀಠದ್ದು ಆಗುತ್ತಿದೆಯಲ್ಲ ಬಜೆಟ್‌ನಲ್ಲಿ ದುಡ್ಡು ಕೊಡುತ್ತೀರಿ ಪೀಠ ಆಗುವುದೇ ಇಲ್ಲ. ಆ ರೀತಿಯಾಗಿ ಡಾ|| ನಂಜುಂಡಪ್ಪನವರ ವರದಿಯಾಗಬಾರದು, ಇದನ್ನು ಜಾರಿಗೊಳಿಸುವುದಕ್ಕೆ ಬೇಕಾಗಿರುವಂತಹ ಹಣವನ್ನು ಒದಗಿಸಬೇಕೆಂದು ಒತ್ತಾಯ ಮಾಡುತ್ತಾ, ಮಾನ್ಯ ಅಧ್ಯಕ್ಷರೇ, ತಾವು ಕೊಟ್ಟಿರುವಂತಹ 60 ನಿಮಿಷಗಳ ಕಾಲಾವಕಾಶದಲ್ಲಿ ನಾನು ಇನ್ನು ಅನೇಕ ವಿಚಾರಗಳನ್ನು ಹೇಳಬೇಕೆಂದು ಇದ್ದೆ, ಆದರೆ ಅವುಗಳನ್ನು ಬೇರೆ ಸಂದರ್ಭದಲ್ಲಿ ಮಾತನಾಡುತ್ತೇನೆಂದು ಹೇಳಿ, ನಾನು ತಮಗೆ ವಂದಿಸಿ, ಈ ರಾಜ್ಯಪಾಲರ ವಂದನಾ ನಿರ್ಣಯ ಏನಿದೆ, ಈ ಪ್ರಸ್ತಾವನೆಯನ್ನು ಮಾನ್ಯ ಎಸ್.ಪಿ. ಮುದ್ದಹನುಮೇಗೌಡರು, ಹಾಗೂ ಮಾನ್ಯ ನಂಜಯ್ಯನವರು ಸಭೆಯಲ್ಲಿ ಏನು ಮಂಡಿಸಿದ್ದಾರೆ ಮತ್ತೆ ಬೆಂಬಲವನ್ನು ಸೂಚಿಸಿದ್ದಾರೆ. ಈ ಬೆಂಬಲ ಕೇವಲ ಔಪಚಾರಿಕವಾಗಿರತಕ್ಕಂಥ ಬೆಂಬಲ, ಇದು ಅವರುಗಳ ಹೃದಯಗಳಿಗೂ ಗೊತ್ತಿದೆ, ಸಾಧನೆ ಶೂನ್ಯವೆನ್ನತಕ್ಕಂಥಾದ್ದು, ಆದುದರಿಂದ ನಾನು ತಟಸ್ಥನಾಗಿ ಈ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ, ತಮಗೆ ಧನ್ಯವಾದಗಳು.

ಅಧ್ಯಕ್ಷರು:- ಒಟ್ಟು 16 ಗಂಟೆಗಳು ಚರ್ಚೆ ನಡೆದಿದೆ, ಅದರಲ್ಲಿ ಬಿಜೆಪಿಯವರು 6 ಗಂಟೆ ಮಾತನಾಡಿದ್ದಾರೆ, ಜನತಾದಳ 5 ಗಂಟೆ ಮಾತನಾಡಿದ್ದಾರೆ, ಮತ್ತೆ ಚಿಕ್ಕ ಚಿಕ್ಕ ಪಾರ್ಟಿಗಳು,

ಮತ್ತೆ ಸ್ವತಂತ್ರವಾಗಿ ಗೆದ್ದಿರುವಂತಹ ಸದಸ್ಯರುಗಳು ಮಾತನಾಡಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಉತ್ತರವನ್ನು ಕೊಟ್ಟು, ಮೇಲ್ಮನೆಯಲ್ಲಿ ನಂತರ ಉತ್ತರವನ್ನು ಕೊಡಬೇಕಾಗುತ್ತದೆ, ನಾವು ನಿನ್ನೆಯ ದಿವಸ 11 ಗಂಟೆಗೆ ಉತ್ತರ ಕೊಡುತ್ತಾರೆಂದು ಹೇಳಿದ್ದೆವು, ಆದರೂ 20 ನಿಮಿಷಗಳು ನಿಧಾನವಾಗಿದೆ.

ಅಧ್ಯಕ್ಷರು:- ಕ್ಯಾಲ್ಕುಲೇಶನ್ ಶೀಟ್ ಅನ್ನು ತಮಗೆ ಕಳುಹಿಸಿಕೊಡುತ್ತೇನೆ, ನೋಡಬಹುದು. ಬಿಜೆಪಿಯವರು ಒಟ್ಟು 6 ಗಂಟೆಯಾಗಿದೆ.

ಶ್ರೀ ಆರಗಜ್ಞಾನೇಂದ್ರ:- ಒಟ್ಟು 16 ಗಂಟೆಯನ್ನು ಡಿವೈಡ್ ಮಾಡಿರುವುದು ಸರಿಯಾಗಿದೆಯೇ?

ಅಧ್ಯಕ್ಷರು:- ನಾನು 16 ಗಂಟೆ ಬಗ್ಗೆ ಹೇಳುತ್ತಿರುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- 36 ಜನಕ್ಕೆ 6 ಗಂಟೆ ಸಮಯ ಸಾಕಾ? ತಾವು ನಿನ್ನೆ ರಾತ್ರಿ ಇರಲಿಲ್ಲ, ರಾತ್ರಿ 8.30 ಗಂಟೆಗೆ ಸಭೆ ಮುಗಿಯುವಾಗ ಉಪಾಧ್ಯಕ್ಷರು, ಚರ್ಚೆ ಇಲ್ಲಿಗೆ ಮುಗಿದಿದೆ ಎಂದು ಹೇಳಿ ಮುಗಿಸಿ, ಬೆಳಿಗ್ಗೆ 10.00 ಗಂಟೆಗೆ ಸದನದ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಂದು ಹೇಳಿದರು. ನಾವೆಲ್ಲರೂ ಸಾಕ್ಷಿಯಾಗಿದ್ದೇವೆ, ನೀವು ಕಡತದ ದಾಖಲೆಗಳನ್ನು ನೋಡಿಕೊಳ್ಳಬಹುದು. ತಾವು ಚರ್ಚೆಗೆ ಬೆಳಿಗ್ಗೆ ಅವಕಾಶ ಕೊಟ್ಟಿದ್ದೀರಿ, ನಮಗೂ ಅವಕಾಶ ಕೊಡಿ ನಿನ್ನೆ ರಾತ್ರಿ ಚರ್ಚೆ ಮುಗಿದಿದೆ ಎಂದು ಹೇಳಿದ ಮೇಲೆ, ಇವತ್ತು ಬೆಳಿಗ್ಗೆ ಮತ್ತೆ ಚರ್ಚೆಗೆ ಅವಕಾಶ ಕೊಡುವುದಾದರೇ ಎಲ್ಲಾ ಪಕ್ಷದವರಿಗೂ ನಾವು ಸೇರಿದಂತೆ ಅವಕಾಶ ಕೊಡಿ.

ಅಧ್ಯಕ್ಷರು:- ಮಾನ್ಯ ಹೆಗಡೆಯವರೇ, ಬಜೆಟ್ ಮೇಲೆ ಮಾತನಾಡಿ. ದಯವಿಟ್ಟು ಈಗ ಬೇಡ ಸಹಕರಿಸಿ, ಮುಖ್ಯಮಂತ್ರಿಗಳು ಮಾತನಾಡಲಿಕ್ಕೆ ಶುರು ಮಾಡಿದರೆ ಎರಡು ಗಂಟೆಯಾಗುತ್ತದೆ ಆಮೇಲೆ ಕ್ಲಾರಿಫಿಕೇಶನ್ ಎರಡೂವರೆ ಗಂಟೆಯಾಗುತ್ತದೆ ದಯವಿಟ್ಟು ನನ್ನ ಮಾತು ಕೇಳಿ.

ಶ್ರೀ ಆರಗಜ್ಞಾನೇಂದ್ರ:- ತಾವು ನಮ್ಮ ರಕ್ಷಣೆಗೆ ಬಾರದಿದ್ದರೆ ಹೇಗೆ? ಇವತ್ತು ಮತ್ತೆ ಚರ್ಚೆಗೆ ಅವಕಾಶ ಕೊಟ್ಟಿದ್ದು ಸರಿಯೇ ಏಕೆಂದರೆ ನಮ್ಮಲ್ಲಿ ಯಾರೇ ಎದ್ದು ನಿಂತರು ಕೂರಿಸುತ್ತಿರಿ. ನಮ್ಮ ಭಾವನೆಗಳನ್ನು ವ್ಯಕ್ತ ಮಾಡುವುದು ಯಾವಾಗ? 36 ಜನರಿಗೆ 6 ಗಂಟೆ ಸಮಯ ಸಾಕಾ?

ಅಧ್ಯಕ್ಷರು:- ತಮಗೆ ಅನೇಕ ಸಾರಿ ಅಕಾಮಡೇಟ್ ಮಾಡಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಮಗೆ ಅವಕಾಶ ಕೊಡದಿರುವುದರಿಂದ ಇಲ್ಲಿ ನಮ್ಮ ಪ್ರತಿಭಟನೆಯನ್ನು, ಆರೋಪವನ್ನು ಇಲ್ಲಿ ದಾಖಲಿಸಲು ಬಯಸುತ್ತೇವೆ.

ಅಧ್ಯಕ್ಷರು:- ದಯವಿಟ್ಟು ತಮಗೆಲ್ಲಾ ಆಯವ್ಯಯ ಭಾಷಣದ ಮೇಲೆ ಮಾತನಾಡಲಿಕ್ಕೆ ಹೆಚ್ಚು ಹೆಚ್ಚು ಅವಕಾಶವನ್ನು ಕೊಡುತ್ತೇನೆ, ದಯವಿಟ್ಟು ನನ್ನ ಮಾತನ್ನು ಕೇಳಿ, ಆಯವ್ಯಯವನ್ನು ನಾವು 28ನೇ ತಾರೀಖು ಪಾಸ್ ಮಾಡಬೇಕಾಗಿರುವುದು ಇನ್ನು ಕಾಲಾವಕಾಶವಿದೆ, ಮಾನ್ಯ ಮುಖ್ಯಮಂತ್ರಿಗಳು ತಾವು ಉತ್ತರ ಶುರು ಮಾಡಿ.

+ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣಕ್ಕೆ ನಾವುಗಳು ವಂದನೆಯನ್ನು ಸೂಚಿಸುವಂತಹ

ಗೊತ್ತುವಳಿಯನ್ನು ನಮ್ಮ ಹಿರಿಯ ಸದಸ್ಯರಾದಂತಹ ಶ್ರೀ ಎಸ್.ಪಿ. ಮುದ್ದ ಹನುಮೇಗೌಡರು ಮಂಡಿಸಿ ಮತ್ತೊಬ್ಬ ಹಿರಿಯ ಸದಸ್ಯರಾದಂತಹ ಶ್ರೀ ಎಸ್.ಜೆ. ನಂಜಯ್ಯನಮಠ ರವರು ಸಮರ್ಥನೆ ಮಾಡಿ, ರಾಜ್ಯ ಸರ್ಕಾರದ ಹಲವಾರು ಸಾಧನೆಗಳು ಮತ್ತು ಹೇಗೆ ಈ ರಾಜ್ಯ ಹಂತ ಹಂತವಾಗಿ ಅಭಿವೃದ್ಧಿಯ ಮೆಟ್ಟಿಲುಗಳನ್ನು ಏರುತ್ತಿದೆ ಎನ್ನುವುದರ ಬಗ್ಗೆ ತಮ್ಮದೇ ಆದಂತಹ ವಿಶ್ಲೇಷಣೆಗಳನ್ನು ಅವರು ಮಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಆ ಭಾಷಣದ ಪ್ರಸ್ತಾವನೆಯ ಮಧ್ಯೆ ಪ್ರವೇಶ ಮಾಡಿ ಹಲವಾರು ಟೀಕೆಗಳನ್ನು ಮತ್ತು ತಮ್ಮ ರಿಸರ್ವೇಶನ್ಸ್ ಏನಿವೆ ತಮ್ಮ ಕಲ್ಪನೆಗೆ ಹಾಗೂ ತಮ್ಮ ಪರ್‌ಸೆಪ್ಷನ್‌ಗೆ ಬಂದಂತಹ ಕೊರತೆಗಳು ಏನಿವೆ, ಎನ್ನತಕ್ಕಂಥದರ ಬಗ್ಗೆ ಈ ಸದನದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನವನ್ನು ಪಟ್ಟಿದ್ದಾರೆ. ಸಾಧಾರಣವಾಗಿ ರಾಷ್ಟ್ರಪತಿಯವರ ಹಾಗೂ ರಾಜ್ಯಪಾಲರ ಭಾಷಣವಾಗಲೀ ನಾನು ಎರಡೂ ಕಡೆಯಲ್ಲೂ ವಿಶ್ಲೇಷಣೆ ಮಾಡಿದಂತಹ ವಿಶೇಷವಾದಂತಹ ಅವಕಾಶವನ್ನು ಕಲ್ಪಿಸಿಕೊಂಡವನಾಗಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ನಾವು ಟೀಕೆ ಮಾಡತಕ್ಕಂತಹ ಕಾಲದಲ್ಲಿ ಒಂದು ಸರ್ವೆಸಾಮಾನ್ಯವಾಗಿ ನಮೂದಿತವಾಗಿರತಕ್ಕಂತಹ ಅಂಶವೇನೆಂದರೆ, ಇದು ಗೊತ್ತುಗುರಿಯಿಲ್ಲದೆ ಇರತಕ್ಕಂತಹ ಅತ್ಯಂತ ನಿರಾಶದಾಯಕವಾದಂತಹ, ಅತ್ಯಂತ ಸಪ್ಪೆ ಇದರಲ್ಲಿ ಉಪ್ಪು, ಖಾರ, ಹುಣಸೇಹಣ್ಣು ಇಲ್ಲ ಹಾಗೆ ಎಂದು ಹೇಳತಕ್ಕಂಥದ್ದು, ಇದರ ಬಗ್ಗೆ ತಾವೇನು ಹೊಸದಾಗಿ ಟೀಕೆಯನ್ನು ಮಾಡುತ್ತಿಲ್ಲ, 1952ರಲ್ಲಿ ಮಹಾರಾಜರು ಭಾಷಣ ಮಾಡುತ್ತಿದ್ದಾಗ, ಆಗಿನ ಕಾಲದಿಂದಲೂ ನಾವು ಇದನ್ನೇ ಅನುಸರಿಸಿಕೊಂಡು ಹೊರಟಿರತಕ್ಕಂತಹ ಲಾಂಗ್ವೇಜ್ ಏನಿದೆ, ಅದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಬಚ್ಚೇಗೌಡರಿಗೆ ಗೊತ್ತಿದೆ. ಲಾಂಗ್ವೇಜ್‌ನಲ್ಲಿ ಒತ್ತು ಇಲ್ಲಿ ಸ್ವಲ್ಪ ಕಡಿಮೆ ಇರಬಹುದು, ಅಲ್ಲ ಸ್ವಲ್ಪ ಜಾಸ್ತಿ ಇರಬಹುದು. ಒಟ್ಟಾರೆಯಾಗಿ ಅಪ್ರೋಚ್ ಏನಾಗಿದೆ ಎಂದರೆ ವಿರೋಧ ಪಕ್ಷದವರ ಅಪ್ರೋಚ್ ಒಂದೇ, ಆಡಳಿತ ಪಕ್ಷದವರ ಅಪ್ರೋಚ್ ಬೇರೆಯಾಗಿದೆ. ಇದು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ನಡೆದು ಬಂದಿರತಕ್ಕ ಸಂಪ್ರದಾಯ, ಹಾಗೆ ಎಂದು ಹೇಳಿ ನಾವು ಅದನ್ನು ಗೌರವಿಸುತ್ತೇವೆ. ಈ ಸಂಪ್ರದಾಯಗಳಲ್ಲಿ ಮತ್ತು ಈ ಅಪ್ರೋಚ್‌ಗಳಲ್ಲಿ ಎಷ್ಟು ಒಳ್ಳೆಯದಿದೆಯೋ ಎನ್ನತಕ್ಕಂಥದ್ದನ್ನು ನಾವು ಆಗಾಗ್ಗೆ ಯೋಚನೆಯನ್ನು ಮಾಡಬೇಕಾಗುತ್ತದೆ. ರಾಜ್ಯದಾದ್ಯಂತ ಜ್ವಲಂತ ಸಮಸ್ಯೆಗಳ ಬಗ್ಗೆ ಮೆನ್‌ಷನ್ ಇಲ್ಲ ಹಾಗೆ ಎಂದು ಪ್ರಸ್ತಾಪ ಮಾಡಿದರು. ಭೀಕರವಾದಂತಹ ಬರಗಾಲವು ಬಂದು ಹೋಯಿತು, ರಾಜ್ಯಸರ್ಕಾರವು ಏನೂ ಮಾಡಲಿಲ್ಲ, ಅಕಸ್ಮಾತ್ ಅವರು ಮಾಡಿದ್ದರೆ ಅದನ್ನು ಕೇಂದ್ರ ಸರ್ಕಾರದವರು ಕೊಟ್ಟರು, ಅದು ಹಾಗೆಯೇ ನಡೆದು ಹೋಯಿತು, ಈಗ 3,60,000 ಟನ್ ಆಹಾರಧಾನ್ಯಗಳನ್ನು 60 ರಿಂದ 75 ಸಹಸ್ರ ಕಾಮಗಾರಿಗಳಲ್ಲಿ ಅದನ್ನು ವಿನಿಯೋಗಿಸಿದ್ದರೆ ಅದು ತಾನು ತಾನಾಗಿಯೇ ನಡೆಯಿತು. ನೀವು ಮಾಡಿದ್ದು ಏನು ಮಹಾ? ಏನು ಭೀಕರವಾದಂತಹ ವಿದ್ಯುತ್ ಅಭಾವವೇನಿತ್ತು, ನಿನ್ನೆದಿವಸ ವಿದ್ಯುತ್ ಅಭಾವವಿರಲಿಲ್ಲ, 1996 ರಿಂದ 1998ರಲ್ಲಿ ವಿದ್ಯುತ್ ಅಭಾವವಿರಲಿಲ್ಲ, ಆದರೆ 2003ನೇ ಇಸವಿಗೆ ಆ ವಿದ್ಯುತ್ ಅಭಾವವು ಈ ರಾಜ್ಯಕ್ಕೆ ಬಂದು ಬಿಟ್ಟಿತು. ನಿರ್ವಿಕಾರವಾದಂತಹ ದೃಷ್ಟಿಯಿಂದ ಈ ಕೆಲವು ರಾಷ್ಟ್ರೀಯ ಸಮಸ್ಯೆಗಳನ್ನು ನಾವು ಪರಿಹಸಿರುವುದಕ್ಕೆ ಒಟ್ಟಾರೆಯಾಗಿ ಪ್ರಯತ್ನ ಮಾಡಬೇಕು. ಕೇಂದ್ರದಿಂದ ಹಣಕಾಸಿನ ನೆರವು ಹಾಗೂ ಆಹಾರಧಾನ್ಯಗಳು ಬಂತು ಅದು ದುರುಪಯೋಗವಾಗಿದೆ. ಸಿಇಟಿ ಬಗ್ಗೆ ಸರ್ಕಾರದ್ದು ಏನೂ ಕ್ರಮವಿಲ್ಲ, ಡಾ|| ನಂಜುಡಪ್ಪ ನವರ ಪ್ರಾದೇಶಿಕ ಅಸಮಾನತೆಯ ಬಗ್ಗೆ ವರದಿ ಬಂದು ಬಹಳ ದಿವಸಗಳಾಯಿತು. ಅದರ

ಫಾಲೋ ಅಫ್ ಆಕ್ಷನ್ ಇಲ್ಲ. ಬರ ಮತ್ತು ವಿದ್ಯುತ್ ಸಮಸ್ಯೆಯಲ್ಲಿ ನಿವಾರಣೆಯಲ್ಲಿ ಸಂಪೂರ್ಣವಾಗಿ ಸರ್ಕಾರವು ವಿಫಲವಾಗಿದೆ. ಬೆಳೆವಿಮೆ ಯೋಜನೆಯಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆದಿದೆ. ಬೆಳೆ ವಿಮೆ 138 ಕೋಟಿ ರೂಪಾಯಿಗಳನ್ನು 10 ಲಕ್ಷ ರೈತರಿಗೆ ತಲುಪಿಸಿದೆವೋ ಎನ್ನತಕ್ಕಂತಹ ಹಿನ್ನಲೆಯಲ್ಲಿ ಇದು 1997ರಲ್ಲಿ ಏತಕ್ಕಾಗಿ ನಡೆಯಲಿಲ್ಲ ಇದು 1998 ಮತ್ತು 1999ರಲ್ಲಿ ಏತಕ್ಕಾಗಿ ನಡೆಯಲಿಲ್ಲ, ಬೆಳೆ ವಿಮೆಯನ್ನು 138 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, ಇದರಲ್ಲಿ ರಾಜ್ಯ ಸರ್ಕಾರವು 60 ಕೋಟಿ ರೂಪಾಯಿಗಳನ್ನು ಕೊಟ್ಟಿದೆ, ಜನರಲ್ ಇನ್‌ಷೂರೆನ್ಸ್ ಕಂಪನಿಯವರು 60 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ರೈತರು ಅವರ ಪ್ರೀಮಿಯಂ ಹಣದ ಮೂಲಕ 26 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ 138 ಕೋಟಿ ರೂಪಾಯಿಗಳು ವಿತರಣೆಯಾಯಿತು, ಸರ್ಕಾರವನ್ನು ನಾವು ಅಭಿನಂದಿಸುತ್ತೇವೆ. ನಾವು ಮಾಡಬೇಕಾಗಿತ್ತು, ಅದಕ್ಕೆ ಒಂದಲ್ಲ ಒಂದು ಕಾರಣದಿಂದ ಮಾಡುವುದಕ್ಕೆ ಆಗಲಿಲ್ಲ, ಅದಕ್ಕೆ ಸಕಾರಣಗಳು ಇರಬಹುದು ಎಂದೆಲ್ಲಾ ಹೇಳಿದರು. ನಾನು ಅಗ್ರಿಕಲ್ಚರ್ ಮಿನಿಸ್ಟರ್ ಆಗಿದ್ದೆ, ಇದನ್ನು ಮಾಡುವುದಕ್ಕಾಗಲಿಲ್ಲ, ಇನ್ಯಾರೋ ಪುಣ್ಯಾತ್ಮರು ಬಂದರು ಮಾಡಿದರು, ಸಂತೋಷ. ರೈತ ಸಮುದಾಯದ ಪರವಾಗಿ ಒಂದು ಸಂತೋಷದ ಮಾತು. ಆ ಸಂತೋಷದ ಮಾತನ್ನು ಹೇಳುವ ಕಾಲದಲ್ಲಿ ನಮ್ಮ ಕೊರತೆಗಳನ್ನು ಎತ್ತಿ ತೋರಿಸಿದರೆ, ಕೆಲವೊಂದನ್ನು ಎಸ್.ಎಸ್. ಪಾಟೀಲರು ಮಾಡುತ್ತಾರೆ. ಆ ಕೆಲಸವನ್ನು ಮಾನ್ಯ ಸಿಂಧ್ಯಾರವರು ಇವತ್ತು ಮಾಡಿದರು. ಈಗ 138 ಕೋಟಿ ರೂಪಾಯಿಗಳನ್ನು ಹಂಚುವ ಸಮಯದಲ್ಲಿ ಗೋಕಾಕ್‌ನಲ್ಲಿ ಸಾವಿರ ರೂಪಾಯಿ, ಒಂದು ಲಕ್ಷ ರೂಪಾಯಿ ಹೆಚ್ಚು ಕಡಿಮೆ ಆಯಿತು. ಒಂದು ಕೋಟಿ ರೂ. ಎಂದುಕೊಳ್ಳೋಣ, ಆರ್ಗ್ಯುಮೆಂಟ್ಸ್‌ಗೋಸ್ಕರ, ಆದರೆ, ಅದು ಸಾಧನೆಯೋ ಅಲ್ಲವೋ? ಬರಗಾಲದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡರು. ನಿಜ. ರೈತರು ಆತ್ಮಹತ್ಯೆ ಮಾಡಿಕೊಳ್ಳಲು ರಾಜ್ಯ ಸರ್ಕಾರದ ನೀತಿ, ರೀತಿ ಇವುಗಳೇ ಕಾರಣವಾಗಿದ್ದಿದ್ದರೆ, ರಾಜ್ಯ ಸರ್ಕಾರವನ್ನು ನಾವು ಟೀಕೆ ಮಾಡೋಣ. ರಾಜ್ಯ ಸರ್ಕಾರ ಇವತ್ತು ಈ ಸದನಕ್ಕೆ ಹೊಣೆಗಾರರಾಗಬೇಕಾಗುತ್ತದೆ. ಈ ವಿಶ್ವದ ಅಗ್ರಿಕಲ್ಚರಲ್ ಸಿನಾರಿಯೋದಲ್ಲಿ ಮಹತ್ತರವಾದ ಬದಲಾವಣೆಗಳು ನಡೆಯುತ್ತಿದ್ದರೆ, ಆ ವಿಶ್ವ ಹಿನ್ನಲೆಯನ್ನು ಸಂಪೂರ್ಣವಾಗಿ ಬದಿಗಿಟ್ಟು ರೈತರ ಆತ್ಮಹತ್ಯೆ ಬಗ್ಗೆ ನೀವು ಹೆಚ್ಚು ಫೋಕಸ್ ಮಾಡುವುದರಿಂದ ಆ ಸಮಸ್ಯೆ ಪರಿಹಾರವಾಗಬಲ್ಲದೆ? ರೈತರ ಮೇಲೆ ಹಾಕತಕ್ಕದ್ದು, ಅಧಿಕಾರಿಗಳ ಮೇಲೆ ಹತೋಟಿಯನ್ನು ಸಂಪೂರ್ಣವಾಗಿ ಈ ಸರ್ಕಾರ ಕಳೆದುಕೊಂಡಿದೆ, ಅಥವಾ ಈ ಮುಖ್ಯಮಂತ್ರಿಯವರು ಕಳೆದುಕೊಂಡಿದ್ದಾರೆನ್ನುವುದು ಸರಿಯೇ? ವರ್ಗಗಳನ್ನು ನೋಡಿದರೆ, ಹೇಗೆ ಮಾಡುತ್ತಿದ್ದಾರೆ? ಒಬ್ಬ ಜಿಲ್ಲಾಧಿಕಾರಿಯನ್ನು ಒಂದು ಜಿಲ್ಲೆಯಲ್ಲಿ ಇಡಲಿಕ್ಕೆ ಬರುವುದಿಲ್ಲ. ನೀವು ಪ್ರತಿ ವರ್ಷವೂ ಅಧಿಕಾರಿಗಳ ಸಭೆಯನ್ನು ಕರೆಯುತ್ತೀರಿ ಅಂದರೆ ಹಿಂದೆ ಎಲ್ಲಾ ಸರ್ಕಾರಗಳೂ ತೆಗೆದುಕೊಂಡು ಹಲವಾರು ಮಹತ್ವಪೂರಿತವಾದ ನಿರ್ಣಯಗಳಿಂದ, ಕಾರ್ಯಕ್ರಮಗಳಿಂದಾಗಿ, ಈ ರಾಜ್ಯಗಳ ಸಮುದಾಯದಲ್ಲಿ ಕರ್ನಾಟಕ ಒಂದು ವಿಶೇಷವಾದ ಅರ್ಹತೆಯನ್ನು ಪಡೆದಿರುವ ರಾಜ್ಯವಾಗಿದೆ ಎನ್ನುವುದನ್ನು ಅಭಿಮಾನದಿಂದ ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಬ್ಬ ಮುಖ್ಯಮಂತ್ರಿ ಇಮೇಜ್ ವೃದ್ಧಿಯಾಗಿದೆ ಎಂದು ಹೇಳಿದರೆ ಆ ರಾಜ್ಯದ ಇಮೇಜ್ ವೃದ್ಧಿಯಾಗಿದೆ ಎಂದು ಹಾಗೆ ಒಂದು ಸರ್ಕಾರದ ಇಮೇಜ್ ವೃದ್ಧಿಯಾಗಿದೆ ಎಂದು ಹೇಳಿದರೆ, ಆ ರಾಜ್ಯದ ಇಮೇಜ್ ವೃದ್ಧಿಯಾಗಿದೆ ಎಂದು ಹೇಳಿದ ಹಾಗೆ. ಇವತ್ತು ಕರ್ನಾಟಕದತ್ತ

ಮಿಕ್ಕ ರಾಜ್ಯಗಳು ಏಕೆ ನೋಡುತ್ತೇವೆ? ಇವತ್ತು ಯಾವ ಸದಸ್ಯರಿಗೂ ಬಹುಶಃ ನಾಳೆ ಬಡ್ಜೆಟ್ ಇರುವುದರಿಂದ ಈ ಸರ್ಕಾರ ದಿವಾಲಿಯಾಗಿದೆ ಎಂದು ಹೇಳುವ ಸೊಲ್ಲು ಇನ್ನು ಬಂದಿಲ್ಲ. ಕಾರಣ, ನಾಳೆ ಬಡ್ಜೆಟ್ ಆಗುತ್ತದೆ. ಆಮೇಲೆ ಶುರು ಮಾಡುತ್ತೀರಿ. ನನಗೆ ಗೊತ್ತು. ಆದರೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಸಮಯದಲ್ಲಿ ಯಾವ ಗೌರವಾನ್ವಿತ ಮಾನ್ಯ ಸದಸ್ಯರೂ ಇದರ ಬಗ್ಗೆ ಗಮನ ಸೆಳೆದಿಲ್ಲ. ಆದರೂ, ತಾವು ಹೊರಗಡೆ ಮಾಡುವ ಭಾಷಣ ಏನಿದೆ ಅದಕ್ಕೆ ನಾನು ಉತ್ತರಿಸಲಿಕ್ಕೆ ಈ ಸದನದ ವೇದಿಕೆಯನ್ನುಪಯೋಗಿಸಿ ಕೊಳ್ಳುತ್ತಿದ್ದೇನೆ. ಏಕೆಂದರೆ, ನಿಮ್ಮ ಹಾರ್ಟ್ ಏನಿದೆ ಅದನ್ನು ಕಳೆದ ಮೂರೂವರೆ ವರ್ಷಗಳಲ್ಲಿ ನೀರು ಕರಕುಶಲ ಮಾಡಿಕೊಂಡಿದ್ದೀರಿ. ಆನ್-ಗೋಯಿಂಗ್ ಪ್ರಾಜೆಕ್ಟ್ ತರಹ ಇದು.

ಶ್ರೀ ಸಿ. ಬೈರೇಗೌಡ:- ನಿಮ್ಮ ಪಕ್ಕದಲ್ಲಿ ಕುಳಿತಿರುವ ಹೆಚ್.ಕೆ. ಪಾಟೀಲರಿಗೆ ಆ ಮಾತನ್ನು ಹೇಳಿ.

ಅಧ್ಯಕ್ಷರು:- ಬೈರೇಗೌಡರೆ ಕೊನೆಯಲ್ಲಿ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಸ್.ಎಂ. ಕೃಷ್ಣ:- ಆನ್-ಗೋಯಿಂಗ್ ಪ್ರಾಜೆಕ್ಟ್ ವಿಚಾರಕ್ಕೆ ನಾನು ಬರುವುದಿಲ್ಲ. ಅವರದ್ದು, ನಮ್ಮದು ಇದ್ದೇ ಇದೆ. ಕೇವಲ ಈ ರಾಜ್ಯದಲ್ಲಲ್ಲ. ನಿಮ್ಮದು, ನಮ್ಮದು ಕೇವಲ ಈ ರಾಜ್ಯಕ್ಕೆ ಸೀಮಿತವಾಗಿರುವುದು. ನೀವು ಅಖಿಲ ಭಾರತ ಎಂದು ಹೆಸರು ಇಟ್ಟುಕೊಂಡಿದ್ದರೂ ಕೂಡ ನಿಮ್ಮದೇನಿದ್ದರೂ ಇಲ್ಲೇ ನಮ್ಮದು, ನಿಮ್ಮದು. ಇವರದ್ದು, ನಮ್ಮದು ರಾಷ್ಟ್ರಾದ್ಯಂತ ವ್ಯಾಪಿಸಿರುವ ಸಮಸ್ಯೆ. ಇವರನ್ನು ನಾವು ಹಿಮಾಚಲದಲ್ಲಿ, ಗುಜರಾತಿನಲ್ಲಿ, ಮಹಾರಾಷ್ಟ್ರದಲ್ಲಿ, ಉತ್ತರ ಪ್ರದೇಶದಲ್ಲಿ ನೋಡುತ್ತೇವೆ. ಆದರೆ, ಸಿಂಧ್ಯಾ, ಬೈರೇಗೌಡರನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ. ಎಲ್ಲಿ ಸುತ್ತಿ ಬಳಸಿ ಬಂದಲೂ ಇವರು ಕರ್ನಾಟಕಕ್ಕೇ ಬರಬೇಕು.

ಶ್ರೀ ಸಿ. ಬೈರೇಗೌಡ:- ಎಲ್ಲಾ ನಡೆದಿರುವುದು ಕರ್ನಾಟಕದಿಂದ. ಇದೆಲ್ಲಾ ಬೆಳವಣಿಗೆ ಯಾವ ರೀತಿಯಾಗಿದೆ ಎಂಬುದು ತಮಗೆ ಗೊತ್ತಿದೆ. ದೇಶದ ರಾಜಕೀಯ ಯಾವ ರೀತಿಯಾಗಿದೆ, ದೇಶದ ರಾಜಕೀಯ ಬೆಳವಣಿಗೆಯ ಬೀಜ ಹಾಕಿದ್ದು, ಬೆಳೆದಿದ್ದು, ದೇಶದಲ್ಲೆಲ್ಲಾ ಪ್ರಖ್ಯಾತವಾಗಿದ್ದು ಕರ್ನಾಟಕದಿಂದಲೇ ಅದು ಆಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ರಾಮಕೃಷ್ಣ ಹೆಗಡೆಯವರು ನೇತೃತ್ವದಲ್ಲಿ ಕರ್ನಾಟಕದಲ್ಲಿ ಒಂದು ಹೊಸ ಆಯಾಮವನ್ನು ಇಡೀ ದೇಶದ ರಾಜಕಾರಣಕ್ಕೆ ಸೃಷ್ಟಿ ಮಾಡಿ ಕೊಡಲು ನೀವು ಮತ್ತು ಈಗ ಹೋಳು, ಹೋಳು ಆಗಿರುವ ನಿಮ್ಮ ಪಕ್ಷಗಳು ಪ್ರಯತ್ನ ಪಟ್ಟವು ಎನ್ನುವುದನ್ನು ನಾನು ರೆಕಾರ್ಡ್‌ಗೆ ಸೇರಿಸುತ್ತೇನೆ. ಆದರಲ್ಲೇನೂ ಹಿಂದೆ-ಮುಂದೆ ನೋಡುವುದಿಲ್ಲ. ಜಯಪ್ರಕಾಶ್ ನಾರಾಯಣ್‌ರವರಿಂದ ಪ್ರೇರಿತರಾಗಿ ಅವರಿಂದ ಸ್ಫೂರ್ತಿ ಪಡೆದು, ನೀವೆಲ್ಲರೂ ಜೈಲಿಗೆ ಹೋಗಿ, ಸಿಂಧ್ಯಾರವರು 2 ವರ್ಷ ಜೈಲಿನಲ್ಲಿದ್ದರು.

ಅಧ್ಯಕ್ಷರು:- 2 ವರ್ಷ ಇದ್ದರು.

ಶ್ರೀ ಎಸ್.ಎಂ. ಕೃಷ್ಣ:- ನನಗೆ ಚೆನ್ನಾಗಿ ಗೊತ್ತು. ನಾನಾಗ ಮಂತ್ರಿಯಾಗಿದ್ದೆ. ಅವರು ಜೈಲಿನಲ್ಲಿದ್ದ ಕಾಲದಲ್ಲಿ ನಾನು ಮಂತ್ರಿಯಾಗಿದ್ದೆ. 1972ನೇ ಇಸವಿಯಲ್ಲಿ ಭೀಕರವಾದ ಬರಗಾಲ ಬಂತು. ಆಗಲೂ ನಾನು ಇಲ್ಲೇ ಕುಳಿತಿದ್ದೆ. ಗುಲ್ಬರ್ಗಾ, ರಾಯಚೂರು, ಬೀದರ್, ಬಿಜಾಪುರ, ಬಳ್ಳಾರಿ ಈ ಭಾಗದಲ್ಲಿ ಭೀಕರವಾದ ಬರಗಾಲ ಬಂದಂಥ ಕಾಲದಲ್ಲಿ ನಾನಿಲ್ಲಿ ದೇವರಾಜ್ ಅರಸ್‌ರವರ ನೇತೃತ್ವದಲ್ಲಿ, ರಂಗನಾಥ್‌ರವರ ಜೊತೆಯಲ್ಲಿ ಕುಳಿತಿದ್ದೆ. ಮುಗ್ ದಂ ಎನ್ನುವ

ಆಫೀಸರ್ ಇದ್ದರು. ಅವರನ್ನು ನಾವು ಸ್ಪೆಷಲ್ ಪರ್‌ಪಸ್ ವೆಹಿಕಲ್ ಇನ್ಸ್‌ಟಿಟ್ಯೂಷನ್ ಕ್ರಿಯೇಟ್ ಮಾಡಲಿಲ್ಲ. ನಾವು ಒಬ್ಬ ವ್ಯಕ್ತಿಯನ್ನು ಕ್ರಿಯೇಟ್ ಮಾಡಿದೆವು. ಅವರು ನಮ್ಮ ಇಂಟರ್‌ಲ್ಯಾಕ್ಯುಟರಿ ಆದರು. ಯಾರ್‍ಯಾರ ಜೊತೆಯಲ್ಲಿ? ಬರದ ತೀವ್ರ ಹಾವಳಿಗೆ ತುತ್ತಾಗಿದ್ದ ಜನ ಮತ್ತು ಸರ್ಕಾರ. ಇವತ್ತಿನ ಪ್ರಮಾಣದಲ್ಲಿ ಏನು ಕೇಂದ್ರ ಸರ್ಕಾರದಿಂದ ನಮಗೆ ಬೆಂಬಲ ಆಶ್ರಯ ದೊರೆತಿದೆ, ಅವತ್ತು ಆದಿರಲಿಲ್ಲ, ಇತ್ತು. ಆದರೆ, ಸೀಮಿತವಾದ ಪ್ರಮಾಣದಲ್ಲಿ ಮಾತ್ರ ಇತ್ತು. ಆಗಲೂ ಆಹಾರಧಾನ್ಯಗಳನ್ನು ಅವರು ಕೊಳ್ಳುತ್ತಿದ್ದರು. ಇವತ್ತು ಬರ ಪರಿಹಾರದ ಒಟ್ಟಾರೆ ಸ್ಥೂಲ ವಿಚಾರವನ್ನು ನೋಡಿದಾಗ 3 ಲಕ್ಷ 65 ಸಾವಿರ ಟನ್ ಆಹಾರಧಾನ್ಯವನ್ನು ನಮಗೆ ಕೊಡುತ್ತೇವೆಂದು ಹೇಳಿ ಕೇಂದ್ರ ಸರ್ಕಾರದವರು ಒಪ್ಪಂದ ಮಾಡಿಕೊಂಡಿದ್ದಾರೆ. ಈಗಾಗಲೇ ಬರ ಪರಿಹಾರ ಚೌಕಟ್ಟಿನಲ್ಲಿ ಅಲ್ಲದೆ ಪ್ರತಿ ವರ್ಷ ಅವರು ನಮಗೆ ಬಿಡುಗಡೆ ಮಾಡಬೇಕಾಗಿರುವ ಕಾಳಿನಲ್ಲಿ ಕೂಡ ಕೆಲವು ಭಾಗವನ್ನು ಬಿಡುಗಡೆ ಮಾಡಿದ್ದಾರೆ. 70 ಸಾವಿರ ಕೆಲಸಗಳಲ್ಲಿ ಇಡೀ ರಾಜ್ಯದಲ್ಲಿ ಕೆಲವು ನಡೆಯುತ್ತಿವೆ, ಕೆಲವು ಮುಗಿದಿರಬಹುದು. ಏಕೆಂದರೆ, ಬರ ಪರಿಹಾರ ಕಾರ್ಯಗಳು ಒಂದು ಸೀಮಿತವಾದ ಉದ್ದೇಶವನ್ನು ಒಳಗೊಂಡಿರುತ್ತವೆ. ಆ ಸೀಮಿತವಾದ ಉದ್ದೇಶವೇನೆಂದರೆ, ಕೆಲಸಬೇಕು, ಉದ್ಯೋಗ ಬೇಕೆಂದು ಚಡಪಡಿಸುತ್ತಿರುವ ಕೈಗಳಿಗೆ ಉದ್ಯೋಗಾವಕಾಶವನ್ನು ದೊರಕಿಸಿಕೊಡುವುದು. ಹೋದ ವರ್ಷ ಇಂಥದ್ದೇ ಬರಗಾಲ ಬಂದಂಥ ಕಾಲದಲ್ಲಿ, ಇಂಥದ್ದೇ ಟೀಕೆಗಳು ಸರ್ಕಾರದ ಮೇಲೆ ಬಂದಂಥ ಕಾಲದಲ್ಲಿ ನಾವು ಬರ ಪರಿಹಾರ ಕಾರ್ಯಕ್ರಮಗಳನ್ನು ಘೋಷಿಸಿ, ಅವುಗಳನ್ನು ಆಚರಣೆಗೆ ತರಲಿಕ್ಕೆ ಪ್ರಯತ್ನಪಟ್ಟೆವು ಜೊತೆ ಜೊತೆಯಲ್ಲಿ ಮಳೆ ಬಂತು. ಆದರೂ, ಅದು ಖಾರಿಫ್ ಮತ್ತು ರಬಿ ಇವರೆಡಕ್ಕೂ ಕೂಡ ಪ್ರಯೋಜನವಾಗಲಿಲ್ಲ. ಆಗಿದ್ದರೆ ಅದು ಸೀಮಿತವಾಗಿ ಪ್ರಯೋಜನವಾಯಿತು. ಆದ್ದರಿಂದ, ನಮ್ಮ ರಾಜ್ಯ ಎಷ್ಟು ಆಹಾರ ಧಾನ್ಯಗಳನ್ನು ಉತ್ಪಾದನೆ ಮಾಡುತ್ತಿತ್ತು. ಅದರಲ್ಲಿ ಗಮನಾರ್ಹವಾಗಿ ಇಳುವರಿ ಕಂಡು ಬಂತು.

11.40 ಎ.ಎಂ

ಈ ವರ್ಷ ಈ ಪರಿಸ್ಥಿತಿ ಉದ್ಭವಾಯಿತು, ಕೇಂದ್ರ ಸರ್ಕಾರ 179 ಕೋಟಿ ರೂಪಾಯಿಗಳನ್ನು ಬರ ಪರಿಹಾರ ಕಾಮಗಾರಿಗಳಿಗೆ ಕೊಡಲಿಕ್ಕೆ ಮುಂದೆ ಬಂದಿದೆ, ಆದರೆ ಈ ವರೆಗೆ ರಾಜ್ಯ ಸರ್ಕಾರದಿಂದ 300 ಕೋಟಿ ರೂಪಾಯಿಗಳನ್ನು ಈ ಬರ ಪರಿಹಾರ ಕಾಮಗಾರಿಗಳಿಗಾಗಿ ಖರ್ಚು ಮಾಡಿದ್ದೇವೆ. ಇದರ ಅಕೌಂಟ್ಸ್ ಯಾರ ಅಕೌಂಟಿಗೆ ಹಾಕಬೇಕು? ಸರ್ಕಾರದ ಅಕೌಂಟಿಗೆ ತಾನೇ ಹಾಕಬೇಕು. ಮೇವಿನ ವಿಚಾರವನ್ನು ಮಾತನಾಡಿದರು, ಇವತ್ತು ಬೆಳಿಗ್ಗೆ ನಾವು ರಿವ್ಯೂ ಮಾಡಿದೆವು, ಯಾವ ಜಿಲ್ಲೆಯಲ್ಲಿ ಮೇವಿನ ಅಪಾರವಾದಂಥ ಬೇಡಿಗೆ ಇದೆ, ಅದನ್ನು ಈಡೇರಿಸಲಿಕ್ಕೆ ಸಾಧ್ಯ ಆಗದೇ ಇರತಕ್ಕಂಥ ಬೇಡಿಕೆ ಬಂದಿದೆ ಎಂದು ತಿಳಿದುಕೊಂಡೆವು. Regular interaction ನಡೆಯುತ್ತಿದೆ ಡೆಪ್ಯುಟಿ ಕಮೀಷನರ್ ಮತ್ತು ಡೆವಲಪ್‌ಮೆಂಟ್ ಕಮೀಷನರ್ ಮತ್ತು ಚೀಫ್ ಸೆಕ್ರೆಟರಿ ಇವರುಗಳ ಜೊತೆಯಲ್ಲಿ ಮಾತನಾಡಿದಾಗ, ಪ್ರತಿಯೊಬ್ಬ ಜಿಲ್ಲಾಧಿಕಾರಿಗಳ ಬಳಿ ಇವತ್ತು ಮೇವಿಗೆ ಹಣ ಇದೆ, ಕುಡಿಯುವ ನೀರಿಗೆ ಹಣ ಇದೆ, ಕುಡಿಯುವ ನೀರಿಗೆ ಹಣದ ಕೊರತೆ ಇದೆ ಎಂದು ತಿಳಿದು ಬಂದಾಗ ನೀವು ನೇರವಾಗಿ ಫೈನಾನ್ಸ್ ಕಮೀಷನರ್‌ಗೆ ದೂರವಾಣಿ ಮಾಡಿ ಎಂದು ನಾವು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇವೆ. ಎಲ್ಲಾ ಭಾಗದಲ್ಲೂ ಕುಡಿಯುವ ನೀರನ್ನು ಉತ್ತಮಪಡಿಸಲಿಕ್ಕೆ ಎಲ್ಲಾ ಪ್ರಯತ್ನಗಳು ನಡೆಯುತ್ತಲಿವೆ. ಆದರೆ ಕೊರತೆಗಳು

ಇಲ್ಲವೆಂದು ಹೇಳಿ ತಿಪ್ಪೇಸಾರಿಸುವ ಕೆಲಸಕ್ಕೆ ನಾನು ಈ ಅವಕಾಶವನ್ನು ಉಪಯೋಗಿಸಿಕೊಳ್ಳುವುದಿಲ್ಲ. ನಾನು ಇಷ್ಟು ಮಾತ್ರ ಸ್ಪಷ್ಟಪಡಿಸುತ್ತೇನೆ. ಈ ಬರ ಪರಿಹಾರ ಕೆಲಸ ಕಾರ್ಯಗಳನ್ನು ನಮ್ಮ ಅಧಿಕಾರಿಗಳು ಅತ್ಯಂತ ಯಶಸ್ವಿಯಾಗಿ ನಿರ್ವಹಣೆ ಮಾಡಿದ್ದಾರೆ ಎನ್ನುವ ಮಾತನ್ನು ಈ ಸದನದಲ್ಲಿ ಆಡದೇ ಹೋದರೆ ಯಾರು ಹಗಲು ರಾತ್ರಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಅಪಚಾರ ಮಾಡಿದ ಹಾಗೆ ಆಗುತ್ತದೆ. ಲೋಪದೋಷಗಳಿವೆ, ಅಲ್ಲೊಬ್ಬ ಇಲ್ಲೊಬ್ಬ ಅಧಿಕಾರಿ, ಇಂಜಿನಿಯರ್ ತಾಳಮೇಳ ಇಲ್ಲದೆ ಕೆಲಸ ಮಾಡಿರಬಹುದು. ಆದರೆ ಇವ್ಯಾಲ್ಯೂವೇಷನ್ ಮಾಡತಕ್ಕಂಥ ಕಾಲದಲ್ಲಿ ಒಟ್ಟಾರೆಯಾಗಿ ಇವ್ಯಾಲ್ಯೂವೇಷನ್ ಮಾಡಬೇಕಾಗುತ್ತದೆ. ಪರೀಕ್ಷೆಗೆ ವಿದ್ಯಾರ್ಥಿ ಕುಳಿತಾಗ ಹೇಗೆ ಜಿಯೋಗ್ರಾಫಿ, ಹಿಸ್ಟರಿ, ಅರ್ಥಮಿಟಿಕ್, ಇಂಗ್ಲೀಷ್, ಕನ್ನಡ, ಸಂಸ್ಕೃತ, ಉರ್ದು ಇದರಲ್ಲಿ ಹೇಗೆ ಅವನು ಅಂಕಗಳನ್ನು ಪಡೆಯುತ್ತಾನೆ ಒಟ್ಟಾರೆಯಾಗಿ ಅಗ್ರಿಗೇಟ್ ಮಾರ್ಕ್ಸ್ ತರಹ, ಕೆಲವರು ಚರಿತ್ರೆಯಲ್ಲಿ 89, 90 ಅಂಕಗಳನ್ನು ಪಡೆದಿರುತ್ತಾರೆ, ಆದರೆ ಅರ್ಥಮಿಟಿಕ್ ಸಬ್ಜೆಕ್ಟ್‌ನಲ್ಲಿ 15 ಅಂಕಗಳನ್ನು ಪಡೆಯುತ್ತಾನೆ, ಆದರೆ ಟೋಟಲ್ ಆಗಿ ಪಾಪಾಸು ಎಂದು ತೀರ್ಮಾನವಾಗುತ್ತದೆ. ಹಾಗೆಯೇ ಒಂದು ಸರ್ಕಾರದ ವಿಶ್ಲೇಷಣೆ ಮಾಡತಕ್ಕಂಥ ಕಾಲದಲ್ಲಿ ಪ್ರತಿಯೊಂದು ಡಿಪಾರ್ಟ್‌ಮೆಂಟ್ ಕೂಡ ಹೇಗೆ ತನ್ನ ಕೆಲಸವನ್ನು ನಿರ್ವಹಿಸದೇ ಎನ್ನುವುದನ್ನು ತೋರಿಸಿದೆ ಎನ್ನುವುದನ್ನು Total Aggregate View ತೆಗೆದುಕೊಳ್ಳಬೇಕಾಗಿರತಕ್ಕದ್ದು ತುಂಬಾ ಅವಶ್ಯಕವೆಂದು ನಾನು ಅತ್ಯಂತ ವಿನಿಮ್ರತೆಯಿಂದ ಸದನಕ್ಕೆ ಸೂಚನೆ ಮಾಡಬಯಸುತ್ತೇನೆ. ವಿದ್ಯುತ್ ಬಗ್ಗೆ ಸ್ಪಷ್ಟತೆ ಇಲ್ಲವೆಂದು ಹೇಳಿದರು. ಆದರೆ ಇದಕ್ಕಿಂತಲೂ ಹೆಚ್ಚಿನ ಸ್ಪಷ್ಟತೆ ತರಲಿಕ್ಕೆ ಸಾಧ್ಯಾವಾಗುವುದಿಲ್ಲ. ಒಂದು ಕಡೆ ರೆಗ್ಯೂಲೇಟರಿ ಕಮೀಷನ್ ಆದರ ಮುಂದೆ ಜನ ಹಾಜರಾಗಬಹುದು, ವಿದ್ಯುತ್ ಮಂಡಳಿಯನ್ನು ಟೀಕೆ ಮಾಡಿ ಪ್ರಶ್ನಿಸಬಹುದು ಮತ್ತು ಅದರ ಅಂಕಿ-ಅಂಶಗಳೆಲ್ಲವೂ ಕೂಡ ತೆರೆದ ಪುಸ್ತಕ ಇದೆ, ರಾಮದಾಸ್‌ರವರೇ, ಇದು ಹೌದೋ ಅಲ್ಲವೋ? ನೀವೇ ಹೇಳಿ. ರೆಗ್ಯೂಲೇಟರಿ ಕಮೀಷನ್ ಮುಂದೆ ನೀವು ಎಷ್ಟೋ ಸಾರಿ ಹೋಗಿದ್ದೀರಿ, ಇದೇ ಕಾಳಜಿಯನ್ನು ಉಳಿದ ಸದಸ್ಯರು ತೋರಿಸಿದರೆ ಈ ವಿದ್ಯುತ್ ಸಮಸ್ಯೆಯನ್ನು ಇನ್ನು ಹೆಚ್ಚು ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯ ಇತ್ತು. ನೀವು ತೋರಿಸಿರತಕ್ಕಂಥ ಕಾಳಜಿ ಅದರ ಉದ್ದೇಶ ಏನೇ ಇರಲಿ, ಆ ಕಾಳಜಿ ಏನಿದೆ ಸಮರ್ಥನೀಯವಾಗಿರತಕ್ಕಂಥ ಕಾಳಜಿ ಎಂದು ಹೇಳುತ್ತೇನೆ.

ಶ್ರೀ ಎ. ರಾಮದಾಸ್:- ಅದರಲ್ಲಿ ಏನಾದರೂ ದುರುದ್ದೇಶ ಇದೆಯೇ ಎನ್ನುವುದನ್ನು ತಾವು ದಯವಿಟ್ಟು ಹೇಳಬೇಕು.

ಶ್ರೀ ಎಸ್.ಎಂ. ಕೃಷ್ಣ:- ವಿದ್ಯುತ್ ಸಮಸ್ಯೆಯ ಬಗ್ಗೆ ನೀವು ಮಾಡಿರತಕ್ಕಂಥ ಅಧ್ಯಯನ ಏನಿದೆ, ಅದನ್ನು ಬಹಳ ಜನ ಸದಸ್ಯರು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. ಆದ್ದರಿಂದಲೇ ವಿದ್ಯುತ್ ಸಮಸ್ಯೆ ಬಂದಾಗ ನಿಮ್ಮ ಹೆಸರನ್ನು ತೆಗೆದುಕೊಂಡಿದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಕೆಇಆರ್‌ಸಿ ಮುಂದೆ ಯಾರಾದರೂ ಹೋಗಿ ಅಬ್ಜೆಕ್ಷನ್ ಹಾಕಬಹುದು ಎಂದು ತಾವು ಹೇಳಿದಿರಿ, ಅದು ಇರುವುದೇ ನಮ್ಮ ಅಬ್ಜೆಕ್ಷನ್ ಕೇಳುವುದಕ್ಕೆ ಅಲ್ಲವೆ? ನಾವು ಎಲ್ಲಾ ಹೋಗಿದ್ದೇವೆ ಜೊತೆಗೆ ಅದು ನಮ್ಮ ಹಕ್ಕು, ಅದನ್ನು ನೀವು ಕೆಇಆರ್‌ಸಿ ಹಾಗೂ ಕೆಪಿಟಿಸಿಎಲ್ ಬಗ್ಗೆ ಅಲ್ಲಿ ಹೋಗಿ ಮಾತನಾಡಿಕೊಳ್ಳಿ ಎಂದೇ ನಿಮ್ಮ ಮಾತಿನ ಅರ್ಥ.

ಶ್ರೀ ಎಸ್.ಎಂ. ಕೃಷ್ಣ– ಉದಾಹರಣೆಗೆ ಅವರ ಹೆಸರನ್ನು ಹೇಳಿದೆ. ಮಾನ್ಯ ಸಿಂಧ್ಯಾರವರು ಹೋಗಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ– ನಾನು ಹೋಗಿದ್ದೇನೆ ಅದು ಆ ರೀತಿ ಅಲ್ಲ ನೀವು ಹೇಳಿದ್ದು ಮಾನ್ಯ ರಾಮದಾಸ್ ಬಗ್ಗೆ ಬೇರೆ ಅರ್ಥ ಹೋಗಬಾರದು, ನಿಮ್ಮದೇ ಉದ್ದೇಶಗಳಿಗೆ ಹೋಗಿದ್ದೀರಿ ಎಂದರೆ ಹೇಗೆ? ಎರಡನೇಯದಾಗಿ ಕೆಪಿಟಿಸಿಎಲ್‌ದ್ದು ಏನಾದರೂ ಇದ್ದರೆ ಅಲ್ಲಿಗೆ ಹೋಗಿ ಟ್ರಾನ್ಸ್‌ಫರನ್ನಿ ಅಲ್ಲಿ ಇದೆ ನೋಡಿಕೊಳ್ಳಿ ಎಂದು ಹೇಳಿದರೆ, ಇದನ್ನು ನಾವು ನಿಮ್ಮಿಂದ ನಿರೀಕ್ಷಿಸುವ ಉತ್ತರ ಅಲ್ಲ ಸ್ವಾಮಿ.

ಶ್ರೀ ಎಸ್.ಎಂ. ಕೃಷ್ಣ– ನಿಮ್ಮ ನಿರೀಕ್ಷೆಗೆ ತಕ್ಕ ಉತ್ತರ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ ಆದರೆ, ಈ ಕಾಂಟೆಕ್ಸ್ಟ್‌ನಲ್ಲಿ ಒಂದು ಮಾತು ಹೇಳುವುದಾದರೆ, ಮಾನ್ಯ ಸದಸ್ಯರುಗಳು ಯಾರ್‍ಯಾರು ರೆಗ್ಯೂಲೇಟರಿ ಕಮೀಷನ್ ಮುಂದೆ ಹೋಗಿ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ ಮತ್ತು ಅವುಗಳಿಗೆ ರೆಗ್ಯೂಲೇಟರಿ ಕಮೀಷನ್‌ರವರು ಸ್ಪಂಧಿಸಿದ್ದಾರೆ ಎನ್ನುವ ಭಾವನೆಯನ್ನು ನಾನು ಮಾಡುತ್ತೇನೆ. ಆ ಭಾವನೆ ಮಾಡಿದರೆ ತಪ್ಪಿಲ್ಲವೆಂದು ನಾನಾದರೂ ಭಾವಿಸುತ್ತೇನೆ. ಮಾನ್ಯ ರಾಮದಾಸ್‌ರವರ ಹೆಸರನ್ನು ಪ್ರಸ್ತಾಪಿಸಿದ ಕಾಲದಲ್ಲಿ ಆ ಉದ್ದೇಶಗಳ ಬಗ್ಗೆ ನಾನು ಏನು ಹೇಳಿದೆ ಅದು Aside. ಯಾರು ಅಧ್ಯಯನ ಮಾಡಿಕೊಂಡು ಬಂದು ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ ಅವರ ಬಗ್ಗೆ ವಿಶೇಷವಾದಂಥ ಸರ್ಕಾರದ ಕಾಳಜಿ ಇದೆ, ಈ ಬರಗಾಲದ ಪರಿಹಾರ ಮಾಡತಕ್ಕಂಥ ಕಾರ್ಯದಲ್ಲಿ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲಿಯೂ ಕೂಡ ಮಾನ್ಯ ಶಾಸನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿಯೇ ಆ ಎಲ್ಲಾ ಕೆಲಸ ಕಾರ್ಯಗಳು ನಡೆದಿರತಕ್ಕಂಥದ್ದು. ಈ ಕೆಲಸ ಕಾರ್ಯಗಳು ಸಾಕಾದಷ್ಟು ಸಮಾಧಾನಕರವಾಗಿ ತೃಪ್ತಿಕರವಾಗಿ ನಡೆದಿದೆ ಎಂದು ನಾನು ಅಧಿಕಾರಿಗಳಿಗೆ ಹೇಳಿದಾಗ ಮಾನ್ಯ ಸದಸ್ಯರುಗಳನ್ನು ಮರೆತುಬಿಟ್ಟೆ ಎನ್ನತಕ್ಕಂಥ ಮಾತಲ್ಲ. ಇದಕ್ಕೆಲ್ಲಾ ಮೂಲ ಸ್ಪೂರ್ತಿ ಬಂದಿದ್ದು ನಿಮ್ಮಗಳ ನಾಯಕತ್ವ. ಈ ಶಾಸನ ಸಭೆಯ ಸದಸ್ಯರುಗಳು ಪ್ರತಿಯೊಬ್ಬರು ಬರ ಪರಿಹಾರ ಕಾಮಗಾರಿಯಲ್ಲಿ ತೋರಿಸಿರತಕ್ಕಂಥ ಅಸಾಮಾನ್ಯವಾದಂಥ ಶ್ರದ್ಧೆ ಹಾಗೂ ಕಾಳಜಿ ಎನ್ನತಕ್ಕಂಥದ್ದನ್ನು ನಾನು ನೆನಪಿಸಿಕೊಳ್ಳುತ್ತೇನೆ ಮತ್ತು ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇನ್ನೂ ಹೆಚ್ಚು ಆಹಾರ ಧಾನ್ಯಗಳು ನಮಗೆ ಬೇಕಾಗಿವೆ. ಕೇಂದ್ರ ಸರ್ಕಾರಕ್ಕೆ ನಾವು ಆಗಿಂದಾಗ್ಗೆ ಮಾಡತಕ್ಕಂಥ ವಿಶೇಷವಾದ ಕೋರಿಕೆ ಏನೆಂದರೆ, ಒಟ್ಟಾರೆಯಾಗಿ ಬಲ್ಕ್ ಅಲಾಟ್‌ಮೆಂಟ್ ಪ್ರತಿಯೊಂದು ರಾಜ್ಯಕ್ಕೆ ಮಾಡಿ ಎಂದು ಕೇಳುತ್ತಿದ್ದೇವೆ. ನಾವು ಒಟ್ಟಾರೆಯಾಗಿ 11 ಲಕ್ಷ ಟನ್ ಕಾಳು ಬೇಕು ಈ ಬರ ಎದುರಿಸಲಿಕ್ಕೆ ಎಂದು ಅವರಿಗೆ ನಾವು ಅಂದಾಜು ಕೊಟ್ಟಿದ್ದೇವೆ. ನಾನು ಪ್ರಧಾನ ಮಂತ್ರಿ ಹಾಗೂ ಟಾಸ್ಕ್‌ಫೋರ್ಸ್‌ನ ಅಧ್ಯಕ್ಷರಾಗಿರುವ ಉಪ ಪ್ರಧಾನಿ ಮಂತ್ರಿಗಳನ್ನು ಭೇಟಿ ಮಾಡಿದ್ದೇನೆ. ಸಮಯ ಸಿಕ್ಕಿದಂಥ ಎಲ್ಲಾ ಸಂದರ್ಭಗಳಲ್ಲಿಯೂ ಕೂಡ ಅವರ ಮೇಲೆ ನಾನು ವಿಶೇಷವಾದಂಥ ಪ್ರಾರ್ಥನೆಯನ್ನು ಮಾಡಿದ್ದೇನೆ. ಹಾಗೆಯೇ ನಮ್ಮ ಮಂತ್ರಿಸಂಪುಟದ ಸದಸ್ಯರುಗಳು ಅವರಿಗೆ ಸಿಕ್ಕಿರತಕ್ಕಂಥ ಸಮಯಗಳಲ್ಲಿ ಹೆಚ್ಚುವರಿ ಧಾನ್ಯ ನಮಗೆಬೇಕು, ಈ ಬರಗಾಲವನ್ನು ಎದುರಿಸಬೇಕಾಗಿದೆ ಎನ್ನತಕ್ಕಂಥದನ್ನು ತಿಳಿಸಿದ್ದಾರೆ. ರಾಜಸ್ಥಾನವನ್ನು ಬಿಟ್ಟರೆ ಅತ್ಯಂತ ಒಣ ಪ್ರದೇಶ ಪಡೆದಂಥ ಎರಡನೇ ರಾಜ್ಯ ಕರ್ನಾಟಕ ಎನ್ನುವುದನ್ನು ಯಾವಾಗಲೂ ತಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು

ಎಂದು ಕೇಂದ್ರ ಸರ್ಕಾರಕ್ಕೆ ನಾವು ನಿವೇದನೆ ಮಾಡಿಕೊಂಡಿದ್ದೇವೆ. ಲೋಕಸಭೆಯ ವಿರೋಧ ಪಕ್ಷದ ನಾಯಕರಾದಂಥ ಶ್ರೀಮತಿ ಸೋನಿಯಾಗಾಂಧಿಯವರ ನೇತೃತ್ವದಲ್ಲಿ ಕೆಲವು ಮುಖ್ಯಮಂತ್ರಿಗಳು ಸೇರಿಕೊಂಡು, ಪ್ರಧಾನಿ ಮಂತ್ರಿಗಳನ್ನು ಮತ್ತು ಇತರ ಮಂತ್ರಿಗಳನ್ನು ಭೇಟಿ ಮಾಡಿ, ನೀವು ಬಲ್ಕ್ ಅಲಾಟ್‌ಮೆಂಟ್ ಮಾಡಿದರೆ ರಾಜ್ಯಗಳಿಗೆ ಒಂದು ಅನುಕೂಲ ಏನಾಗುತ್ತದೆ ಎಂದರೆ, ಟ್ರಾನ್ಸ್‌ಪೋರ್ಟೇಷನ್ ಸುಲಭವಾಗುತ್ತದೆ, ಇಲ್ಲದೇ ಹೋದರೆ ರೈಲ್ವೆ ಕಲೆಕ್ಷನ್ ನಮಗೆ ಕಷ್ಟವಾಗುತ್ತದೆ. ಮೊಟ್ಟಮೊದಲಿಗೆ ಒಂದು ಲಕ್ಷ ಟನ್ ಆಹಾರಧಾನ್ಯ ಬಿಡುಗಡೆ ಮಾಡಿದಂಥ ಸಂದರ್ಭದಲ್ಲಿ ನಾವು ಪಟ್ಟ ತೊಂದರೆ ಏನೆಂದರೆ, Rake Movements, ರೈಲ್ವೆ ಮೂಮೆಂಟ್ಸ್‌ನಿಂದ ತೊಂದರೆಯಾಗಿತ್ತು. ಕಳೆದ ಕೆಲವು ದಿವಸಗಳ ಅವರೇಜ್ ಅನ್ನು ಗಮನಿಸಿದರೆ ವರ್ಷವೊಂದಕ್ಕೆ ಒಂದು ಲಕ್ಷ ಟನ್ ಆಹಾರ ಧಾನ್ಯವನ್ನು ನಾವು ಇದಕ್ಕೋಸ್ಕರ ಬಳಸಿಕೊಂಡಿದ್ದೇವೆ, ಉಪಯೋಗಿಸಿಕೊಂಡಿದ್ದೇವೆ. ಆದರೂ ಸಾಲದು. ಇನ್ನೂ 2-3 ತಿಂಗಳು ನಾವು ಈ ಬರವನ್ನು ಎದುರಿಸಬೇಕಾಗಿದೆ. ಅದಕ್ಕೆ ನಮಗೆ ಇನ್ನೂ ಹೆಚ್ಚು ಕಾಳು ಬೇಕು, ಹಣ ಬೇಕು. ಅದು ಕುಡಿಯುವ ನೀರಿಗಿರಬಹುದು ಅಥವಾ ದನಕರುಗಳಿಗೆ ನೀರು, ಮೇವಿರಬಹುದು. ಇದಕ್ಕೆ ನಾವು ಪ್ರಯತ್ನಗಳನ್ನು ಮುಂದುವರಿಸುತ್ತಿದ್ದೇವೆ. ಒಂದು ಮಾತು ಸ್ಪಷ್ಟವಾಗಿ ಎದ್ದು ಕಾಣುತ್ತಿದೆ, ಏನೆಂದರೆ, ಯಾವ ಭೀಕರ ಬರಗಾಲವನ್ನು ನಾವು ಎದುರಿಸಲು ಸನ್ನದ್ಧರಾಗಿದ್ದವೋ ಅದರಲ್ಲಿ ನಾವು ಸಾಕಷ್ಟು ಯಶಸ್ವಿಯಾಗಿದ್ದೇವೆ. ಇನ್ನೂ ಯಶಸ್ಸನ್ನು ಸಂಪಾದನೆ ಮಾಡಬಹುದಿತ್ತು. ಅದಕ್ಕೆ ಬೇಕಾದಷ್ಟು ಕಾರಣಗಳಿವೆ. ಏಕೆ ಅದನ್ನು ಮಾಡಲಾಗಲಿಲ್ಲ? ನಮ್ಮ ಆಡಳಿತ ಯಂತ್ರವನ್ನು ಇನ್ನೂ ಚುರುಕು ಮಾಡಬೇಕಾಗಿದೆ. ಆ ಆಡಳಿತ ಯಂತ್ರವನ್ನು ಹೆಚ್ಚು ಚುರುಕು ಮಾಡಲಿಕ್ಕೆ, ನಾವು ನೀವು ಪ್ರಯತ್ನ ಮುಂದುವರಿಸಬೇಕೆನ್ನುವ ಮಾತನ್ನು ಈ ಸಮಯದಲ್ಲಿ ಹೇಳುತ್ತೇನೆ. 25 ಪರ್ಸೆಂಟ್ ವಿದ್ಯುತ್ ಉತ್ಪಾದನೆ ಕುಂಠಿತವಾಯಿತು. 12 ಪರ್ಸೆಂಟ್ ವಿದ್ಯುತ್ ಅನ್ನು ಹೆಚ್ಚು ಕೊಳ್ಳಲು ನಾವು ಪ್ರಯತ್ನಗಳನ್ನು ಮುಂದುವರಿಸಿದೆವು. ಮಾನ್ಯ ಸದಸ್ಯರಿಗೆ ತಿಳಿದಿರುವ ರೀತಿ ನಮ್ಮ ಕರ್ನಾಟಕದ ಗ್ರಿಡ್ ಏನಿದೆ ಅದು ಸಮಾನವಾಗಿ ಹೈಡೆಲ್ ವಿದ್ಯುತ್ ಉತ್ಪಾದನೆ ಮತ್ತು ಥರ್ಮಲ್ ಮತ್ತು ಇತರೆ ವಿದ್ಯುತ್ ಉತ್ಪಾದನೆ ಮೇಲೆ ಅವಲಂಬಿಸಿದೆ. ಯಾವಾಗ ಹೈಡೆಲ್ ವಿದ್ಯುತ್ ಉತ್ಪಾದನೆಯಲ್ಲಿ ಕಳೆದ 2 ವರ್ಷಗಳ ಕಾಲ ನಾವು ಹಿನ್ನಡೆಯನ್ನು ಅನುಭವಿಸಿದ್ದವೋ, ಸ್ವಾಭಾವಿಕವಾಗಿ ಅದು ಒಂದಿಲ್ಲೊಂದು ರೀತಿಯಲ್ಲಿ ವಿದ್ಯುತ್ ವಿತರಣೆಯ ವ್ಯವಸ್ಥೆ ಮೇಲೆ ಒಂದು ರೀತಿಯ ಗ್ರಹಣ ಹಿಡಿದಂತಾಗುತ್ತದೆ. ಇವತ್ತು ಬೆಳಿಗ್ಗೆ ನಾವು ರಿವ್ಯೂ ಮಾಡಿದಾಗ 85 ಲಕ್ಷ ಮಿಲಿಯನ್ ಯೂನಿಟ್ಸ್ ಏನಿದೆ, ಅದನ್ನು ಇವತ್ತು ಮಾಡುತ್ತಿದ್ದೇವೆ. ಆದರೆ, ಆ 85 ಲಕ್ಷ ಮಿಲಿಯನ್ ಯೂನಿಟ್ಸ್ ಏನಿದೆ ಇದನ್ನು ಕೊಳ್ಳಬೇಕಾದರೆ ಶಕ್ತಿ, ಸಂಪನ್ಮೂಲ ಬೇಕಲ್ಲವೇ? ಯಾರೂ ವಿದ್ಯುತ್ ಅನ್ನು ಬಳುವಳಿಯಾಗಿ ಕೊಡುವುದಿಲ್ಲ. ನಮಗೆ ಕೇಂದ್ರ ಸರ್ಕಾರ ವಿದ್ಯುತ್ ಅನ್ನು ಮಾರುತ್ತದೆ. ಪ್ರೈವೇಟ್ ಪವರ್ಸ್ ಮ್ಯಾನುಫ್ಯಾಕ್ಚರರ್ಸ್ ಏನಿದ್ದಾರೆ, ಅವರು ನಮಗೆ ವಿದ್ಯುತ್ ಮಾರುತ್ತಾರೆ. ನಾವು ಕರ್ನಾಟಕದ ವಿದ್ಯುತ್ ಬಳಕೆದಾರರಿಗೆ ವಿದ್ಯುಚ್ಛಕ್ತಿಯನ್ನು ಕೊಂಡು, ಆ ವಿದ್ಯುತ್ ಅನ್ನು ಹರಿಸಬೇಕಾಗಿದೆ. ಅದನ್ನು ಹರಿಸುವ ವ್ಯವಹಾರದಲ್ಲಿ ಗಮನಾರ್ಹವಾಗಿ ಸುಧಾರಣೆಯಾಗಿದೆ ಎಂದು ನಾನು ತಿಳಿಯುವುದಿಲ್ಲ. ಗಮನಾರ್ಹವಾಗಿ ಸುಧಾರಣೆಯಾಗಿದೆ ಎಂದು ಹೇಳಿ ನಮಗೆ ನೋಟ್ ಬಂದರೂ ಕೂಡ ಈ ವಿಧಾನಸಭೆಗೆ ಬಂದಾಗ, ವಿಧಾನ ಪರಿಷತ್‌ಗೆ ಹೋದಾಗ, ನಮಗೆ ಸ್ಪಷ್ಟವಾದ ಅರಿವು ಇದೆ, ಜಾಗೃತಿ ಇದೆ.

ಯಾವ ಪ್ರಮಾಣದಲ್ಲಿ ನಾವು ಈ ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ನೋಡಬೇಕು ಹಾಗೆನ್ನುವ ಕಾರಣ ಬೇಕಾದಷ್ಟು ಸುಧಾರಣೆಗಳನ್ನು ಜಾರಿಗೆ ತಂದೆವು. ಅವು ಇನ್ನೂ ಯಶಸ್ಸಿನ ಗುರಿಯನ್ನು ಮುಟ್ಟಿಲ್ಲವೆನ್ನುವ ಕಟು ಸತ್ಯವನ್ನೂ ಕೂಡ ರಾಜ್ಯ ಸರ್ಕಾರ ಗಮನಿಸಿದೆ. ನೀವು ಹೇಗೆ ಗಮನಿಸಿದಿರಿ, ನಾವೂ ನಮ್ಮ ಪ್ರವಾಸಗಳಿಗೆ ಹೋದ ಕಾಲದಲ್ಲಿ, ಜನರ ಆರ್ತನಾದ ಕೇಳಿಸುತ್ತದೆ, ಜನ ಶಾಪ ನಮಗೂ ಕೂಡ ತಟ್ಟುತ್ತದೆ. ಆದರೆ, ಇದಕ್ಕೆ ಸುಲಭವಾದ ಸಲೂಷನ್ಸ್ ನಮ್ಮಲ್ಲಿದೆ ಹಾಗೆಂದು ಹೇಳಿ ನಾವು ಹೇಳುವ ಸ್ಥಿತಿಯಲ್ಲಿಲ್ಲ. ಈ ಸ್ಥಿತಿ ಎಲ್ಲಾ ರಾಜ್ಯಗಳಲ್ಲಿಯೂ ಇದೆ. ಪಕ್ಕದ ತಮಿಳುನಾಡು ರಾಜ್ಯದಲ್ಲಿ ಈಗ ಹೊಸದಾಗಿ ಅವರ ವಿತರಣಾ ವ್ಯವಸ್ಥೆಯಲ್ಲಿ ಮತ್ತು ವಿತರಣಾ ವಿಚಾರಗಳಲ್ಲಿ ಬಹಳಮಟ್ಟಿಗೆ ಅವರು ಸುಧಾರಣೆ ತರಲು ಪ್ರಯತ್ನಪಟ್ಟಿದ್ದಾರೆ. ಯಾವ ಸುಧಾರಣಾ ಹಾದಿಯನ್ನು ನಾವು ಬಹಳ ಮಟ್ಟಿಗೆ ಕ್ರಮಿಸಿದ್ದೇವೆ, ಅದನ್ನು ಅವರು ಈಗ ಪ್ರಾರಂಭಿಸುತ್ತಿದ್ದಾರೆ. ಪ್ರೈವೇಟ್ ಕಂಪನಿಗಳನ್ನು ಮಾಡಬೇಕೆನ್ನುವುದು ಈ ಸರ್ಕಾರದ ಕಲ್ಪನೆಯ ಜೊತೆಗೆ ಹಿಂದಿನ ಸರ್ಕಾರ ನಮಗೆ ಕೊಟ್ಟಂಥ ಬಳುವಳಿಯದು. ಅದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ವಿದ್ಯುತ್ ಸುಧಾರಣೆಗಳಲ್ಲಿ ಹಿಂದಿನ ಸರ್ಕಾರ ಯಾವ ನಿಲುವು ತೆಗೆದುಕೊಂಡಿತ್ತು ಅದೇ ನಿಲುವನ್ನು ನಾವು ಘೋಷಣೆ ಮಾಡಿಕೊಂಡು ಅದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಈ ವರ್ಷ ಒಳ್ಳೆಯ ಮಳೆ ಬಂದರೆ, ಬರುವ ಸೂಚನೆ ಈಗಾಗಲೇ ಕಂಡು ಬರುತ್ತಿದೆ. ನಿನ್ನೆ ಗದಗದಲ್ಲಿ ಮಳೆಯಾಯಿತು. ಮೊನ್ನೆ ಗುಲ್ಬರ್ಗಾದಲ್ಲಿ ಮಳೆಯಾಯಿತು. ಮುಳಬಾಗಿಲಿನಲ್ಲಿ ಮಳೆಯಾದರೆ ಈ ವರ್ಷ ಒಳ್ಳೆಯ ಬೆಳೆಯಾಗುತ್ತದೆಂದು ಮುಳಬಾಗಿಲಿನಿಂದ ಬಂದ ರೈತರು ನನಗೆ ಹೇಳಿದರು. ಮೈಸೂರು, ಮಂಡ್ಯದಲ್ಲಿ ಮಾರ್ಚ್‌ನಲ್ಲಿ ವರುಣನ ಅಲಾಟ್‌ಮೆಂಟ್ ಎಷ್ಟು ಆಗಬೇಕಾಗಿತ್ತು ಅಷ್ಟು ಅಲಾಟ್‌ಮೆಂಟ್ ಆಗಿ ಹೋಯಿತು. ಕಾವೇರಿ ವಿಷಯದಲ್ಲಿ ದೊಡ್ಡದಾಗಿ ವಿಫಲವಾಗಿದ್ದೀರಿ ಎಂದು ಮಾನ್ಯ ಸದಸ್ಯರಾದ ಸಿಂಧ್ಯಾರವರು ಹೇಳಿದರು. ಕಾವೇರಿ ಬಗ್ಗೆ ನಾನೇನು ಈ ಸದನಕ್ಕೆ ಆಶ್ವಾಸನೆ ಕೊಟ್ಟಿದ್ದೆ, ಹೊರಗಡೆ ಆಶ್ವಾಸನೆ ಕೊಟ್ಟಿದ್ದೆ, ಬಂದ ನೀರೆಲ್ಲವನ್ನೂ ಹಿಡಿದು ನಿಲ್ಲಿಸುತ್ತೇವೆಂದು ಯಾವ ಆಶ್ವಾಸನೆಯನ್ನೂ ಯಾವ ಸರ್ಕಾರವೂ ಕೊಡಲಿಕ್ಕೆ ಬರುವುದಿಲ್ಲ ಅಥವಾ ಮಧ್ಯಂತರ ಟ್ರಿಬ್ಯುನಲ್, ಅವರು ಮಾತನಾಡಿದರಲ್ಲಾ, ದಯವಿಟ್ಟು ಈ ವಿಚಾರ ಮಾತನಾಡುವುದಕ್ಕೆ ಹೋಗಬೇಡಿ ಎಂದು ಅವರಿಗೆ ಹೇಳಬೇಕಾಗಿತ್ತು.

ಶ್ರೀ ಸಿ. ಬೈರೇಗೌಡ:- ಹಿಂದೆ ನೀರು ಬಿಟ್ಟಿದೀರಿ, ಪಾದಯಾತ್ರೆ ಮಾಡಿದಿರಿ....

ಅಧ್ಯಕ್ಷರು:- ಕೊನೆಯಲ್ಲಿ ಹೇಳಿ.

ಶ್ರೀ ಎಸ್.ಎಂ. ಕೃಷ್ಣ:- ನಿಜ. ಕೊನೆಯಲ್ಲಿ ಹೇಳಿ ಎಂದು ಕೇಳಿದರೆ ಅವರು ಕೊನೆಯಲ್ಲಿ ನನ್ನನ್ನು ಹಿಡಿದುಕೊಳ್ಳುತ್ತಾರೆ. ಆದ್ದರಿಂದ, 2 ನಿಮಿಷದಲ್ಲಿ ಅದನ್ನು ಮುಗಿಸುತ್ತೇನೆ. ಪ್ರತಿ ರಾಜ್ಯ ಸರ್ಕಾರವು ಕೂಡ ಮಳೆ ಹೀಗೆ ಬೀಳುತ್ತದೆನ್ನುವುದನ್ನು ಅವಲಂಬಿಸಿ ತನ್ನ ನಿರ್ಣಯ ಮಾಡುತ್ತದೆ. ಇದನ್ನು ವಿಸ್‌ಡಂ ಎಂದು ಕರೆಯಿರಿ ಅಥವಾ ಇನ್ನೇನಾದರೂ ಕರೆಯಿರಿ. ನಾವು ಪಾದಯಾತ್ರೆ ಹೋದ ಕಾಲದಲ್ಲಿ ಬೈರೇಗೌಡರು ನನ್ನನ್ನು ಭೇಟಿ ಮಾಡಿದ ಕಾಲದಲ್ಲಿ ಇದ್ದ ಪರಿಸ್ಥಿತಿ ಏನಿತ್ತು? ನಮ್ಮ ಲಕ್ಷಾಂತರ ಎಕರೆ ಜಮೀನಿಗೆ ಮೋಕ್ಷ ಸಿಗುವ ಸ್ಥಿತಿ ಇರಲಿಲ್ಲ. 98 ಜಲಾಶಯಗಳು ಇತ್ತು. ಅನಂತರ ಏನೆಲ್ಲಾ ಪರಿವರ್ತನೆಗಳಾಗಿ ಅದು 114 ಆಯಿತು. 114 ನಮ್ಮ ಜಲಾಶಯಗಳಲ್ಲಿ ಸಾಮರ್ಥ್ಯ ಹೆಚ್ಚಾದ ಮೇಲೂ ಕೂಡ ಅದೇ ವಾದವನ್ನು ಮುಂದುವರೆಸುವುದು ನಮ್ಮಿಂದ

ಸಾಧ್ಯವಿಲ್ಲ. ಸೂಕ್ತವಾದ ಬದಲಾವಣೆ, ಮಾರ್ಪಾಡುಗಳನ್ನು ತಂದೆವು. ಅದು ಕೃಷ್ಣಾ ವಿಚಾರದಲ್ಲಿಯೂ ಕೂಡ ನಾವು ಸುಪ್ರೀಂಕೋರ್ಟಿನ ರಾಂಗ್ ಸೈಡ್‌ನಲ್ಲಿದ್ದೆವು. ಅಂತಿಮವಾಗಿ, ಸುಪ್ರೀಂಕೋರ್ಟಿನವರು ನಮ್ಮ ದೃಷ್ಟಿಯನ್ನು ಗಮನಿಸಿ, 519 ರವರೆಗೆ ನಮಗೆ ಪರ್ಮಿಷನ್ ಕೊಟ್ಟರು. ಈಗ ಪ್ರಧಾನ ಮಂತ್ರಿಯವರು ಮತ್ತು ಸುಪ್ರೀಂ ಕೋರ್ಟಿನವರು, ಸುಪ್ರೀಂಕೋರ್ಟಿನವರು ಇಡೀ ರಾಜ್ಯಗಳ ಎಲ್ಲಾ ಅವಶ್ಯಕತೆ ಮತ್ತು ಬೆಳೆಯ ವಿಹಂಗಮ ನೋಟವನ್ನು ಅವರು ಪಡೆಯುತ್ತಾರೆ. ಹಾಗೆಯೇ ಪ್ರಧಾನ ಮಂತ್ರಿಗಳು. ಕಾವೇರಿ ರಿವರ್ ಅಥಾರಿಟಿ ಮಾಡಿದ ಕಾಲದಲ್ಲಿ ಇಂಥ ಅಡ್ಜಸ್ಟ್‌ಮೆಂಟ್‌ಗೆ ಅವಕಾಶ ಇರಲಿ, ಹಾಗೆಂದು ಆ ಕಾವೇರಿ ರಿವರ್ ಅಥಾರಿಟಿ ಸೃಷ್ಟಿಯಾಯಿತು. ಆ ಕಾವೇರಿ ರಿವರ್ ಅಥಾರಿಟಿ ಕೆಲಸ ಮಾಡಿಕೊಂಡು ಬಂದಿದೆ ಎಂದು ನಾನು ಗ್ರಹಿಸುತ್ತೇನೆ. ಅದುದರಿಂದ ಕಾವೇರಿಯಲ್ಲಿ ನಾವು ನಿಂತ ಬೆಳೆಯನ್ನು ರಕ್ಷಣೆ ಮಾಡುತ್ತೇವೆ, ಕುಡಿಯುವ ನೀರನ್ನು ನಾವು ರಕ್ಷಣೆ ಮಾಡುತ್ತೇವೆ. ಇವತ್ತು ನಾನು ಧೈರ್ಯವಾಗಿ ಹೇಳುತ್ತಿದ್ದೇನೆ. ಅಭಿಮಾನದಿಂದ ಹೇಳುತ್ತಿದ್ದೇನೆ. ಈ ಎರಡನ್ನೂ ಕೂಡ ನಾವು ಸಾಧನೆ ಮಾಡಿದ್ದೇವೆ. ಇಲ್ಲದಿದ್ದರೆ ಒಂದು ದೊಡ್ಡ ಹಾಹಾಕಾರ ನಡೆಯುತ್ತಿತ್ತು. ಕಬಿನಿ ಜಲಾಶಯದ ಅಚ್ಚುಕಟ್ಟು ಕೃಷ್ಣರಾಜ ಸಾಗರದ ಅಚ್ಚುಕಟ್ಟಿನಲ್ಲಿ, ನಾನು ಈ ಸರ್ಕಾರ ಈ ಪಕ್ಷ ರಕ್ಷಣೆ ಮಾಡಿತೋ ಅಥವಾ ಇಲ್ಲವೋ ಎನ್ನತಕ್ಕಂಥದ್ದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆ ಅದರಲ್ಲಿ ನಮಗೆ ಯಾವುದು ಅನುಮಾನಗಳು ಉಳಿದಿರುವುದಿಲ್ಲ. ರೈತರು ಎಲ್ಲಾ ಬೆಳೆಗಳನ್ನು ತೆಗೆದುಕೊಂಡು ಹೋದರು. ಅವರ ಸಮಾಧಾನವಾಗಿ ಇದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನೀರು ಇಲ್ಲವೆಂದು ಕಬ್ಬು ಅರೆಯುವುದನ್ನು ನಿಲ್ಲಿಸಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಅಧ್ಯಕ್ಷರೆ, ಸಕ್ಕರೆ ಕಾರ್ಖಾನೆಗಳು ಕರ್ನಾಟಕದಲ್ಲಿ ಏನೂ ಕ್ಲಿಷ್ಟ ಪರಿಸ್ಥಿತಿಯನ್ನು ಅನುಭವಿಸುತ್ತಿಲ್ಲ. ಮಹಾರಾಷ್ಟ್ರದಲ್ಲಿ ಇದಕ್ಕೂ ಭೀಕರವಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಪಂಜಾಬ, ಹರಿಯಾಣದಲ್ಲಿ ಕೂಡ ಇಂಥದ್ದೇ ಒಂದು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಸಕ್ಕರೆ ಕಾರ್ಖಾನೆಗಳ ಸಮಸ್ಯೆಗಳಿಗೂ ಇದಕ್ಕೂ ಗಂಟು ನೆಂಟನ್ನು ತರತಕ್ಕಂಥದ್ದು ಉಚಿತ ಅಲ್ಲ ಎಂದು ನಾನು ಭಾವನೆ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಸಕ್ಕರೆ ಕಾರ್ಖಾನೆಗಳು ಮಂಡ್ಯದಲ್ಲಿಯೇ ನೀರು ಇಲ್ಲವೆಂದು ಕಬ್ಬು ಅರೆಯುವುದನ್ನು ನಿಲ್ಲಿಸಿರುತ್ತವೆ.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಅಧ್ಯಕ್ಷರೆ, ನಾನು ಸ್ಪಷ್ಟಪಡಿಸುತ್ತೇನೆ. ನಾವು ಜನರಿಗೆ ಏನು ಅಶ್ವಾಸನೆಯನ್ನು ಕೊಟ್ಟು ಇಲ್ಲಿ ಅಧಿಕಾರದಲ್ಲಿ ಕುಳಿತಿದ್ದೇವೆ, ಆ ಅಶ್ವಾಸನೆಯನ್ನು ನಾವು ಈಡೇರಿಸಿದ್ದೇವೆ. ಇಲ್ಲದಿದ್ದರೆ ಈ ರಾಜ್ಯದಲ್ಲಿ ದೊಡ್ಡ ದಂಗೆ ನಡೆದು ಹೋಗುತ್ತಿತ್ತು, ರೈತರು ಬೆಳೆದ ಕಬ್ಬನ್ನು ಮತ್ತು ಭತ್ತವನ್ನು ಕಳೆದುಕೊಂಡಿದ್ದರೆ ಹಾಗೆಯೇ ಸುಮ್ಮನೆ ಕುಳಿತಿರುತ್ತಿದ್ದನೇ ರೈತನು? ಹಾಗೆಯೇ ಕಬ್ಬು ಬೆಳೆಯತಕ್ಕಂಥ ರೈತ ಕೈಗೆ ಬಂದ ಬೆಳೆಯನ್ನು ಕಣ್ಣು ಮುಂದೆ ನಾಶ ಮಾಡುವುದಕ್ಕೆ ಸಾಧ್ಯವಿದೆಯೇ? ಇತಿಮಿತಿಗಳು ಏನು ಇವೆ ಅಂತರೀಕವಾಗಿ ಸೃಷ್ಟಿಯಾಗಿರಲಿ, ಅಥವಾ ಹಲವಾರು ಕಾರಣಗಳಿಂದ ಸೃಷ್ಟಿಯಾಗಿರಲಿ, ಅವುಗಳನ್ನು ನಾವು ಪರಿಹಾರ ಮಾಡಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದೇವೆ. ಆ ಪ್ರಯತ್ನಕ್ಕೆ ನಮಗೆ ಯಶಸ್ಸು ಸಿಕ್ಕಿದೆ ಎನ್ನತಕ್ಕಂಥ ಒಂದು ಸೀಮಿತವಾದಂಥ ಪಾಯಿಂಟ್‌ನ್ನು ಮಾತ್ರ ನಾನು ಈ ಸಮಯದಲ್ಲಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನೂ ಬರ ಪರಿಹಾರ ಕೆಲಸಗಳು ಆಗಬೇಕಾಗಿದೆ,

ಮಾನ್ಯ ಸದಸ್ಯರ ಸಹಕಾರದಿಂದ ಮುಂದುವರೆಸುತ್ತೇವೆ. ಎಲ್ಲೆಲ್ಲಿ ಅವ್ಯವಹಾರಗಳು ನಡೆದಿವೆ, ಹುಬ್ಬಳ್ಳಿ-ಧಾರವಾಡದಲ್ಲಿ ಅವ್ಯವಹಾರ ನಡೆದಿದೆ ಎಂದು ಹೇಳಿದರು, ಅಲ್ಲಿ ವಿಚಾರಣೆಯನ್ನು ಮಾಡಿದ್ದೇವೆ, ಇನ್ನು ಎರಡು-ಮೂರು ಭಾಗದಲ್ಲಿ ಕಂಪ್ಲೇಟ್ ಬಂದಾಗ, ತತ್‌ಕ್ಷಣ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ. ಆದರೆ ಅವರನ್ನು ಡಿಸ್‌ಮಿಸ್ ಮಾಡಲಿಕ್ಕೆ ಸಾಧ್ಯವಾಗಿಲ್ಲ. ನ್ಯಾಚುರಲ್ ಲಾ, ನಾವು ಅದನ್ನು ಅನುಸರಿಸಿ ಯಾವುದಾದರೂ ಅಧಿಕಾರಿಗಳ ಮೇಲೆ ಕ್ರಮವನ್ನು ಕೈಗೊಳ್ಳಬೇಕಾಗಿದೆ. ರೈತರ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಹೇಳಿ, ಆಗಿಂದಾಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರರು ನಮ್ಮನ್ನು ಅಗ್ರಹ ಪಡಿಸುತ್ತಿದ್ದಾರೆ. ಕಳೆದ ವರ್ಷ ಈ ಫೈನಾನ್ಸಿಯಲ್ ಇಯರ್ ನಾವು 128 ಕೋಟಿ ರೂಪಾಯಿಗಳನ್ನು ಸಹಕಾರಿ ಕ್ಷೇತ್ರದಿಂದ ತೆಗೆದುಕೊಂಡಂಥ ಕೆಲವು ಸಾಲಗಳಿಗೆ ನಾವು ಬಡ್ಡಿ ವಿನಾಯಿತಿಯನ್ನು ಕೊಟ್ಟಿದ್ದೇವೆ. ಅದಕ್ಕೆ 128 ಕೋಟಿ ರೂಪಾಯಿಗಳನ್ನು ನಾವು ಕೊಡಬೇಕಾಗಿರತಕ್ಕಂಥ ಮೊತ್ತವಾಗುತ್ತದೆ. ಗೌರವಾನ್ವಿತ ಮಾನ್ಯ ಪ್ರಧಾನ ಮಂತ್ರಿಗಳು ಒಂದು ಕಡೆ ತಮ್ಮ ಒಂದು ಭಾಷಣದಲ್ಲಿ ರಾಜ್ಯ ಸರ್ಕಾರಗಳು ಬಡ್ಡಿ ರೀಯಾಯಿತಿಯನ್ನು ಕೊಡತಕ್ಕಂಥದ್ದರಲ್ಲಿ ಕೇಂದ್ರ ಸರ್ಕಾರ 50 ಪರ್ಸೆಂಟ್ ಭರಿಸುತ್ತದೆ ಎಂದು ಆಡಿರತಕ್ಕಂಥ ಮಾತು ನನಗೆ ಜ್ಞಾಪಕವಿದೆ. ಆದರೆ ಅದಾದನಂತರ ಆಶ್ವಾಸರೆ ಒಂದೇ ಅಲ್ಲ ನಾವು ರಿಯಾಯಿತಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ನೀವು ಹೇಳುವುದು ರೆಕಾರ್ಡಿನಲ್ಲಿ ಹೋಗುತ್ತದೆ, ಅದು ಆಗಬಾರದು, ಏಕೆಂದರೆ ಬಡ್ಡಿ ಮನ್ನಾ ಮಾಡುವುದರಲ್ಲಿ 50 ಪರ್ಸೆಂಟ್ ಕೊಡುತ್ತೇವೆಂದು ಪ್ರಧಾನ ಮಂತ್ರಿಯವರು ಎಲ್ಲಿಯೂ ಹೇಳಿಲ್ಲ. ಆ ತರಹ ಯಾವ ಹೇಳಿಕೆಯೂ ಬಂದಿಲ್ಲ.

ಶ್ರೀ ಎಸ್.ಎಂ. ಕೃಷ್ಣ- ಮಾನ್ಯ ಪ್ರಧಾನ ಮಂತ್ರಿಗಳು ಬಡ್ಡಿ ಪೂರ್ತಿ ಮನ್ನಾ ಮಾಡುವುದರ ಬಗ್ಗೆ ಏನೋ ಹೇಳಿದ್ದಾರಂತೆ.

ಶ್ರೀ ಜಗದೀಶ್ ಶೆಟ್ಟರ್:- ಸಾಲ ವಸೂಲಾತಿಯನ್ನು ಅವರು ಒಂದು ವರ್ಷ ಮುಂದೆ ಹಾಕಬೇಕು ಎನ್ನುವ ಹೇಳಿಕೆಯನ್ನು ಹೇಳಿರುತ್ತಾರೆ. ರಾಜ್ಯ ಸರ್ಕಾರಗಳು ಬಡ್ಡಿಯನ್ನು ಮನ್ನಾ ಮಾಡಿದರೆ ಅದರಲ್ಲಿ 50 ಪರ್ಸೆಂಟ್ ಕೊಡುತ್ತೇವೆಂದು ಕೇಂದ್ರ ಸರ್ಕಾರ ಎಲ್ಲಿಯೂ ಹೇಳಿಲ್ಲ.

ಶ್ರೀ ಹೆಚ್.ಕೆ. ಪಾಟೀಲ (ಜಲಸಂಪನ್ಮೂಲ ಸಚಿವರು):- ಮಾನ್ಯ ಪ್ರಧಾನ ಮಂತ್ರಿಗಳ ಘೋಷಣೆ ಏನು ಬಂತು ಎಂದರೆ, ಸಂಪೂರ್ಣವಾಗಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಬಂತು, ಅದು ಅಷ್ಟಕ್ಕೆ ನಿಲ್ಲಲಿಲ್ಲ, ಸಾಕಷ್ಟು ಸರ್ಕಾರದ ಇತರ ವಿವರಗಳು ಬಂದವು, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್:- ತಪ್ಪು ಮಾಹಿತಿ ರೆಕಾರ್ಡಿಗೆ ಹೋಗಬಾರದು, ಪತ್ರಿಕೆಯಲ್ಲಿ ಬಂದಿರುವುದನ್ನು ರೆಕಾರ್ಡ್ ತರಿಸಿ. ದಯವಿಟ್ಟು ನಾವು ಸುಮ್ಮನೆ ಮಾತನಾಡುವುದು ಬೇಡ.

ಶ್ರೀ ಶಿವಾನಂದ ಎಸ್. ಪಾಟೀಲ್:- ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಲಿಲ್ಲ, ಕನ್‌ವರ್ಷನ್ ಮಾಡುತ್ತೇವೆಂದು ಹೇಳಿದರು, ಬೇಕಾದರೆ ನಬಾರ್ಡಿಗೆ ಇನ್‌ಸ್ಟ್ರಕ್ಷನ್ಸ್ ಇಷ್ಯೂ ಮಾಡುತ್ತೇನೆಂದು ಹೇಳಿದರು, ಲೋನ್ ಕನ್‌ವರ್ಷನ್ ಮಾಡುತ್ತೇವೆ ಆದರೆ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಲಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಾವು ಮಾತ್ರ ಕರ್ನಾಟಕಕ್ಕೆ ಸೀಮಿತ ಇರುವವರು, ನೀವು ಇಬ್ಬರು ರಾಷ್ಟ್ರಮಟ್ಟದಲ್ಲಿ ಇರುವವರು ನೀವಿಬ್ಬರು ಗುದ್ದಾಡಿ ರೈತರನ್ನು ಹಾಳು ಮಾಡಬೇಡಿ. ಇಬ್ಬರೂ ಸೇರಿ ಒಟ್ಟು ಬಡ್ಡಿಯನ್ನು ಮನ್ನಾ ಮಾಡಿ. ಈಗ ಮಾಡಿರುವ ಮನ್ನಾ ಆರ್ಡ್‌ರ್ ಕೂಡ ಸರಿಯಾಗಿರುವುದಿಲ್ಲ. ಇದರಿಂದ ರೈತರ ಬಡ್ಡಿ ಹೋಗುವುದಿಲ್ಲ. ಲ್ಯಾಂಡ್ ಬ್ಯಾಂಕಿನ ಬಡ್ಡಿ ಮನ್ನಾ ಆಗಿಲ್ಲ. ಈ ಕಾರಣದಿಂದ ಬೇರೆ ಬ್ಯಾಂಕಿನವರೂ ಕೂಡ ಬಡ್ಡಿಯನ್ನು ಮನ್ನಾ ಮಾಡಿಲ್ಲ. ದಯವಿಟ್ಟು ನೀವು ಗುದ್ದಾಡಿ ರೈತರನ್ನು ಕೊಲ್ಲಬೇಡಿ, ಇಬ್ಬರು ಸೇರಿ ಒಟ್ಟು ಬಡ್ಡಿಯನ್ನು ಮನ್ನಾ ಮಾಡಿ.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಧಾನ ಮಂತ್ರಿಗಳ ಹೆಸರನ್ನು ಈ ಚರ್ಚೆಯಲ್ಲಿ ತಂದು ಅಪಚಾರವಾಯಿತು ಎಂದು ನಾನು ಭಾವಿಸುತ್ತೇನೆ. ಕೇಂದ್ರ ಸರ್ಕಾರದ ಈ ಬಡ್ಡಿ ರಿಯಾಯಿತಿ ನಾವು ಕೊಡುತ್ತೇವೆ ಎನ್ನತಕ್ಕಂಥ ವಿಚಾರದಲ್ಲಿ ನಮ್ಮ ಅನಿಸಿಕೆ ಏನಿತ್ತು ಎಂದರೆ, ನಮ್ಮ ಗಮನ ಏನು ಎಂದರೆ, ಶೇಕಡಾ 50 ಪಾರ್ಟಿಸಿಪೇಟ್ ಮಾಡಿ ಎಂದು, ಇವತ್ತು ವಸ್ತು ಸ್ಥಿತಿ ಏನಾಗಿದೆ ಎಂದರೆ, ಕೇಂದ್ರ ಸರ್ಕಾರ ಶೇಕಡಾ 20 ರಷ್ಟು ಹಣವನ್ನು 5 ವರ್ಷಗಳ ಅವಧಿಯಲ್ಲಿ ನಾವು ರಿಯಾಯಿತಿಯನ್ನು ಕೊಡುತ್ತೇವೆಂದು ಹೇಳಿರುತ್ತಾರೆ. ಆದುದರಿಂದ ಬಾಟಮ್‌ಲೈನ್ ಏನೆಂದರೆ, 128 ಕೋಟಿ ರೂಪಾಯಿಗಳ ಬಡ್ಡಿಯ ರಿಯಾಯಿತಿಯ ಘೋಷಣೆಯನ್ನು ರಾಜ್ಯ ಸರ್ಕಾರದವರು ಮಾಡಿದ್ದಾರೆ ಅದರ 80 ರಷ್ಟು ಭಾಗವನ್ನು ಅವರೇ ಭರಿಸಬೇಕಾಗುತ್ತದೆ, ಅದನ್ನು ಭರಿಸಲಿಕ್ಕೆ ನಾವು ಸಿದ್ಧರಾಗಿದ್ದೇವೆ ಎನ್ನತಕ್ಕಂಥ ಮಾತನ್ನು ನಾನು ರೈತ ಸಮುದಾಯಕ್ಕೆ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:- ಲ್ಯಾಂಡ್ ಬ್ಯಾಂಕಿನ ಸಾಲದ ಬಡ್ಡಿಯನ್ನು ರಾಜ್ಯ ಸರ್ಕಾರ ಮನ್ನಾ ಮಾಡಲಿ.

ಶ್ರೀ ಎಸ್.ಎಂ. ಕೃಷ್ಣ:- ಲ್ಯಾಂಡ್ ಬ್ಯಾಂಕಿನಿಂದಾದರೂ ಮಾಡಲಿ, ರಾಜ್ಯ ಸರ್ಕಾರದಿಂದಲಾದರೂ ಮಾಡಲಿ, ಅಥವಾ ಅದನ್ನು ಎಕ್ಸ್‌ಟೆಂಡ್ ಮಾಡುವುದಾದರೂ ಆಗಲಿ, ನಾವು ಅರ್ಥ ಮಾಡಿಕೊಳ್ಳತಕ್ಕಂಥದ್ದರಲ್ಲಿ ಬಡ್ಡಿ ರಿಯಾಯಿತಿಯನ್ನು ಮಾಡುವುದರಲ್ಲಿ 1985ನೇ ಇಸ್ವಿಯಲ್ಲಿ ನೀವು ಏನು ಮಾಡಿದಿರಿ, ಇದನ್ನೇ ನೀವು ಮಾಡಿದ್ದು. ಎಲ್ಲಾ ಸಾಲ ನಿಂತು ಹೋಗಿದೆ.

ಶ್ರೀ ಸಿ. ಬೈರೇಗೌಡ:- ನಾವು 1985ರಲ್ಲಿ ಏನು ಮಾಡಿದ್ದೇವೆ ಅದನ್ನೇ ನೀವು ಕಾರ್ಯಗತ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಡಿ.

ಶ್ರೀ: ಎಸ್.ಎಂ. ಕೃಷ್ಣ- ಮಾನ್ಯ ಅಧ್ಯಕ್ಷರೆ, 1985ರಲ್ಲಿ ನೀವು ಏನು ಕಾರ್ಯಕ್ರಮವನ್ನು ಘೋಷಣೆ ಮಾಡಿದಿರಿ, ಆ ಕಾರ್ಯಕ್ರಮವನ್ನು ಇಂಪ್ಲಿಮೆಂಟ್ ಮಾಡಿದಿರಿ, ಅದಕ್ಕೆ ನನ್ನ ಅಭಿನಂದನೆಗಳು, ಅದನ್ನು ಬಹಳ ಚೆನ್ನಾಗಿ ಮಾಡಿದಿರಿ. ನಬಾರ್ಡ್ ಹಾಗೂ ರಿಜರ್ವ್ ಬ್ಯಾಂಕಿನವರು ನಮಗೆ ಎಚ್ಚರಿಕೆಯನ್ನು ಕೊಡುವ ಹಾಗೆ ನೀವು ಮಾಡಿದಿರಿ. ಅಭಿನಂದನೆಗಳು, ಫೈಲ್ ನೋಡಿ ರಿಜರ್ವ್ ಬ್ಯಾಂಕಿನವರು ಹೇಳಿದರು, ಇನ್ನೊಂದು ಸಲ ಈ ರೀತಿ ಮಾಡುವುದಕ್ಕೆ ಹೋದರೆ, ನಿಮಗೆ ಯಾವ ಸಾಲವನ್ನೂ ಕೊಡುವುದಕ್ಕೆ ಹೋಗುವುದಿಲ್ಲವೆಂದು ಹೇಳಿದರು.

ಶ್ರೀ ಸಿ. ಬೈರೇಗೌಡ:- ನಾವು ಏನು ಹೇಳಿದ್ದೇವೋ ಅದನ್ನು ಕಾರ್ಯಗತ ಮಾಡುದ್ದೇವೆ.

ಶ್ರೀ ಎಸ್.ಎಂ. ಕೃಷ್ಣ:- ಫಸ್ಟ್ ಪಾರ್ಟ್ ನಿಮಗೆ ಅಭಿನಂದನೆಗಳನ್ನು ಕೊಟ್ಟಾಯಿತಲ್ಲಾ. ಆ ಅಭಿನಂಧನೆಗಳನ್ನು ಕೊಟ್ಟಾದ ಮೇಲೆ, ಓಟ್ ಆಫ್ ಥ್ಯಾಂಕ್ಸ್‌ಗೆ ನನಗೆ ಅವಕಾಶವನ್ನು ಮಾಡಿಕೊಡಬೇಕಲ್ಲವೇ?

12.10 ಪಿ.ಎಂ.

ಶ್ರೀ ಎಸ್.ಎಸ್. ಪಾಟೀಲ್:- ನಾನು ಹಾಗೂ ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳ ಮನೆಯ ಮುಂದೆ ಸತ್ಯಾಗ್ರಹ ಕೊಡುತ್ತೇವೆಂದು ಹೇಳಿದ ಮೇಲೆ ಆಗಿದ್ದು, ಇದು 1985 ಹಾಗೂ 1987ರಲ್ಲಿ ಎರಡು ಸಲ ಇತ್ತು.

ಶ್ರೀ ಎಸ್.ಎಂ. ಕೃಷ್ಣ:- ನಾನು ಎಸ್.ಎಸ್. ಪಾಟೀಲರು ಡೆಲ್ಲಿಗೆ ಹೋಗಲಿಲ್ಲವೆಂದು ನನಾನು ಹೇಳಲಿಲ್ಲ, ತಾವು ದೆಹಲಿಗೆ ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದಿರಿ, ನೀವು ಯಶಸ್ವಿಯಾದಿರಿ. ಆದರೆ ರಿಸರ್ವ್ ಬ್ಯಾಂಕ್, ನಬಾರ್ಡ್, ನಮ್ಮ ಮಧ್ಯೆ ನಡೆದಿರತಕ್ಕಂತಹ ಕೋಲ್ಡ್ ವಾರ್ ಏನಿದೆ, ನೋಡಿ ಮಾನ್ಯ ಭೈರೇಗೌಡರು ಅದನ್ನು ಒಪ್ಪಿಕೊಳ್ಳುತ್ತಿದ್ದಾರೆ.

ಶ್ರೀ ಶ್ರೀನಿವಾಸಗೌಡ ಕುಡುವನಹಳ್ಳಿ:- 1985ರಲ್ಲಿ ನಾವು ಮಾಡಿರುವುದು ನಿಜ. ಏನಾಗಿತ್ತೆಂದರೆ ನಬಾರ್ಡ್‌ನವರು ಸರ್ಕಾರಕ್ಕೆ ಅವರು ಎಚ್ಚರಿಕೆಯನ್ನು ಕೊಟ್ಟಿದ್ದರು, ಅದರೂ ಕೂಡ ಕೊಡಲೇಬೇಕೆಂದು ಸರ್ಕಾರವು ತೀರ್ಮಾನ ಮಾಡಿತ್ತು.

ಶ್ರೀ ಎಸ್.ಎಂ. ಕೃಷ್ಣ:- ಅದನ್ನೆ ನಾನು ಹೇಳುತ್ತಿರುವುದು, ದಯವಿಟ್ಟು ಕ್ಷಮಿಸಬೇಕು, ತಾವು ನೀವು ಏನು ಹೇಳಿದಿರಿ, ಅದೇನೂ ದಾಖಲೆಗೆ ಹೋಗಿದೆ ಅಷ್ಟನ್ನು ನಾನು ಹೇಳುತ್ತಿರುವುದು. ಎಚ್ಚರಿಕೆ ಕೊಡತಕ್ಕಂಥ ಒಂದು ಸಿಚ್ಯುಯೇಷನ್ ಬಂತು ಅಂತ ಹೇಳಿ, ಅದರೂ ಕೂಡ ತಾವು ನಿಭಾಯಿಸಿದಿರಿ, ಇವತ್ತು ಅವರು ನಮಗೆ ಎಚ್ಚರಿಕೆಯನ್ನು ಕೊಡಬಹುದು ನೀವು ಏನು 175 ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿದ್ದೀರಿ, ಆ ಎಚ್ಚರಿಕೆ ಬಂದರೆ ನಾವು ಸೂಕ್ತವಾದಂತಹ ರೀತಿಯಲ್ಲಿ ಅವರ ಜೊತೆಯಲ್ಲಿ ಪರಿಹರಿಸುತ್ತೇವೆ. ಇವತ್ತು ಏನಾಗಿಧೆ.

ಶ್ರೀ ಶ್ರೀನಿವಾಸಗೌಡ ಕುಡುವನಹಳ್ಳಿ:- ವಂದನಾರ್ಪಣೆ ಸರಿಹೋಗಲಿಲ್ಲ.

ಶ್ರೀ ಎಸ್.ಎಂ. ಕೃಷ್ಣ:- ಕ್ಷಮಿಸಿ.

ಶ್ರೀ ಸಿ. ಬೈರೇಗೌಡ:- 1995ರಲ್ಲಿ ನಾವು ಎನನ್ನು ಕಾರ್ಯಗತ ಮಾಡಿದ್ದೇವೆ, ಅದನ್ನು ಕಾರ್ಯಗತ ಮಾಡುತ್ತೇವೆಂದು ತಾವು ದಯವಿಟ್ಟು ಹೇಳಿಬಿಡಿ.

ಶ್ರೀ ಎಸ್.ಎಂ. ಕೃಷ್ಣ:- ಈಗ ಕೇಂದ್ರ ಸರ್ಕಾರದವರು ಶ್ರೀ ಅಜಿತಸಿಂಗ್‌ರವರು ಅಗ್ರಿಕಲ್ಚರ್ ಮಿನಿಸ್ಟರ್ ಗೌರ್ನಮೆಂಟ್ ಆಫ್ ಇಂಡಿಯಾದವರು ನೀತಿಯನ್ನು ಅನೌನ್ಸ್ ಮಾಡಿದ್ದಾರೆ. ಅವರು ಒಂದು ಕಾಲದಲ್ಲಿ ಹೇಳಿದ್ದರು, ಈಗ ಲೇಟೆಸ್ಟ್ ಏನೆಂದು ಹೇಳಿದರೆ 20% will be waived off in five years. ಇವತ್ತು ಪ್ರಸ್ತುತ ಚಾಲ್ತಿಯಲ್ಲಿರತಕ್ಕಂತಹ ಕೇಂದ್ರ ಸರ್ಕಾರದ ಧೋರಣೆ ಏನೆಂದು ಹೇಳಿದರೆ ಶೇಕಡಾ 20 ರಷ್ಟನ್ನು ನಾವು ವೇ ಆಫ್ ಮಾಡುತ್ತೇವೆ, ಅದು 5 ವರ್ಷದಲ್ಲಿ ನಾವು phase out ಮಾಡಿಸುತ್ತೇವೆ ಹಾಗೆ ಅಂತ ಹೇಳಿದರು. ಅದನ್ನು ನಾನು ಈ ಸಮಯದಲ್ಲಿ ಜ್ಞಾಪಕಕ್ಕೆ ತರಿಸುವುದರ ಬಗ್ಗೆ ಯೋಚನೆಯನ್ನು ಮಾಡುತ್ತಿದ್ದೇನೆ. ಗೌರ್ನಮೆಂಟ್ ಆಫ್ ಇಂಡಿಯಾದವರು ಇದುವರೆಗೆ ಸುಮಾರು ಈ ಬರಪರಿಹಾರದ ಹೆಡ್‌ನಲ್ಲಿ ಸುಮಾರು 250.84 ಕೋಟಿ ರೂಗಳನ್ನು ರಿಲೀಸ್ ಮಾಡಿದ್ದಾರೆ. ಕರ್ನಾಟಕ ಸರ್ಕಾರದವರು ಈಗ ಅದನ್ನು

ಹಿಡಿದು 358 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಗೌರ್ನಮೆಂಟ್‌ನವರು ಕೊಟ್ಟಂತಹ 250 ಕೋಟಿ ರೂಪಾಯಿಗಳ ಜೊತೆಗೆ ನಾವು 100 ಕೋಟಿ ರೂಪಾಯಿಗಳನ್ನು ಸೇರಿಸಿ ಅದನ್ನು ಖರ್ಚು ಮಾಡಿದ್ದೇವೆನ್ನತಕ್ಕಂತಹದ್ದನ್ನು ಅವಗಾಹನೆಗೆ ತರುತ್ತಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್:- ಆಗಲೇ ತಾವು 300 ಕೋಟಿ ರೂಪಾಯಿಗಳೆಂದು ಹೇಳಿದ್ದೀರಿ. ಆಗಲೇ ಅವನು ಸ್ಟೇಟ್ ಗೌರ್ನಮೆಂಟ್ ಎಂದು ಹೇಳಿದ್ದಾರೆ, ಅದು ರೇಕಾರ್ಡ್‌ನಲ್ಲಿದೆ.

ಶ್ರೀ ಎಸ್.ಎಂ. ಕೃಷ್ಣ- ಈ ಸ್ಟೇಟ್‌ಮೆಂಟ್ ಏನಿದೆ, ತಾವು ಇದನ್ನು ವೆರಿಫೈ ಮಾಡಬಹುದು. ನಮ್ಮ ಅಂಕಿಅಂಶಗಳು ಏನಿವೆ, ನಮ್ಮ ಫೈಲ್ಸ್ ಏನಿವೆ, ಮತ್ತು ನಾವು ಜಿಲ್ಲಾಧಿಕಾರಿಗಳಿಗೆ ಏನು ರಿಲೀಸ್ ಮಾಡಿದ್ದೇವೆ, ಇದು ಸುಲಭವಾಗಿ ಸಿಗುವಂತಹ ಅಂಕಿಅಂಶವಾಗಿದೆ. ತಮಗೆ ಇನ್ನೂ ಅನುಮಾನವಿದ್ದರೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಇದರ ಬಗ್ಗೆ ಅವರು ಸೂಕ್ತ ರೀತಿಯಲ್ಲಿ ಅದಕ್ಕೆ ಸ್ಪಂದಿಸಬಹುದು. ಗಡಿ ವಿಚಾರವನ್ನು ಮಾತನಾಡಿದರು, ಆ ಮನೆಯಲ್ಲಿ ಇದರ ಬಗ್ಗೆ ಒಂದು ದೀರ್ಘ ಪ್ರಸ್ತಾವನೆ ನಡೆಯಿತು, ಆ ಸಮಯದಲ್ಲಿ ನಾನು ಸ್ಪಷ್ಟವಾಗಿ ಈ ರಾಜ್ಯದ ಜನತೆಗೆ ಅರ್ಥವಾಗುವಂತಹ ರೀತಿಯಲ್ಲಿ ನಮ್ಮ ಧೋರಣೆಯನ್ನು ಅಲ್ಲಿ ದೃಢಪಡಿಸಿದ್ದೇವೆ. ಈ ಸದನ ಮತ್ತು ಅ ಸದನ ಏನೂ ಒಟ್ಟಾರೆಯಾಗಿ ನಿರ್ಣಯವನ್ನು ಮಾಡಿದೆ, ಮಹಾಜನ್ ಕಮೀಷನ್, ವರದಿಯ ಪೂರ್ಣ ಅನುಷ್ಠಾನ ಅದು ನಮ್ಮ ಗುರಿ. ಅದರಿಂದ ನಾವು ವಿಚಲಿರಾಗುವುದಿಲ್ಲ, ಮಹಾರಾಷ್ಟ್ರದವರು ಕೋರ್ಟಿಗೆ ಹೋಗುತ್ತೇವೆ, ಎನ್ನತಕ್ಕಂತಹ ಒಂದು ಥ್ರೆಟ್ ಇದೆ ಅದಕ್ಕೆ ಸೂಕ್ತವಾದಂತಹ ಪೂರಕ ಕ್ರಮಗಳನ್ನು ಈಗಾಗಲೇ ನಾವು ತೆಗೆದುಕೊಂಡಿದ್ದೇವೆ. ನಮ್ಮ ಪರವಾಗಿಯೂ ಕೂಡ ಸಮರ್ಥವಾದಂತಹ ಲಾಯರ್‌ಗಳು ಈ ವಿಚಾರದಲ್ಲಿ ರಾಜ್ಯ ಸರ್ಕಾರದ ಮತ್ತು ಈ ಕರ್ನಾಟಕದ ಅಭಿಪ್ರಾಯಗಳನ್ನು ನಮೂದನೆ ಮಾಡಲಿಕೆ ಮತ್ತು ಸ್ಪಷ್ಟ ಪಡಿಸುವುದಕ್ಕೆ ನಾವು ಬೇಕಾದಂತಹ ಏರ್ಪಾಡುಗಳನ್ನು ಮಾಡಿದ್ದೇವೆಂದು ಹೇಳತಕ್ಕಂತಹ ಮಾತುಗಳನ್ನು ತಮಗೆ ಹೇಳುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣದಲ್ಲಿ ಪ್ರಾದೇಶಿಕ ಅಸಮಾನತೆ ಬಗ್ಗೆ ಮಾತುಗಳನ್ನು ಅಡಿದ್ದಾರೆ, ಪ್ರಾದೇಶಿಕ ಅಸಮಾನತೆ ಮೊಟ್ಟಮೊದಲಿಂದಲೂ ಬಹಳ ವರ್ಷಗಳಿಂದಲೂ ಇದೆ ಎಂದೂ ಈ ಮಾತುಗಳು ನಡೆಯುತ್ತಲೇ ಇತ್ತು. ಆದರೆ ಈ ಸರ್ಕಾರ ಬಂದ ಮೇಲೆ ಪ್ರಾದೇಶಿಕ ಅಸಮಾನತೆಯ ಎಕ್ಸ್‌ಟೆಂಟ್ ಏನು, ಅದರ ಆಳ ಏನು? ಅದರ ವೇರಿಯಸ್ ಡೈಮನ್‌ನ್ಸ್ ಏನು ಎನ್ನತಕ್ಕಂಥದ್ದನ್ನು ಡಾ।। ನಂಜುಡಪ್ಪನವರ ಸಮಿತಿಗೆ ಇದನ್ನು ಒಪ್ಪಿಸಿ ಈ ದಿವಸ ಒಂದು ಬೆಂಚ್ ಮಾರ್ಕ್ ಏನೆಂದು ಹೇಳಿದರೆ, ನಂಜುಂಡಪ್ಪ ಸಮಿತಿಯವರು ಕೊಟ್ಟಿರತಕ್ಕಂತಹ ವರದಿ ಈ ದಿವಸ ಪ್ರಾದೇಶಿಕ ಅಸಮಾನತೆಯ ಬಗ್ಗೆ ಏನು ಒಂದು ಡೈಲಾಗ್ ಪ್ರಾರಂಭವಾಗಿದೆ ಡಿಬೇಟ್ ನಡೆಯುತ್ತಿದೆ, ಆ ಡಿಬೇಟ್‌ಗೆ ಒಂದು ಸ್ಪಷ್ಟತೆಯನ್ನು ಒಂದು ಫೋಕಸ್‌ನ್ನು ಹಿಡಯಲಿಕ್ಕೆ ಸಾಧ್ಯವಾಯಿತು ಎನ್ನತಕ್ಕಂಥದ್ದು ನಮ್ಮ ಅಭಿಪ್ರಾಯವಾಗಿದೆ, ಇದೇ ಉದ್ದೇಶವಾಗಿದೆ. ಆದರೆ ಅಸಮಾನತೆಯನ್ನು ಒಂದು ವರ್ಷದಲ್ಲಿ ನಾವು ನಿವಾರಣೆ ಮಾಡುತ್ತೇನೆ ಎನ್ನತಕ್ಕಂತಹ ಮಾತು ಪ್ರಾಕ್ಟಿಕಲ್ ಆಗುವುದಿಲ್ಲ, ರಿಯಲೆಸ್ಟಿಕ್ ಆಗುವುದಿಲ್ಲ, ಏಕೆಂದು ಹೇಳಿದರೆ ಹತ್ತಾರು ವರ್ಷಗಳ ಕಾಲದಲ್ಲಿ ಬೆಳೆದು ಬಂದಿರತಕ್ಕಂತಹ ಅಸಮಾನತೆ, ಕೆಲವು ಅಸಮಾನತೆಗಳು ಚಾರಿತ್ರಿಕ ಕಾರಣಗಳಿಂದ, ಕೆಲವು ಅಸಮಾನತೆಗಳು ಭೌಗೋಳಿಕ ಕಾರಣಗಳಿಂದ, ಆದ್ದರಿಂದ ಈ ಭೌಗೋಳಿಕ ಮತ್ತು ಚಾರಿತ್ರಿಕ

ಕಾರಣಗಳೆಲ್ಲವನ್ನೂ ಕೂಡ ನಾವು ಒಂದರಿಂದ ಮೂರು ವರ್ಷಗಳಲ್ಲಿ ಎದುರಿಸುತ್ತೇವೆ ಎನ್ನತಕ್ಕಂತಹ ಮಾತು ಬಹಳ ಅನ್‌ರಿಯಲಿಸ್ಟಿಕ್ ಮಾತಾಗುತ್ತದೆ. ಆದುದರಿಂದ ಈ ಸರ್ಕಾರ ಮಾಡಿದಂತಹ ಒಂದು ಉತ್ತಮವಾದಂತಹ ಕೆಲಸ ಏನೆಂದು ನಾವು ಭಾವನೆ ಮಾಡುತ್ತೇವೆ, ಈ ಅಸಮಾನತೆಗೆ ಒಂದು ವಿಶೇಷವಾದಂತಹ ಫೋಕಸ್ ಸಿಕ್ಕಲಿಕ್ಕೆ ನಾವು ಏನು ನಂಜುಂಡಪ್ಪನವರ ಸಮಿತಿಯನ್ನು ನೇಮಕ ಮಾಡಿದೆವೋ, ಆ ನೇಮಕದಿಂದ ಆಗಿರತಕ್ಕಂತಹ ಉದ್ಭವವಾದಂತಹ ಒಂದು ರಿಪೋರ್ಟ್. ಹೇಗೆ ಕರ್ನಾಟಕದ ಯೂನಿಫಿಕೇಷನ್‌ಗೆ ಹೇಗೆ ಜಲ್‌ಆಲಿ ವರದಿಯ ಒಂದು ಫೋಕಸನ್ನು ದೊರಕಿಸಿಕೊಟ್ಟಿತೋ ಹಾಗೆಯೇ ಈ ಅಸಮಾನತೆಯ ಬಗ್ಗೆ ಡಾ॥ ನಂಜುಂಡಪ್ಪ ಸಮಿತಿಯವರು ಒಂದು ಫೋಕಸ್‌ನ್ನು ಒದಗಿಸಿಕೊಟ್ಟಿದ್ದಾರೆ. ನಾವು ನೀವು ಆ ಚೌಕಟ್ಟಿನಲ್ಲಿ ಈ ಅಸಮಾನತೆಯನ್ನು ಹಂತ ಹಂತವಾಗಿ ನಿವಾರಣೆ ಮಾಡುವುದರ ಮೂಲಕ ಯಾವ ಭಾಗದಲ್ಲಿ ಈ ಕೊರಗು ಇದೆ, ಆ ಕೊರಗನ್ನು ನಾವು ಅಡ್ರೆಸ್ ಮಾಡಬೇಕಾಗಿರತಕ್ಕಂಥದ್ದು, ಆ ಕೊರಗನ್ನು ನಾವು ಓವರ್‌ಕಮ್ ಮಾಡಬೇಕಾಗಿರತಕ್ಕಂಥದ್ದು ಬಹಳ ಅವಶ್ಯಕವೆಂದು ನಾನು ಭಾವನೆ ಮಾಡುತ್ತೇನೆ. ರಾಜ್ಯಪಾಲರ ಭಾಷಣ ಒಂದು ದಿಕ್ಸೂಚಿ ಮಾತ್ರ ಆಗಬಲ್ಲದು, ಸರ್ಕಾರದ ವಿವಿಧ ಕಾರ್ಯಕ್ರಮಗಳ ಒಂದು ಸಾಮಾನ್ಯ ನಿರೂಪಣೆಯೂ ಕೂಡ ಆಗಬಲ್ಲದು. ಆ ಒಂದು ದೃಷ್ಟಿಯಿಂದ ನೋಡಿದಾಗ ಅಂತಹ ಒಂದು ಪಕ್ಷಿನೋಟವನ್ನು ನಮ್ಮ ರಾಜ್ಯದ ಬೆಳವಣಿಗೆಯ ಬಗ್ಗೆ ಗೌರವಾನ್ವಿತ ರಾಜ್ಯಪಾಲರು ಕೊಟ್ಟಿದ್ದಾರೆನ್ನತಕ್ಕಂಥದ್ದು ಎದ್ದು ಕಾಣತಕ್ಕಂಥದ್ದು. ವಸತಿ ಕ್ಷೇತ್ರದಲ್ಲಿ ಬಹಳ ಮಟ್ಟಿಗೆ ಸುಧಾರಣೆಯಾಗಿದೆ,ಹೊಸ ಹೊಸ ಮನೆಗಳ ನಿರ್ಮಾಣವಾಗುತ್ತಿದೆ, 11 ಲಕ್ಷ ಮನೆಗಳನ್ನು ಕಟ್ಟಬೇಕೆಂದು ನಮ್ಮ ಅಂತಿಮ ಗುರಿಯಾಗಿತ್ತು. ಈ ತಿಂಗಳ ಕೊನೆಯಲ್ಲಿ 6 ಲಕ್ಷ ಮನೆಗಳನ್ನು ಕಟ್ಟಿ ಮುಗಿಸುತ್ತೇವೆಂದು ಭರವಸೆಯ ಮಾತನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರುಗಳು ಅವರ ಭಾಷಣದ ವೇಳೆಯಲ್ಲಿ ಈ ಒಂದು ಕಾರ್ಯದ ಬಗ್ಗೆ ತಮ್ಮ ಮೆಚ್ಚುಗೆಯ ಮಾತುಗಳನ್ನು ಆಡಿದ್ದಾರೆ. ಏಕೆಂದು ಹೇಳಿದರೆ ನಮಗೆ ಶ್ರೀಮತಿ ಇಂದಿರಾಗಾಂಧಿಯವರ ಸ್ಫೂರ್ತಿಯಿಂದ, ರಾಜೀವ್‌ಗಾಂಧಿಯವರ ನೇತೃತ್ವದಲ್ಲಿ ನಮಗೆ ಈ 20 ಅಂಶದ ಕಾರ್ಯಕ್ರಮದ ಒಂದು ಅತ್ಯಂತ ಗುರುತರವಾದ ಭಾಗ ಯಾವುದು ಎಂದು ಹೇಳಿದರೆ ಈ ವಸತಿ ಇಲ್ಲದೇ ಇರತಕ್ಕಂತಹ ಜನಗಳಿಗೆ ಮತ್ತು ನಿರ್ಗತಿಕರಿಗೆ ನಾವು ಸೈಟ್‌ಗಳನ್ನು ಕೊಡುವುದು, ಅವರಿಗೆ ವಸತಿಗಳನ್ನು ಕಲ್ಪಿಸಿ ಕೊಡುವುದು ಇದು ಒಂದು ಪವಿತ್ರವಾದ ಮಂತ್ರವೆಂದು ನಾವು ಭಾವನೆ ಮಾಡಿದ್ದೇವೆ, ಆ ಪವಿತ್ರವಾದ ಮಂತ್ರವನ್ನು ನಾವು ಒಂದು ಕಾರ್ಯಕ್ರಮವನ್ನಾಗಿ ಘೋಷಣೆ ಮಾಡಿ, ಅದನ್ನು ನಾವು ರಾಜೀವ್‌ಗಾಂಧಿ ಸೋಷಿಯಲ್ ಹೌಸಿಂಗ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಒಂದು ಕ್ಯಾಟ್‌ಲಿಸ್ಟ್ ಆಗಿ ಬಳಸಿಕೊಂಡು ಈ ಸಾಧನೆಯನ್ನು ಮಾಡಲಿಕ್ಕೆ ಸಾಧ್ಯವಾಗಿದೆ. ಇನ್ನು ರಸ್ತೆಗಳ ಸುಧಾರಣೆ, ಹಿಂದೆ ಯಾವ ಕಾಲದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ರಸ್ತೆಗಳ ಅಭಿವೃದ್ಧಿಯಾಗಿತ್ತು? ಮೊದಲನೇ ವರ್ಷ ಪ್ರತಿಯೊಂದು ಕ್ಷೇತ್ರದಲ್ಲಿಯೂ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ನಾವು ರಸ್ತೆಗಳ ಅಭಿವೃದ್ಧಿಗೆ ಕಲ್ಪಿಸಿಕೊಟ್ಟೆವು. ಆದಾದ ನಂತರ ರಾಜ್ಯ ಹೆದ್ದಾರಿಗಳನ್ನು ಪೂರ್ಣಪ್ರಮಾಣದ ಮೇಲ್ದರ್ಜೆಗೇರಿಸುವುದು, ದುರಸ್ಥಿ ಎಂದು ಹೀಗೆ ನಮ್ಮ ಗಮನವನ್ನು, ನಮ್ಮ ಫೋಕಸ್‌ನ್ನು ಗ್ರಾಮೀಣ ರಸ್ತೆಗಳು ಮತ್ತು ಡಿಸ್ಟ್ರಿಕ್ಟ್ ಎಂ.ಡಿ. ಆರ್ಸ್ ಇವುಗಳ ಮೇಲೆ ಮಾಡುತ್ತಿದ್ದೇವೆ. ಇದರ ಬಗ್ಗೆ ನಮ್ಮ ಗಮನ ಕೇಂದ್ರೀಕರಿಸುವುದು ಆಗುತ್ತಾ ಇದೆ. ಅಲ್ಲಲ್ಲಿ ಕೆಲವು ಲೋಪಗಳು ಇರಬಹುದು. ಆದರೆ ನಾನು ಗ್ರಹಿಸಿರುವ ಒಂದು

ಸತ್ಯ ಏನೆಂದರೆ ನಾನು ಹೋದ ಹೋದ ಕಡೆಗಳಲೆಲ್ಲಾ ಈ ರಸ್ತೆಗಳ ವಿಚಾರದಲ್ಲಿ ನಮಗೆ ಬಹಳ ಮಟ್ಟಿಗೆ ಮೆಚ್ಚುಗೆ ಕಂಡುಬಂದಿರತಕ್ಕಂಥಾದ್ದು. ಮೊನ್ನೆ ನಾನು ಬಜೆಟ್ ಪೂರ್ವ ಚರ್ಚೆಯಲ್ಲಿ ಈ ಟ್ರಾನ್ಸಪೋರ್ಟ್ ಆಪರೇಟರ್ಸ್ ಅವರ ಜೊತೆಯಲ್ಲಿ ಮಾತನಾಡಿದೆ. ಯಾವಾಗಲೂ ಅವರು ನಮ್ಮ ಮುಂದೆ ಇಡುತ್ತಿದ್ದಂಥ ಪ್ರಧಾನವಾದಂಥ ಕೊರತೆ ಮತ್ತು ಸಮಸ್ಯೆ ಏನೆಂದರೆ ಈ ರಸ್ತೆಗಳು ಕಂದಕಗಳು ಬಿದ್ದು, ಪಾಟ್ ಹೋಲ್ಸ್ ಆಗಿತ್ತು. ಕೊನೆಪಕ್ಷ ಮುಖ್ಯವಾದ ರಸ್ತೆಗಳನ್ನೂ ಕೂಡ ನಾವು ಸರಿಪಡಿಸುವುದಕ್ಕೆ ಸಾಧ್ಯವಾಗಿಲ್ಲ ಎನ್ನತಕ್ಕಂಥ ಕೊರತೆ ಇತ್ತು. ಈ ವರ್ಷ ಮೊಟ್ಟಮೊದಲ ಬಾರಿಗೆ ಅವರು ಸರ್ಕಾರಕ್ಕೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ರಸ್ತೆಗಳ ಸುಧಾರಣೆ ಆಗಿದ್ದರಿಂದ ಗಮನಾರ್ಹವಾದ ಸುಧಾರಣೆ ಆಗಿದೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಆ ಒಂದು ಕಾರಣಕ್ಕೆ ತಾವು ಮೆಚ್ಚುಗೆಯನ್ನು ವ್ಯಕ್ತಪಡಿಸಿದರೆ.....

ಶ್ರೀ ಸಿ. ಬೈರೇಗೌಡರು:- ಆ ವಿಚಾರವನ್ನು ನಾವೂ ಸಹ ಒಪ್ಪಿದ್ದೇವೆ. ಒಳ್ಳೆಯ ಕೆಲಸ ಮಾಡಿದರೆ 'ಒಳ್ಳೆಯ ಕೆಲಸ ಮಾಡಿದ್ದೀರಿ' ಎಂದು ಹೇಳುತ್ತೇವೆ. ಅದನ್ನು ನಾವು ಮೆಚ್ಚಿದ್ದೇವೆ, ಒಳ್ಳೆಯ ಕೆಲಸ ಆಗಿದೆ.

ಶ್ರೀ ಎಸ್.ಎಂ. ಕೃಷ್ಣ:- ಥ್ಯಾಂಕ್ಯು ವೆರಿಮಚ್. ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ನಾವು ಯಶಸ್ವಿ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈ ಬ್ಯಾಕ್‌ಲಾಗ್ ಹುದ್ದೆಗಳು ಬಹಳ ನೆನೆಗುದಿಗೆ ಬಿದ್ದಂಥ ವಿಚಾರ. ಅದನ್ನು ಒಂದು ವಿಶೇಷವಾದಂಥ ಕಾರ್ಯಪಡೆಯನ್ನು ಮಾಡಿ ಅದರ ಕಂಟಿನ್ಯೂಯಸ್ ಮಾನಿಟರಿಂಗ್ ಮಾಡಿದ್ದರಿಂದ ಇದುವರೆಗೆ ನಾವು 13,160 ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲಿಕ್ಕೆ ಅಧಿಸೂಚನೆಯನ್ನು ಈಗಾಗಲೇ ಹೊರಡಿಸಿದ್ದೇವೆ. ಇದರಲ್ಲಿ ಸ್ವಲ್ಪ ಅಂಕಿಅಂಶಗಳು ಹೆಚ್ಚು ಕಡಿಮೆ ಇರಬಹುದು. ಏಳು ಸಾವಿರ ಬ್ಯಾಕ್‌ಲಾಗ್ ಹುದ್ದೆಗಳಿಗೆ ಅಭ್ಯರ್ಥಿಗಳು ಏನಿದ್ದಾರೆ, ಅದರ ಅನುಕೂಲತೆಯನ್ನು ಪಡೆಯತಕ್ಕಂಥ, ಅಭ್ಯರ್ಥಿಗಳಲ್ಲಿ ಈಗಾಗಲೇ ನಾಲ್ಕು ಸಾವಿರ ಮಂದಿಗೆ ಕಾಗದಗಳು ಹೋಗಿವೆ. ಇನ್ನು ಉಳಿದವರಿಗೆ ಕಾಗದ ಹೋಗತಕ್ಕಂಥ ಪೈಪ್‌ಲೈನ್‌ನಲ್ಲಿದೆಯೆನ್ನತಕ್ಕಂಥಾದ್ದನ್ನು ಈ ಸದನದ ಗಮನಕ್ಕೆ ನಾನು ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎರಡು-ಮೂರು ವಿಚಾರಗಳು ವಿಶೇಷವಾಗಿ ಪ್ರಸ್ತಾಪ ಆಗಿದ್ದು ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಇದನ್ನು ಬಹಳ ಸಮರ್ಥವಾಗಿ ಮಂಡಿಸಿದರು. ಅದೇನೆಂದರೆ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ ಸಬ್ಸಿಡಿ ವಿತರಣೆಯಲ್ಲಿ ಮತ್ತು ಪಬ್ಲಿಕ್‌ವರ್ಕ್ಸ್ ಮತ್ತು ಇರಿಗೇಶನ್ ಡಿಪಾರ್ಟ್‌ಮೆಂಟ್‌ನ ಕಂಟ್ರಾಕ್ಟರ್‌ಗಳಿಗೆ ನಾವು ಹಿಂದಿನ ಹಣವನ್ನು ಬಿಡುಗಡೆ ಮಾಡುವುದರಲ್ಲಿ ಸಫಲರಾಗಿಲ್ಲ ಎನ್ನತಕ್ಕಂಥಾದ್ದು ಏನಿದೆ, ಅದನ್ನು ನಾನು ಒಪ್ಪುತ್ತೇನೆ. ಪಿ.ಡಬ್ಲ್ಯೂ.ಡಿ. ಬಿಲ್ಸ್, ಇರಿಗೇಶನ್ ಬಿಲ್ಸ್ ಮತ್ತು ಸ್ಮಾಲ್ ಇಂಡಸ್ಟ್ರೀಸ್‌ಗೆ ಕೊಡಬೇಕಾಗಿರತಕ್ಕಂಥ ಸಬ್ಸಿಡಿ ಇವುಗಳೆಲ್ಲವೂ ಕೂಡ ಒಂದು ಕಾಂಪ್ರಹೆನ್ಸಿವ್ ರೀತಿಯಲ್ಲಿ, ಮುಂದಿನ ವರ್ಷ ಇದರ ಬಗ್ಗೆ ನಾವು ಸಮಾಧಾನ ಮಾಡತಕ್ಕಂಥ ರೀತಿಯಲ್ಲಿ ಹಂತಹಂತವಾಗಿ ನಾವು ಈ ಪೆಂಡಿಂಗ್ ಬಿಲ್‌ಗಳ ಬ್ಯಾಕ್‌ಲಾಗ್ ಏನಿದೆ, ಅದನ್ನು ಕೂಡ ಹೇಗೆ ಈ ಬ್ಯಾಕ್‌ಲಾಗ್ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ದಲಿತವರ್ಗದವರಿಗೆ ಕೊಡತಕ್ಕಂಥಾದ್ದರಲ್ಲಿ ಮಾಡಿದ್ದೇವೆ, ಹಾಗೆಯೆ ಈ ಮೂರು ಕ್ಷೇತ್ರಗಳಲ್ಲೂ ಕೂಡ, ಪಿ.ಡಬ್ಲ್ಯೂ.ಡಿ, ಇರಿಗೇಶನ್ ಮತ್ತು ಸ್ಮಾಲ್ ಇಂಡಸ್ಟ್ರೀಸ್‌ಗೆ ನಾವು 2003-04 ಅವಧಿಯಲ್ಲಿ ಇದನ್ನು ಕರಗಿಸಲಿಕ್ಕೆ ಪ್ರಯತ್ನಗಳನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಮಯದಲ್ಲಿ ನಾನು ಹೇಳುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರು ಹಲವಾರು ಲೋಪದೋಷಗಳ ಬಗ್ಗೆ ನನ್ನ ಗಮನವನ್ನು ಮತ್ತು ಸದನದ ಗಮನವನ್ನು ಸೆಳೆದಿದ್ದಾರೆ. ಒಂದು ಏನು ಅವರು 'ಈಗಲ್‌ಟನ್' ಅನ್ನತಕ್ಕಂಥ ಗಾಲ್ಫ್ ಕೋರ್ಟ್ ಬಗ್ಗೆ ನನ್ನ ಗಮನವನ್ನು ಸೆಳದಿದ್ದಾರೆ, ಇದರ ಬಗ್ಗೆ ನಾವು ಅವರಿಗೆ ನೋಟೀಸ್ ಕೊಟ್ಟಿದ್ದೆವು. ಇದನ್ನು ಅವತ್ತೆ ಮಾನ್ಯ ಕಂದಾಯ ಸಚಿವರು ಸದನದ ಗಮನಕ್ಕೆ ತಂದರು. ನಾವು ನೋಟೀಸ್ ಕೊಟ್ಟೆವು. ನಂತರ ಅವರು ಹೈಕೋರ್ಟಿಗೆ ಹೋದರು. ಅದು ಒಬ್ಬ ನ್ಯಾಯಮೂರ್ತಿಯ ಮುಂದೆ ಬಂತು, ಇಬ್ಬರು ನ್ಯಾಯಮೂರ್ತಿಗಳ ಮುಂದೆ ಬಂತು. ಅಲ್ಲಿ ಆ ಕೇಸು ನಮ್ಮ ಪರವಾಗಿ ಆಯಿತು. ಈಗ ಸುಪ್ರೀಂ ಕೋರ್ಟಿಗೆ ಅವರು ಸ್ವಾಭಾವಿಕವಾಗಿ ಹೋಗಿದ್ದಾರೆ. ಸುಪ್ರೀಂ ಕೋರ್ಟಿನವರು ತಡೆಯಾಜ್ಞೆಯನ್ನು ವಿಧಿಸಿದ್ದಾರೆ. ಈ ಕಾರಣ ನಾವು ಇದರ ಬಗ್ಗೆ ಮುಂದುವರೆಸಲಿಕ್ಕೆ ಸಾಧ್ಯವಾಗಿಲ್ಲ. ಆದರೆ ರಾಜ್ಯ ಸರ್ಕಾರದ ಸ್ಪಷ್ಟ ನಿಲುವು ಏನೆಂದರೆ, ನೆಲಗಳ್ಳರು ಅವರು ಬಿಡದಿಯಲ್ಲಿರಲಿ, ಬೆಂಗಳೂರಿನಲ್ಲೇ ಇರಲಿ ಅಥವಾ ಉತ್ತರಹಳ್ಳಿಯಲ್ಲಿ ಇರಲಿ, ಅವರ ವಿರುದ್ಧ ಸೆಣಸಾಡಬೇಕು, ಅವರ ವಿರುದ್ಧ ನಾವು ಮುಂದುವರೆಯಬೇಕು ಎನ್ನುವಂಥಾದ್ದು. ಆ ಕಾರಣ ನಾವು ಈ ವ್ಯವಹಾರಗಳನ್ನು ಮುಂದೆ ತೆಗೆದುಕೊಂಡು ಹೋಗುತ್ತೇವೆ. ಕೆಲವು ಗ್ರಾಮ ಪಂಚಾಯತಿ ಮತ್ತು ಮುನಿಸಿಪಲ್ ಚುನಾವಣೆಗಳ ಸಮಯದಲ್ಲಿ ಇದು ವೈಪರಿತ್ಯಗಳು ನಡೆಯಿತು ಎಂದು ಹೇಳಿ ತಾವು ಶ್ರೀರಂಗಪಟ್ಟಣ ಮತ್ತು ಮುಷ್ಠಗೇರಿ ಈ ಎರಡರಲ್ಲಿ ನಮ್ಮ ಗಮನ ಸೆಳೆದಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಸಾರ್ವಜನಿಕ ಜೀವನದಲ್ಲಿ ಪಳಗಿದವರು ಆಗಿದ್ದಾರೆ, ಮುನಿಸಿಪಲ್ ವ್ಯವಹಾರದಲ್ಲಿ ಅವರು ಪಳಗಿದ್ದಾರೆ, ಪಂಚಾಯತ್ ವ್ಯವಹಾರದಲ್ಲಿ ಪಳಗಿದವರೂ ಆಗಿದ್ದಾರೆ. ಇದು ನಿನ್ನೆ ಮೊನ್ನೆಯ ವಿಚಾರ ಅಲ್ಲ. ಒಳಗೆ ಕೂಡಿ ಹಾಕಿ ಬಿಟ್ಟು ಓಟುಗಳನ್ನು ತೆಗೆದುಕೊಳ್ಳುವುದು ಅಥವಾ ಹೊರಗೆ ಅವರನ್ನೆಲ್ಲಾ ಹೊತ್ತುಕೊಂಡು ಹೋಗುವುದು ಇಂತಹ ಅನಾರೋಗ್ಯಕರವಾದಂಥ ಬೆಳವಣಿಗೆಗಳು ಅಲ್ಲಲ್ಲಿ ನಡೆದಿದ್ದು, ನಾನು ನಲ್ವತ್ತು ವರ್ಷಗಳ ಕೆಳಗೆ ಈ ಮಾತನ್ನು ಕೇಳಿದ್ದೆ. ಮುನಿಸಿಪಲ್ ಕೌನ್ಸಿಲರ್‌ಗಳನ್ನು ಹೊಡಕೊಂಡು ಹೋದರು ಎಂದು 'ಈ ಹೊಡಕೊಂಡು ಹೋದರು' ಎನ್ನತಕ್ಕಂಥ ಮಾತು ಏನಿದೆ, ಅದು ನಲ್ವತ್ತು ವರ್ಷಗಳ ಕೆಳಗೆ ಪ್ರಸ್ತುತ ಆಗಿದ್ದರೆ ಇವತ್ತೂ ಕೂಡ ಅದು ಪ್ರಸ್ತುತ ಆಗಿದೆ. ಕೆಲವು ವಿಧಾನ ಮಂಡಲಗಳಲ್ಲಿ ನಡೆಯತಕ್ಕಂಥ ವ್ಯವಸ್ಥೆಯನ್ನು ತಾವು ಅವಲೋಕಿಸಿದ್ದೀರಿ ಎಂದು ನಾನು ಭಾವನೆ ಮಾಡುತ್ತೇನೆ. ಆದ್ದರಿಂದ ಅವರು ಏನು ವೈಪರಿತ್ಯಗಳನ್ನು ನಮ್ಮ ಗಮನಕ್ಕೆ ತಂದಿದ್ದೀರಿ ಅದರ ಬಗ್ಗೆ ನಾವು ಗಮನ ಹರಿಸಿ ಇಂತಹ ವೈಪರಿತ್ಯಗಳು ಮತ್ತೆ ಮರುಕಳಿಸದೇ ಇರಲಿ ಎನ್ನತಕ್ಕಂಥ ಎಚ್ಚರಿಕೆ ದೃಷ್ಟಿಯಿಂದ ನಮ್ಮ ಗಮನ ಸೆಳೆದಿದ್ದೀರಿ ಎಂದು ನಾನು ಭಾವಿಸುತ್ತೇನೆ. ಮಾನ್ಯ ಸಿಂಧ್ಯ ರವರ ಭಾಷಣ ಮಾಡತಕ್ಕಂಥ ಕಾಲದಲ್ಲಿ ಸಿ.ಎಂ.ಸಿ. ಗಳ ಅವ್ಯವಹಾರ, ಬಿ.ಡಿ.ಎ. ಗಳ ಡಿನೋಟಿಫಿಕೇಶನ್ ಇವುಗಳ ಬಗ್ಗೆ ನನ್ನ ಮತ್ತು ಈ ಸದನದ ಗಮನವನ್ನು ಸೆಳೆದಿದ್ದಾರೆ. ಬಿ.ಡಿ.ಎ. ಡಿನೋಟಿಫಿಕೇಶನ್ ಬಗ್ಗೆ ಮೊನ್ನೆ ತಾನೆ ವಿಧಾನ ಪರಿಷತ್ತಿನಲ್ಲಿ ನಾನು ಪ್ರಶ್ನೆಯೊಂದಕ್ಕೆ ಉತ್ತರ ಕೊಟ್ಟೆ. 900 ಎಕರೆಯಲ್ಲಿ 460 ಎಕರೆ ಬಿಡಿಎ ಏನು ಬಿಟ್ಟಿದ್ದರೆ ಅದನ್ನು ಕೆ.ಐ.ಎ.ಡಿ.ಬಿ. ಅವರು ಅದನ್ನು ಅಕ್ವೈರ್ ಮಾಡಿಕೊಳ್ಳುತ್ತಿದ್ದಾರೆ. ಅದೂ ಕೂಡ ಡಿನೋಟಿಫಿಕೇಶನ್ ನಾವು ಬಿಡಿಎ ಯಿಂದ ಮಾಡಬೇಕಾಗಿ ಬಂದಿತು. 460 ಎಕರೆ ಡಿನೋಟಿಫಿಕೇಶನ್ ಬಿಡಿಎ ಮಾಡಬೇಕಾದಂಥ ಪರಿಸ್ಥಿತಿ ಏಕೆ ಬಂತು ಎಂದರೆ ಮತ್ತೊಂದು ಸಮಾನಾಂತರವಾದಂಥ ಗವರ್ನಮೆಂಟ್ ಏಜೆನ್ಸಿ ಇದರ ಬಗ್ಗೆ ಅಕ್ವಿಜಿಶನ್‌ಗೆ ಹೊರಟಿತ್ತು.

There was a clash. ಆದ್ದರಿಂದ ವಿಧಿ ಇಲ್ಲದೆ ಆ ಕೆ.ಐ.ಎ.ಡಿ.ಬಿ. ನೋ ಮತ್ತೊಂದು ಸಂಸ್ಥೆನೋ ಈ 460 ಎಕರೆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಿಕ್ಕೆ ಅನುವು ಮಾಡತಕ್ಕಂಥ ದೃಷ್ಟಿಯಿಂದ ಈ ಡಿನೋಟಿಫಿಕೇಶನ್‌ನ್ನು ನಾವು ಮಾಡಿದ್ದೇವೆ. ಅದರ ವಿವರಗಳನ್ನು ನಾನು ಮಾನ್ಯ ಸಿಂಧ್ಯಾ ಅವರಿಗೆ ಕಳುಹಿಸಿಕೊಡುತ್ತೇನೆ. ಇನ್ನು ಉಳಿದ 400 ಎಕರೆ ಯಾವುದು ಏನು ಎನ್ನತಕ್ಕಂಥಾದ್ದು ಪೂರ್ತಿ ವಿವರಗಳನ್ನು ನಾನು ತಮಗೆ ಕೊಡುತ್ತೇನೆ. ಇದರಲ್ಲಿ ಒಂದು ಟ್ರಾನ್ಸ್‌ಫರೆನ್ಸಿ ಇದೆ. ಕೆಲವು ವಿವಿಧ ಸಂಘ ಸಂಸ್ಥೆಗಳಿಗೆ ಮಾಡಿಕೊಟ್ಟಿರತಕ್ಕಂಥಾದ್ದು.

ಇದರಲ್ಲಿ ಲೋಪಗಳು ಇವೆ ಎನ್ನತಕ್ಕಂಥ ಗುಮಾನಿ ತಮಗೆ ಯಾರಿಗಾದರೂ ಇದ್ದರೆ ಆ ಗುಮಾನಿ ನಾನು ಪರಿಹರಿಸಲಿಕ್ಕೆ ಸಿದ್ಧನಿದ್ದೇನೆ. ಇನ್ನು ಸಿ.ಎಂ.ಸಿ. ಅವ್ಯವಹಾರದ ಬಗ್ಗೆ ಬಹಳ ದೊಡ್ಡ ಚರ್ಚೆ ನಡೆಯಿತು. ಆ ದೊಡ್ಡ ಚರ್ಚೆ ನಡೆದ ಫಲಶ್ರುತಿ ಏನೆಂದರೆ ಹಲವಾರು ಅಧಿಕಾರಿಗಳನ್ನು ನಾವು ಸಸ್ಪೆಂಡ್ ಮಾಡಿದೆವು. ಗೌರವಾನ್ವಿತ ಲೋಕಾಯುಕ್ತರವರಿಗೆ ನಾವು ಇದನ್ನು ವಹಿಸಿಕೊಟ್ಟೆವು. ಒಂದು ಕಡೆ ಅಕೌಂಟೆಂಟ್ ಜನರಲ್‌ರವರು ವಿಚಾರಣೆ ಮಾಡುತ್ತಿದ್ದರು, ಇನ್ನೊಂದು ಕಡೆ ಮಾನ್ಯ ಲೋಕಾಯುಕ್ತರವರು ಫೈಲ್ಸ್ ಏನು ತೆಗೆದುಕೊಂಡು ಹೋಗಿದ್ದರು, ನಾನು ಈಗಾಗಲೇ ಮಾನ್ಯ ಲೋಕಾಯುಕ್ತರವರಿಗೆ ವಿನಂತಿಸಿಕೊಂಡಿದ್ದೇವೆ, ರಾಜ್ಯ ಸರ್ಕಾರದವರು ಈ ಸಿ.ಎಂ.ಸಿ. ಅವ್ಯವಹಾರಗಳು ಯಾವ ಪ್ರಮಾಣದಲ್ಲಿವೆ ಎನ್ನತಕ್ಕಂಥದ್ದರ ವರದಿಯನ್ನು ನಮಗೆ ಕಳುಹಿಸಿ ಕೊಟ್ಟರೆ ನಾವು ಆ ಸಂಬಂಧಪಟ್ಟಂತಹ ಅಧಿಕಾರಿಗಳ ಮೇಲೆ ತಾವು ಯಾವ ಚಾರ್ಜಸ್ಸ್, ಸಿವಿಲ್ ಚಾರ್ಜಸ್ಸ್ ಕ್ರಿಮಿನಲ್ ಚಾರ್ಜಸ್ ಏನು ಬೇಕೋ ಅದನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಕೂಡ ಅವರಿಗೆ ತಿಳಿಸಿದ್ದೇವೆ. ಆ ಕಾರಣ ರಾಜ್ಯ ಸರ್ಕಾರ ಯಾವುದಾದರೂ ಅಧಿಕಾರಿ ತಪ್ಪು ಮಾಡಿದರೆ ಅಥವಾ ಯಾವುದಾದರೂ ಸಂಸ್ಥೆ ತಪ್ಪು ಮಾಡಿದ್ದರೆ ನಾವು ಆ ತಪ್ಪುಗಳನ್ನು ಸರಿಪಡಿಸಲಿಕ್ಕೆ ಪ್ರಯತ್ನಗಳನ್ನು ಮಾಡುತ್ತೇವೆ ಎನ್ನತಕ್ಕಂಥಾದ್ದನ್ನು ನಾನು ಈ ಸಮಯದಲ್ಲಿ ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ. ನಕಲಿ ಛಾಪಾ ಕಾಗದದ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದರು. ಈಗಾಗಲೇ ಸುಮಾರು 8 ಕೋಟಿ ರೂಪಾಯಿಗಳ ನಕಲಿ ಛಾಪಾ ಕಾಗದವನ್ನು ವಶಪಡಿಸಿಕೊಳ್ಳಲಾಗಿದೆ. ನಕಲಿ ಛಾಪಾ ಕಾಗದದ ಮಾರಾಟದ ಬಗ್ಗೆ ತನಿಖೆ ನಡೆಸಲು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ನೇತೃತ್ವದಲ್ಲಿ ರಚಿಸಿದ ವಿಶೇಷ ತಂಡ ಯಶಸ್ವಿಯಾಗಿದೆ. 19 ಜನರ ಮೇಲೆ ಪ್ರಕರಣಗಳು ದಾಖಲಾಗಿವೆ. ಆ ಪ್ರಕರಣಗಳನ್ನು ಸ್ಪೆಷಲ್ ಕೋರ್ಟ್ ವಿಚಾರಣೆಯನ್ನು ಕೈಗೆತ್ತಿಕೊಳ್ಳುತ್ತಿದೆ. ಆದ್ದರಿಂದ ನಾವು ಈ ನಕಲಿ ಛಾಪಾ ಕಾಗದ ಇರಲಿ ಮತ್ತೊಂದು ಇರಲಿ ರಾಜ್ಯದ ಸಂಪನ್ಮೂಲಗಳಿಗೆ ಯಾವುದೇ ಅಹಿತಕರವಾದಂಥ ಪ್ರಸ್ತಾವನೆಗಳು ನಡೆಯದೇ ಇರಲಿ ಅಂತ ನಾವು ಇದನ್ನು ಮುಂದುವರಿಸುತ್ತಿದ್ದೇವೆ. ಕಾಯಕ ಕೆರೆ ಯೋಜನೆ ಏನಾಯಿತು ಅಂತ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದರು...

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ತಾವು ಏನು ಮಾಡಿದಿರಿ ಅಂದರೆ ಎಲ್ಲಾ ಸ್ಟ್ಯಾಂಪ್ಸ್ ಬ್ಯಾನ್ ಮಾಡಿದಿರಿ. ಇದರಿಂದ 20 ಸಾವಿರ ಸ್ಟ್ಯಾಂಪ್ ವೆಂಡರ್ಸ್ ಬೀದಿಗೆ ಬಿದಿದ್ದಾರೆ. ಅವರಿಗೆ ಪರ್ಯಾಯ ವ್ಯವಸ್ಥೆ ಏನಾದರೂ ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ:- ಈಗ ಒಂದು ಸುಧಾರಣೆ ಮಾಡಬೇಕಾದರೆ ಅದು ಹಲವಾರು ಜನಗಳ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ. ಇಲ್ಲದೇ ಇದ್ದರೆ ಈ ಛಾಪಾ ಕಾಗದದ ಒಂದು ಅನಿಷ್ಟವನ್ನು ಹೇಗೆ ನಾವು ಕೊನೆಗಾಣಿಸುವುದಕ್ಕೆ ಸಾಧ್ಯ ಎನ್ನುವಂಥಾದ್ದು ಬಹಳ

ಪ್ರಾಮುಖ್ಯವಾದ ಪ್ರಶ್ನೆ. ಯಾವುದಾದರೊಂದು ಕ್ರಮವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಈ ಮೆನೇಸ್ ಏನು ಇದೆ ಇದನ್ನು ನಾವು ಸರಿಪಡಿಸಲು ನಾವು ವಿವಿಧ ಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಇನ್ನೂ ಕ್ರಮಗಳು ತೆಗೆದುಕೊಳ್ಳಬೇಕಾದುದು ಉಳಿದಿದೆ.

ಶ್ರೀ ಬಿ. ಸೋಮಶೇಖರ್:- ಮಾನ್ಯ ಅಧ್ಯಕ್ಷರೆ, ಈ ಛಾಪಾ ಕಾಗದವನ್ನು ಸಂಪೂರ್ಣವಾಗಿ ನಿಷೇಧ ಮಾಡಿಲ್ಲ. ಆ ನಿಷೇಧ ಮಾಡತಕ್ಕಂಥ ಅಧಿಕಾರ ನಮ್ಮ ಸರ್ಕಾರಕ್ಕೆ ಇಲ್ಲ. ನಿಷೇಧ ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದ ಸ್ಟ್ಯಾಂಪ್ ಆಕ್ಟ್ ಅಂತ ಏನು ಇದೆ, ಅದು ಕೇಂದ್ರ ಸರ್ಕಾರಕ್ಕೆ ಸೇರಿದ್ದು, ಈಗ ನೋಟ್ ಪ್ರಿಂಟ್ ಮಾಡತಕ್ಕಂಥದ್ದು ಇರಬಹುದು ಮತ್ತು ಛಾಪಾ ಕಾಗದ ಪ್ರಿಂಟ್ ಮಾಡತಕ್ಕಂಥಾದ್ದು ಇರಬಹುದು ಅದನ್ನು ನಾಸಿಕ್ ಪ್ರಿಂಟಿಂಗ್ ಪ್ರೆಸ್‌ನಿಂದ ಮಾಡುತ್ತಾರೆ. ಅದರೆ ನಾವೇನು ತಿದ್ದುಪಡಿ ತಂದಿದ್ದೇವೆ ಅಂದರೆ we have made it optional. The practice panties can through the register their properties through the stamp papers or white paper, which-ever is easy to them. Government is concerned about the stamp duty. We are getting stamp duty. ಅಷ್ಟೇ. ಉದಾಹರಣೆಗೆ ಕೆಲವರು ಹಳೆ ಸ್ಟ್ಯಾಂಪ್ ಪೇಪರ್ಸ್ ಮಾರುತ್ತಿದದರು. ಕೆಲವರು ಫೇಕ್ ಸ್ಟ್ಯಾಂಪ್ ಪೇಪರ್ ಮಾರಾಟ ಮಾಡುತ್ತಿದ್ದರು. ಅದಕ್ಕೆ ಕೆಲವು ಬ್ಯಾಂಕ್‌ನವರು ಬಿ.ಡಿ.ಎ. ನವರು ಏಕೆ ಅಂತಹ ಫೇಕ್ ಸ್ಟ್ಯಾಂಪ್ ಪೇಪರ್ ಕೊಂಡುಕೊಳ್ಳಬೇಕೆಂದು ಹೇಳಿ ಫ್ರ್ಯಾಂಕಿಂಗ್ ಮೆಷಿನ್ ಮಾಡಿ ಕೊಟ್ಟಿದ್ದೀರಿ. ಸರ್ಕಾರಕ್ಕೆ ಎಷ್ಟು ಸ್ಟ್ಯಾಂಪ್ ಡ್ಯೂಟಿ ಬರಬೇಕೋ ಅದು ಬರುತ್ತಿದೆ. ಆದ್ದರಿಂದ ತಾವು ಏನು ಈಗ ಮಾಡಿದ್ದೀರಿ ಅದು ತಪ್ಪಲ್ಲ, ಅದರಿಂದ ಏನಾದರೂ ಸ್ವಲ್ಪ ಆದಾಯ, ಸ್ಟ್ಯಾಂಪ್ ವೆಂಡರ್ಸ್‌ಗೆ ಕಡಿಮೆಯಾಗಿದ್ದರೆ ಅದು ಸರ್ಕಾರದ ಕರ್ತವ್ಯ ಅಲ್ಲ. ಈಗ ಎಷ್ಟೋ ಜನ ಕಂಟ್ರಾಕ್ಟರ್ಸ್‌ಗೆ ಕೆಲಸ ಸಿಗದೇ ಇರಬಹುದು, ಅದಕ್ಕೆ ಸರ್ಕಾರ ಜವಾಬ್ದಾರಿಯಾಗುತ್ತದೆಯೇ? ಸಾರ್ವಜನಿಕರಲ್ಲಿ ಏನು ಗೊಂದಲ ಇತ್ತು ಅದನ್ನು ನಿವಾರಣೆ ಮಾಡುವುದಕ್ಕೆ ಅತ್ಯಂತ ಉತ್ತಮವಾದ ಸುಧಾರಣೆ ನಮ್ಮ ಸರ್ಕಾರ ನಾವು ತಂದಿರತಕ್ಕಂಥಾದ್ದು, ನೀವಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಸೋಮಶೇಖರ್‌ರವರು ಯಾವಾಗಲೂ ನಾವು ಮಾಡಿದ್ದು ನಾವು ಮಾಡಿದ್ದು ಅಂತ ಹೇಳುತ್ತಲೇ ಇರುತ್ತಾರೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಒಂದು ಹೇಳಿಕೆ ಹೇಳಿದರು, ಈಗ ಹಾಲಿ ಸ್ಟ್ಯಾಂಪ್ ಪೇಪರ್ಸ್ ಏನು ಇದೆ ಇದನ್ನು ನಾವು ಸಂಪೂರ್ಣ ನಾಶ ಮಾಡುತ್ತೇವೆ, ಸುಟ್ಟು ಹಾಕುತ್ತೇವೆ, ಅದರ ಜೊತೆಗೆ ಸ್ಟ್ಯಾಂಪ್ ಪೇಪರ್ಸ್ ಬಳಸುವುದೇ ಇಲ್ಲ ಅಂತ ಹೇಳಿದರು. ಇದರ ಮಧ್ಯೆ ನಾನು ಮಾನ್ಯ ಸಚಿವರ ಜೊತೆ ಮಾತನಾಡಿದೆ ನೀವು ಆ ರೀತಿ ಹೇಳುವುದಕ್ಕೆ ಬರುವುದಿಲ್ಲ ಸ್ಟ್ಯಾಂಪ್ ಪೇಪರ್ಸ್ ಅಪ್‌ಷನ್ ಅಥವಾ ನಾವು ಹೊರ ರಾಜ್ಯದಿಂದ ತಂದು ಇಲ್ಲಿ ರಿಜಿಸ್ಟರ್ ಮಾಡಿಸಿಕೊಳ್ಳುತ್ತೇವೆ ಟೋಟಲಿ ಬ್ಯಾನ್ ಮಾಡುವುದಕ್ಕೆ ಬರುವುದಿಲ್ಲ. ಅದು ಅವನ ಅಪ್‌ಷನ್. ಯಾರು ಕ್ರಯ ಮಾಡಿಸಿಕೊಳ್ಳುತ್ತಾನೋ ಅವನು

ಅದನ್ನು ಉಪಯೋಗಿಸಿಕೊಳ್ಳುತ್ತಾನೆ. ಅದು ಗೊಂದಲ ಆಗಿದ್ದು. ಅದನ್ನು ಸರ್ಕಾರ ಕ್ಲಾರಿಫೈ ಮಾಡಬೇಕು. ಏಕೆಂದರೆ ಸ್ಟ್ಯಾಂಪ್ ವೆಂಡರ್ಸ್ ದೊಡ್ಡ ಪ್ರೊಟೆಸ್ಟ್ ರ್‍ಯಾಲಿ ಮಾಡಿದರು. ಹೌದು ನಿಮ್ಮ ಕೆಲಸ ಎಲ್ಲಾ ನೀವು ಕಿತ್ತುಕೊಳ್ಳುತ್ತಿದ್ದೀರಿ, ಸ್ಟ್ಯಾಂಪ್ ಪೇಪರ್ಸ್ ಕೊಡದೇ ರದ್ದುಪಡಿಸುತ್ತಿದ್ದೀರಿ, ಇರುವ ಸ್ಟ್ಯಾಂಪ್ ಪೇಪರ್ಸ್ ಸುಟ್ಟು ಹಾಕಿದರೆ ಅವರಿಗೆ ಕೋಟ್ಯಾಂತರ ರೂಪಾಯಿ ಪರಿಹಾರ ಕೊಡಬೇಕು, ಸರ್ಕಾರ ಅದಕ್ಕೆ ಸಿದ್ಧವಿದೆಯೇ ಎಂದು ಕೇಳಿದರು. ಈ ಗೊಂದಲ ನಿವಾರಣೆಯಾಗಬೇಕು, ತಮ್ಮ ಸ್ಟ್ಯಾಂಡ್ ಏನು ಅಂತ ಸರ್ಕಾರ, ಇದನ್ನು ಕ್ಲಾರಿಫೈ ಮಾಡಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಈಗ ಸ್ಟ್ಯಾಂಪ್ ಪೇಪರ್ಸ್ ಏನು ಉಳಿದಿವೆ ಅವುಗಳನ್ನು ನಾಶ ಮಾಡಬೇಕೆನ್ನುವ ತೀರ್ಮಾನ ಮಾಡಿದ್ದೇವೆಂದು ಹೇಳಿದೆ. ಅದು ಇದ್ದರೆ ತಾನೇ ನಮಗೆ ಈ ಗೊಂದಲ. ಫೇಕ್ ಬಂತು, ಅದು ಬಂತು ಇದು ಬಂತು ಅಂತ ಹೇಳಿ ಈಗ ಅವರು ಹೇಳಿದ ಹಾಗೆ ನಾವು ಖಾಲಿ ಪೇಪರ್ ಮೇಲೆ ಟ್ರೆಜರಿಯಲ್ಲಿ ಚಲನ್ ಕಟ್ಟಿ ಫೀಜು ಕಟ್ಟಿ ರಿಜಿಸ್ಟರ್ ಮಾಡಿಸಿದರೆ ಏನು ತೊಂದರೆ ಬರುತ್ತದೆ? ಈಗ 1100 ಕೋಟಿ ರೂಪಾಯಿಗಳ ಸ್ಟ್ಯಾಂಪ್ ಪೇಪರ್‌ನ್ನು ನಾವು ಸುಟ್ಟು ಹಾಕಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಬಿ.ಎಸ್. ಬಚ್ಚೇಗೌಡ:- ಸ್ಟ್ಯಾಂಪ್ ವೆಂಡರ್ಸ್‌ಗೆ ಪರ್ಯಾಯ ವ್ಯವಸ್ಥೆ ಏನು ಮಾಡುತ್ತೀರಿ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಫೇಕ್ ಮಾಡಲು ಹೋಗಲಿ ಆಮೇಲೆ ನೋಡೋಣ.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಅಧ್ಯಕ್ಷರೇ ಬಜೆಟ್ ಮಂಡನೆಯ ಮುನ್ನ ದಿನ ಈ ಚರ್ಚೆಗೆ ನಾನು ಉತ್ತರವನ್ನು ಕೊಡಬೇಕಾದಂತಹ ಅಥವಾ ಈ ಚರ್ಚೆಯನ್ನು ಮಾಡುವ ಸಂದರ್ಭದಲ್ಲಿ ಪ್ರವೇಶ ಮಾಡಿ ಸರ್ಕಾರದ ಕೆಲವು ವಿಚಾರಗಳನ್ನು ಸದನದ ಗಮನಕ್ಕೆ ತರುವುದಕ್ಕೆ ಪ್ರಯತ್ನಪಟ್ಟಿದ್ದೇನೆ. ಯಶಸ್ವಿಯಾಗಿದ್ದೇನೆಯೋ ಏನೋ ತಿಳಿಯದು. ಉಳಿದ ಅನುಮಾನಗಳಿಗೆ, ಉಳಿದ ವಿಚಾರಗಳಿಗೆ, ಉಳಿದ ಸಮಸ್ಯೆಗಳಿಗೆ ನಾಳೆ ಮುಂಗಡ ಪತ್ರ ಬಂದ ನಂತರ ನಡೆಯಬಹುದಾದಂತಹ ಸಂಭಾವನೀಯ ಚರ್ಚೆಯನ್ನು ನಾನು ಎದುರು ನೋಡುತ್ತಿದ್ದೇನೆ. ಮಾನ್ಯ ಸದಸ್ಯರುಗಳು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ, ಚರ್ಚೆಯಲ್ಲಿ ಭಾಗವಹಿಸಿ ಹಲವಾರು ರಚನಾತ್ಮಕವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ಟೀಕೆಯನ್ನು ಮಾಡಿದ್ದಾರೆ. ಆ ಟೀಕೆಗಳನ್ನು ಗಮನದಲ್ಲಿಟ್ಟುಕೊಂಡು ರಚನಾತ್ಮಕವಾದ ಸಲಹೆಗಳು ಏನು ಆಗಿಂದಾಗ್ಗೆ ಬಂದಿದೆ ಆ ಎಲ್ಲಾ ಸಲಹೆಗಳನ್ನು ಕೂಡ ಕಾರ್ಯ ರೂಪಕ್ಕೆ ತರಲಿಕ್ಕೆ, ಈಗ ನಾವು ಕಾರ್ಯರೂಪಕ್ಕೆ ತಂದೇ ಹೋಗಿದ್ದರೆ ಅದನ್ನು ಕಾರ್ಯರೂಪಕ್ಕೆ ತರಲಿಕ್ಕೆ ನಮ್ಮ ಪ್ರಯತ್ನಗಳು ಮುಂದುವರಿಯುತ್ತವೆ ಅಂತ ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರವನ್ನು ಕೊಟ್ಟರು ಕೆಲವೊಂದು ಅಂಶಗಳು ಬಿಟ್ಟು ಹೋಗಿವೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಒಂದು ಬಡ್ಡಿ ಮನ್ನಾ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ನಾಳೆ ಬಜೆಟ್‌ನಲ್ಲಿ

ಇನ್ನೊಂದಿಷ್ಟು ಬಡ್ಡಿ ಮನ್ನಾ ಬಗ್ಗೆ ಘೋಷಣೆ ಮಾಡಲಿ ಅಂಥ. ಏನಾಗಿದೆ ಅಂದರೆ ಇವತ್ತು ನೀವು ಘೋಷಣೆ ಮಾಡಿದ್ದು 7 ತಿಂಗಳಿದ್ದು ಮಾತ್ರ. 127 ಕೋಟಿ ರೂ. 7 ತಿಂಗಳ ಅವಧಿಗೆ ಮಾತ್ರ ಮಾಡಿದ್ದೀರಿ. ಆದರೆ 2002 ಜನವರಿ ತಿಂಗಳಿನಿಂದ ನೀವು ಮಾಡಿದ್ದರೆ ಇನ್ನೂ ಬಹಳಷ್ಟು ಜನರಿಗೆ ಅದರ ಲಾಭ ಆಗುತ್ತಿತ್ತು. ಇವತ್ತು ಏನಾಗಿದೆ ಅಂದರೆ ಹಿಂಗಾರು ಬೆಳೆ ಮೇಲೆ ಏನು ಸಾಲ ತೆಗೆದುಕೊಂಡಿದ್ದಾರೆ ಅವರಿಗೆ ಬಡ್ಡಿ ಮನ್ನಾ ಆಗಿದೆ. ಆದರೆ ಮುಂಗಾರು ಸಾಲ ಏನು ತೆಗೆದುಕೊಂಡಿದ್ದಾರೆ ಅವರಿಗೆ ಇದರ ಲಾಭ ಆಗಲಿಲ್ಲ. ಹೀಗಾಗಿ 2002ನೇ ಇಸವಿ ಜನವರಿ ತಿಂಗಳಿನಿಂದ ಡಿಸೆಂಬರ್‌ವರೆಗೆ ಬಡ್ಡಿ ಮನ್ನಾ ಘೋಷಣೆ ಮಾಡಿದರೆ ಬಹಳಷ್ಟು ಜನರಿಗೆ ಅನುಕೂಲವಾಗುತ್ತಿತ್ತು.

12.40 ಪಿ.ಎಂ.

ದಯವಿಟ್ಟು ಜನವರಿ 2002ನೇ ಇಸವಿಯಿಂದ ಬಡ್ಡಿ ಮನ್ನಾ ಮಾಡುವುದಕ್ಕೆ ತಾವು ಘೋಷಣೆ ಮಾಡಬೇಕೆಂದು ನನ್ನದೊಂದು ವಿನಂತಿ ಇದೆ. ಇದು ಡಿಸೆಂಬರ್‌ವರೆಗೆ ವಿಸ್ತರಣೆಯಾಗಬೇಕು. ಆಮೇಲೆ, ಬೆಳೆ ವಿಮೆಯದೂ ಪರಿಸ್ಥಿತಿ ಹಾಗೆಯೇ ಇದೆ. ಮುಂಗಾರು ಬೆಳೆ ಮೇಲೆ, ಬೆಳೆ ವಿಮೆಯ ಹಣ ಇನ್ನೂವರೆಗೆ ಬಿಡುಗಡೆಯಾಗಲಿಲ್ಲ. ಎಲ್ಲೆಲ್ಲಿ ಲೆಕ್ಕಾಚಾರ ಮಾಡಿದ್ದಾರೆ, ರಿಪೋರ್ಟ್ ಕೊಟ್ಟಿದ್ದಾರೆ, ಆ ಮುಂಗಾರು ಬೆಳೆ ವಿಮೆ ಮೇಲೆ ಇವತ್ತಿನವರೆಗೂ ಹಣ ಬಿಡುಗಡೆಯಾಗಲಿಲ್ಲ. ಈಗಾಗಲೇ ಅಲ್ಲಲ್ಲಿ ಹೋರಾಟ ಆಗುತ್ತಾ ಇದೆ. ದಯವಿಟ್ಟು ತಕ್ಷಣ ಈ ಬೆಳೆ ವಿಮೆ ಹಣ ಬಿಡುಗಡೆಯಾಗಬೇಕೆಂದು ಒತ್ತಾಯವನ್ನು ಮಾಡುತ್ತಿದ್ದೇನೆ. ಅದರ ಜೊತೆಗೆ ಕಬ್ಬು ಬೆಳೆಗಾರರು 355 ಕೋಟಿ ರೂಪಾಯಿಗಳು ಬಾಕಿ ಇದೆ. ಸಕ್ಕರೆ ಕಾರ್ಖಾನೆಗಳಿಂದ ಇವತ್ತು ನಮ್ಮ ರೈತರಿಗೆ ಬರಬೇಕಾದಂಥಾದ್ದು, ಅದು ಹಿಂದಿನ ವರ್ಷ ಇರಬಹುದು ಅಥವಾ ಹಳೇ ಬಾಕಿ ಇರಬಹುದು. ಒಟ್ಟು 355 ಕೋಟಿ ರೂ. ಬಾಕಿ ಇದೆ. ತಕ್ಷಣ ಈ ಬಾಕಿ ಚುಕ್ತಾ ಮಾಡುವ ರೀತಿಯಲ್ಲಿ ಕಾರ್ಖಾನೆಗಳವರ ಮೇಲೆ ಸರ್ಕಾರ ಒತ್ತಡ ತರಬೇಕು. ಮತ್ತು ಕಾನೂನು ಕ್ರಮ ಕೈಗೊಳ್ಳುವಂಥ ಕೆಲಸ ಸರ್ಕಾರದ ಕಡೆಯಿಂದ ಆಗಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಬೆಳಗಾಂ ಮತ್ತು ಮಂಡ್ಯ ಈ ಕಡೆಗಳಲ್ಲೆಲ್ಲಾ ನೀರಿನ ಕೊರತೆಯಿಂದ, ಬರಗಾಲದಿಂದ ಕಬ್ಬು ಫ್ಯಾಕ್ಟರಿಗಳಿಗೆ ನೀರಿಲ್ಲದೆ ಅವು ಹೊಸದಾಗಿ ಅರೆಸುವುದಕ್ಕೆ ಆಗುತ್ತಾ ಇಲ್ಲ. ಹೀಗಾಗಿ, ಅದರ ಬಗ್ಗೆ ಒಂದು ವ್ಯವಸ್ಥೆ ಮಾಡುವಂಥಾದ್ದು, ಮತ್ತು ಮುಖ್ಯಮಂತ್ರಿಗಳು ಆಗಲೇ ಏನು ಹೇಳಿದಿರಿ, ಇವತ್ತೇನು ಸ್ಥಳೀಯ ಸಂಸ್ಥೆಗಳಲ್ಲಿ ಮುಷ್ಠಿಗೇರಿ ಮತ್ತು ಶ್ರೀರಂಗಪಟ್ಟಣದ ಬಗ್ಗೆ ಹೇಳಿದಿರಿ. ಶ್ರೀರಂಗಪಟ್ಟಣದ ಬಗ್ಗೆ ಹೊಸದಾಗಿ ಚುನಾವಣೆಯ ತಾರೀಖು ನಿಗದಿ ಮಾಡಬಹುದಾಗಿತ್ತು. ಆಮೇಲೆ, ಬಿಜಾಪುರ ಡಿ.ಸಿ.ಸಿ. ಬ್ಯಾಂಕ್ ಬಗ್ಗೆ ಈಗಾಗಲೇ ಸದನದಲ್ಲಿ ಚರ್ಚೆಯಾಗಿದೆ. ಮಾನ್ಯ ಸಹಕಾರ ಸಚಿವರಾದ ವಿಶ್ವನಾಥ್‌ರವರು ಒಂದು ಭರವಸೆ ಕೊಟ್ಟಿದ್ದಾರೆ. ಅದರಲ್ಲಿ ಅನ್ಯಾಯವಾಗಿದೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಹೀಗಾಗಿ, ಹೊಸದಾಗಿ ಚುನಾವಣೆ ದಿನಾಂಕವನ್ನು ತಾವು ಘೋಷಣೆ ಮಾಡಬೇಕು. ಈ ರೀತಿ ನೀವು ಚುನಾವಣಾ ದಿನಾಂಕವನ್ನು ಘೋಷಣೆ ಮಾಡಿದರೆ, ಅದಕ್ಕೊಂದು ಅರ್ಥ ಪೂರ್ಣತೆ ಇರುತ್ತದೆ ಮತ್ತು ಪ್ರಜಾತಂತ್ರ ವ್ಯವಸ್ಥೆಗೆ ತಮಗೆ ಗೌರವ ಇದೆಯೆಂಬುದನ್ನು ಇದರ ಮುಖಾಂತರ ಸಾಧನೆ ಮಾಡಲಿಕ್ಕೆ ಸಾಕು. ಮತ್ತೆ ಇನ್ನೊಂದು ಕೆ-ರೈಡ್ ಸಂಸ್ಥೆ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಬಿಜಾಪುರ ಮತ್ತು ಗದಗ್ ರೈಲ್ವೆ ಮಾರ್ಗ ಏನಿದೆ, ಅದೊಂದು ದ್ವೀಪ ಆದ ಹಾಗೆ ಆಗಿದೆ. ಹೀಗಾಗಿ, ನೀವು ಕೆ-ರೈಡ್‌ನ್ನು

ಕೇಂದ್ರ ಸರ್ಕಾರದ ಜೊತೆಯಲ್ಲಿ ಅಗ್ರಿಮೆಂಟ್ ಮಾಡಿಕೊಂಡಿರಿ. ಅದರ ಬಗ್ಗೆ ನಾನು ಸಾಕಷ್ಟು ಪ್ರಸ್ತಾಪ ಮಾಡಿದ್ದೆ. ರಾಜ್ಯ ಸರ್ಕಾರದ ಕಾಂಟ್ರಿಬ್ಯೂಷನ್ ಏನು ಅಥವಾ ಕೆ-ರೈಡ್ ಸಂಸ್ಥೆ ಅಸ್ತಿತ್ವದಲ್ಲಿಯೋ ಏನೋ ಎನ್ನುವಂಥಾದ್ದು ಸ್ಪಷ್ಟನೆ ಆಗಲಿಲ್ಲ. ಆ ನಾಲ್ಕು ಮಾರ್ಗಗಳನ್ನು ತೆಗೆದುಕೊಂಡಿದ್ದೀರಿ. ಆ ನಾಲ್ಕು ಮಾರ್ಗಗಳಲ್ಲಿ ಇವತ್ತು ಬಿಜಾಪುರ ಮತ್ತು ಗದಗ್ ಮಾರ್ಗ ಇದೆಯೋ ಇಲ್ಲವೋ? ಇದಕ್ಕೆ ರಾಜ್ಯ ಸರ್ಕಾರದ ಕಾಂಟ್ರಿಬ್ಯೂಷನ್ ಏನು? ಇದರ ಬಗ್ಗೆ ತಮ್ಮ ಕಡೆಯಿಂದ ಸ್ಪಷ್ಟನೆ ಆಗಲಿಲ್ಲ. ಅದರ ಜೊತೆಗೆ ಆನ್ ಲೈನ್ ಲಾಟರಿ ಬಗ್ಗೆ ಸರ್ಕಾರದ ಸ್ಪಷ್ಟತೆ ಹೊರಗೆ ಬರಲಿ. ಇದನ್ನು ಸಂಪೂರ್ಣವಾಗಿ ನಿಷೇದ ಮಾಡಬೇಕೆಂದು ನಾವು ಹೇಳುತ್ತಿದ್ದೇವೆ. ಈ ಆನ್ ಲೈನ್ ಲಾಟರಿ ಆಡಿ, ಅನೇಕ ಜನ ಹುಚ್ಚರ ಆಸ್ಪತ್ರೆ ಸೇರುತ್ತಿದ್ದಾರೆ. ಆದ್ದರಿಂದ, ಇದು ಸಂಪೂರ್ಣವಾಗಿ ನಿಷೇದವಾಗಬೇಕು. ರೈತರು ಆತ್ಮಹತ್ಯೆ ಮಾಡಿಕೊಂಡ ಕುಟುಂಬದವರಿಗೆ ಪರಿಹಾರ ಕೊಡುವಂಥಾದ್ದು. ಈ ಬಗ್ಗೆ ಮಾನ್ಯ ಸಿಂಧ್ಯರವರು ಇಲ್ಲಿ ರೆಫರ್ ಮಾಡಿದರು. ಆದರೆ ಮಾನ್ಯ ಮುಖ್ಯಮಂತ್ರಿಗಳು ಚಕಾರ ಶಬ್ದ ಹೇಳಲಿಲ್ಲ. ಅದರ ಬಗ್ಗೆ ನಿಮ್ಮ ಸ್ಟ್ಯಾಂಡ್ ಏನು? ಇನ್ನೊಂದು ಜನಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಿಂದೆ ಜನತಾ ದಳ ಸರ್ಕಾರ ಇದ್ದಾಗ 18-20 ರೈತ ಕುಟುಂಬದವರಿಗೆ ಪರಿಹಾರ ಧನ ಕೊಡಲಾಗಿತ್ತು. ಆದರೆ, ಇವತ್ತು ಸರ್ಕಾರ, ಅವರಿಗೆ ಪರಿಹಾರ ಧನ ಕೊಡಲಿಕ್ಕೆ ಹಿಂದೇಟು ಹಾಕುತ್ತಿದೆ. ಆದ್ದರಿಂದ, ದಯವಿಟ್ಟು ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬದವರಿಗೆ ಪರಿಹಾರ ಧನ ಕೊಡಬೇಕು. ಮಾನ್ಯ ಶಾಸಕರಾದ ರಾಮದಾಸ್‌ರವರು ವಿದ್ಯುತ್ತಿನ ವಿಷಯದ ಬಗ್ಗೆ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಕೆಲವೊಂದು ಪ್ರಮುಖ ಅಗ್ರಿಮೆಂಟ್ ಇರಬಹುದು, ಕೆಲವು ಹಿತಾಸಕ್ತ ವ್ಯಕ್ತಿಗಳು ಇರಬಹುದು, ಇದಕ್ಕೂ ಸರ್ಕಾರದ ಕಡೆಯಿಂದ ಸ್ಪಷ್ಟವಾದ ಉತ್ತರ ಬರಲಿಲ್ಲ ಎನ್ನುವಂಥಾದ್ದು.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ವಿರೋಧ ಪಕ್ಷದ ನಾಯಕರು ಮೂರು ವಿಚಾರಗಳ ಬಗ್ಗೆ ನನ್ನ ಗಮನವನ್ನು ಸೆಳೆದಿದ್ದಾರೆ. ನಾವು ಬಡ್ಡಿ ಮನ್ನಾ ಮಾಡಿದ್ದು 2002ನೇ ಇಸವಿ ಖಾರೀಫ್ ಬೆಳೆಗಳ ಬಗ್ಗೆ. ರೈತಾಪಿ ಜನಗಳು ಸಹಕಾರಿ ಸಂಘಗಳಲ್ಲಿ ಏನು ಅಲ್ಪಕಾಲಾವಧಿ ಸಾಲವನ್ನು ಪಡೆದಿದ್ದರು, ಅದಕ್ಕೆ ಸೀಮಿತವಾದಂಥ ಬೆಳೆಯನ್ನು ಗಮನದಲ್ಲಿಟ್ಟುಕೊಂಡು ಮಾಡಿದ್ದೇವೆ. ಆ ರಿಯಾಯಿತಿ ಸರ್ಕಾರಿ ಆದೇಶ 2002ನೇ ಇಸವಿಯ ಖಾರೀಫ್ ಬೆಳೆಗೆ, ಬೆಳೆ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ. ನಬಾರ್ಡ್‌ನವರು ಮತ್ತು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು ಏನು ಗೈಡ್‌ಲೈನ್ಸ್‌ನ್ನು ರಾಜ್ಯ ಸರ್ಕಾರಗಳಿಗೆ ಕೊಟ್ಟಿದ್ದಾರೆ, ಆ ಗೈಡ್‌ಲೈನ್ಸ್‌ನ ಅನುಗುಣವಾಗಿ ಈ ಒಂದು ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಷುಗರ್ ಕೇನ್ ಅರಿಯರ್ಸ್ ವಿಚಾರ ತಾವೂ ಮಾತನಾಡಿದ್ದೀರಿ, ಮಾನ್ಯ ಸಿಂಧ್ಯರವರೂ ಮಾತನಾಡಿದ್ದಾರೆ. ಷುಗರ್ ಕೇನ್ ಕ್ರಷಿಂಗ್, ಪ್ರತಿಯೊಂದು ಫ್ಯಾಕ್ಟರಿಗಳಿಗೂ ಕೂಡ ಇಂತಿಷ್ಟೇ ದಿನಗಳು ಕ್ರಷ್ ಮಾಡಬೇಕೆನ್ನತಕ್ಕಂಥ ಕ್ಯಾಲೆಂಡರ್ ಇದೆ. ಹೋದ ವರ್ಷ, ನನಗೆ ಜ್ಞಾಪಕವಿದೆ. ನಮ್ಮಲ್ಲಿ ವಿಶೇಷವಾಗಿ ಕಬ್ಬು ಉತ್ಪಾದನೆಯಾಗಿ, ನಮಗೆ ಕ್ರಷಿಂಗ್ ಕೆಪಾಸಿಟಿ ಕಡಿಮೆಯಾದ ಕಾಲದಲ್ಲಿ, ನಾನು ಮಹಾರಾಷ್ಟ್ರದ ಅಂದಿನ ಮುಖ್ಯಮಂತ್ರಿಗಳಿಗೆ ಪ್ರಾರ್ಥನೆ ಮಾಡಿ, ನಿಮ್ಮ ಭಾಗದಲ್ಲಿ ಕಬ್ಬನ್ನು ಅರೆಯುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿದ್ದೆನು. ಅವರು ನನ್ನ ಮಾತಿಗೆ ಓಗೊಟ್ಟು, ಒಪ್ಪಿ

ಅನುಕೂಲ ಮಾಡಿದರು. ಹಾಗೆಯೇ, ಕೇಂದ್ರದ ಸಚಿವರಾದ ಶರದ್ ಯಾದವ್‌ರವರಿಗೆ ಈಗಾಗಲೇ ಕಾಗದ ಬರೆದಿದ್ದೇನೆ. ಈ ಕೇನ್ ಅರಿಯರ್ಸ್ ಎನ್ನತಕ್ಕಂಥಾದ್ದು ಕೆಲವು ಕಾರ್ಖಾನೆಗಳಲ್ಲಿ ಇದೆ. ಇವತ್ತು ಕೆಲವು ಸಹಕಾರಿ ಮಹಾಮಂಡಳಿಗಳು ನಡೆಸತಕ್ಕಂಥ ಸಕ್ಕರೆ ಕಾರ್ಖಾನೆಗಳು ಇವೆ, ಕೆಲವು ಖಾಸಗಿಯಾಗಿ ನಡೆಯತಕ್ಕ ಸಕ್ಕರೆ ಕಾರ್ಖಾನೆಗಳು ಇವೆ. ಕೆಲವು ಖಾಸಗಿ ಸಕ್ಕರೆ ಕಾರ್ಖಾನೆಗಳು ಬಹಳ ಚೆನ್ನಾಗಿ ಕೆಲಸ ಮಾಡಿವೆ, ಇನ್ನು ಕೆಲವು ಒಂದಲ್ಲ ಒಂದು ಕಾರಣಕ್ಕೋಸ್ಕರ ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿವೆ. ಮಾನ್ಯ ಸಕ್ಕರೆ ಸಚಿವರು ಇದರ ಬಗ್ಗೆ ಸಂಬಂಧಪಟ್ಟವರನ್ನು ಕರೆದು, ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ರೈತಾಪಿ ಜನಗಳಿಗೆ, ಕಬ್ಬು ಬೆಳೆಗಾರರಿಗೆ, ಅವರು ಮಾಡಿರತಕ್ಕ ಸರಬರಾಜಿಗೆ ಅನುಗುಣವಾಗಿ ಪೇಮೆಂಟನ್ನು ಮಾಡಲೇಬೇಕಾದಂಥ ಕಡ್ಡಾಯವಾದ ನಿಯಮವನ್ನು ಮಾಡಬೇಕೆಂದು ಹೇಳಿ ನಾನು ಪ್ರಾರ್ಥನೆ ಮಾಡಿಕೊಂಡಿದ್ದೇನೆ. ಇನ್ನು ರೈಲ್ವೆ ಬಗ್ಗೆ ಕೆ-ರೈಡ್ ಸಂಸ್ಥೆಯ ಬಗ್ಗೆ ತಾವೇನು ನೆನೆಸಿದಿರಿ. ರೈಲ್ವೆ ಪ್ರಾಜೆಕ್ಟ್ ಬಿಜಾಪುರ-ಬಾಗಲಕೋಟೆ-ಗದಗ್ ಬ್ರಾಡ್‌ಗೇಜ್ ಕನ್‌ವರ್ಷನ್ ಬಗ್ಗೆ ಇತ್ತೀಚಿಗೆ ಒಂದು ಮೀಟಿಂಗ್ ನಡೆಯಿತು. ರೈಲ್ವೆಯವರು ನಮಗೆ ಭರವಸೆ ಕೊಟ್ಟಿದ್ದಾರೆ. ಬಿಜಾಪುರ-ಬಾಗಲಕೋಟೆ ಬ್ರಾಡ್‌ಗೇಜ್ ಪರಿವರ್ತನೆಯನ್ನು ಡಿಸೆಂಬರ್ 2004ರ ಒಳಗೆ ನಾವು ಕಂಪ್ಲೀಟ್ ಮಾಡುತ್ತೇವೆಂದು ಹೇಳಿದ್ದಾರೆ. ಬಾಗಲಕೋಟೆ-ಗದಗ್ ಗೇಜ್ ಪರಿವರ್ತನೆಯ ಕೆಲಸವನ್ನು 2004-05ನೇ ಇಸವಿಯಲ್ಲಿ ಮುಗಿಸುತ್ತೇವೆಂದು ಹೇಳಿದ್ದಾರೆ. ಆದರೆ, ಮಲಪ್ರಭಾಕ್ಕೆ ಮಧ್ಯೆ ಒಂದು ಸೇತುವೆ ಕೂಡ ಕಟ್ಟಬೇಕಾಗುತ್ತದೆ. ಆ ಸೇತುವೆಯೊಂದೇ ಸುಮಾರು ಎರಡು ವರ್ಷಗಳ ಕಾಲ ಹಿಡಿಯುತ್ತದೆ. ಕೆ-ರೈಡ್ ಯೋಜನೆ, ಕೇಂದ್ರ ಸರ್ಕಾರದ ಜವಾಬ್ದಾರಿಗಳೇನಿತ್ತು, ಆ ಜವಾಬ್ದಾರಿಗಳನ್ನು ನಿರ್ವಹಿಸಲಿಕ್ಕೆ ರಾಜ್ಯ ಸರ್ಕಾರ ಮಾಡುತ್ತಾ ಇರತಕ್ಕಂಥ ಒಂದು ವಿಶೇಷವಾದಂಥ ಅರ್ಥ ವ್ಯವಸ್ಥೆಯೆಂದು ಇರುವುದನ್ನು ಬಹಳ ಜನ ಮರೆತು ಬಿಟ್ಟಿದ್ದಾರೆ. ಬಿಜಾಪುರ ಬಾಗಲಕೋಟೆಯದು ಆಗಲಿಲ್ಲವೆಂದು ಹೇಳಿದರೆ, ಸತ್ಯಾಗ್ರಹ ಮಾಡುತ್ತೇವೆಂದು ಹೇಳುತ್ತಾರೆ. ಅವರು ಯಾರ ಮೇಲೆ ಸತ್ಯಾಗ್ರಹ ಮಾಡುತ್ತಾರೆ? ಆ ಸತ್ಯಾಗ್ರಹ directed towards the Government of India ನಾವೇನಿದ್ದರೂ ನಮ್ಮ ಪಾಲಿನ ಹಣವನ್ನು ಕೊಡಲಿಕ್ಕೆ ತಯಾರಾಗಿದ್ದೇವೆ. ನಾವೇನು ಕಮಿಟ್‌ಮೆಂಟ್ಸ್‌ನ್ನು ಗವರ್ನಮೆಂಟ್ ಆಫ್ ಇಂಡಿಯಾದವರಿಗೆ ಮಾಡಿದ್ದೇವೆ, ಇದನ್ನು ಮಾನ್ಯ ಸದಸ್ಯರು ಆಲಿಸಬೇಕು. ಗವರ್ನಮೆಂಟ್ ಆಫ್ ಇಂಡಿಯಾದವರಿಗೆ ರೈಲ್ವೆ ಚೌಕಟ್ಟಿನಲ್ಲಿ ಏನೇನು ಭರವಸೆಗಳನ್ನು ನಾವು ಕೊಟ್ಟಿದ್ದೇವೆ, ಆ ಭರವಸೆಗಳನ್ನು ರಾಜ್ಯ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಗೌರವಿಸುತ್ತದೆ. ಉಳಿದದ್ದು ರೈಲ್ವೆ ಸಚಿವ ಇಲಾಖೆಗೆ ಸೇರಿರತಕ್ಕಂಥ ವಿಚಾರ. ರೈಲ್ವೆ ಲೈನನ್ನು ನಾವು ಕಟ್ಟಲಿಕ್ಕೆ ಬರುವುದಿಲ್ಲ. ಏಕೆಂದರೆ, ರೈಲ್ವೆ ಲೈನಿನ ಮೇಲಿನ ಸಾಮ್ಯತ್ವ....

ಶ್ರೀ ಜಗದೀಶ್ ಶೆಟ್ಟರ್:- ಇಲ್ಲಿಯವರೆಗೆ ನಿಮ್ಮ ಕಡೆಯಿಂದ ಏನೂ ಕಾಂಟ್ರಿಬ್ಯೂಷನ್ ಆಗಲಿಲ್ಲ.

Sri S.M. Krishna:- Up-front payment ಮಾಡಬೇಕೋ ಅಥವಾ as and when they start the work ನಾವು ಕೊಡಬೇಕೋ, this is something between the Railway Ministry and the State Government. ಆದರೆ, ನಾನು ವಿರೋಧ ಪಕ್ಷದ ನಾಯಕರಿಗೆ ಅಷ್ಯೂರ್ ಮಾಡುವುದೇನೆಂದರೆ. ನಮ್ಮ ಕಮಿಟ್‌ಮೆಂಟ್ಸ್ ಏನಿದೆ, ಆ

ಕಮಿಟ್‌ಮೆಂಟ್ಸ್‌ನ್ನು ನಾವು ಹಾನರ್ ಮಾಡುತ್ತೇವೆ. ರೈಲ್ವೆಯವರ ಕಮಿಟ್‌ಮೆಂಟ್ಸ್ ಏನಿದೆಯೋ ಅವರು ಆ ಕೆಲಸ ಕಾರ್ಯಗಳನ್ನು ಮುಂದುವರಿಸಬೇಕು ಎನ್ನತಕ್ಕಂಥಾದ್ದನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತೇನೆ. ಬಿಜಾಪುರ ಡಿ.ಸಿ.ಸಿ. ಬ್ಯಾಂಕಿನ ವಿಚಾರ ಹೇಳಿದರು. ಅದರ ಬಗ್ಗೆ ಸಂಬಂಧಿಸಿದ ವಿವರಗಳನ್ನು ಅವರು ಕೊಡುತ್ತಾರೆ. ಆದರೆ, ಒಂದು ವಿಚಾರವನ್ನು ನಾನು ಸ್ಪಷ್ಟ ಮಾಡಬೇಕು.

ಶ್ರೀ ವಿಜಯಕುಮಾರ ಶೆಟ್ಟಿ:- ಮಂಗಳೂರು-ಹಾಸನ ರೈಲ್ವೆ ಬಗ್ಗೆಯೂ ಸ್ವಲ್ಪ ಹೇಳಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:- ವಿರೋಧ ಪಕ್ಷದ ನಾಯಕರಿಗೆ ನಾನು ಏನು ಹೇಳಿದೆ, ಅದು ಮಂಗಳೂರು-ಹಾಸನಕ್ಕೂ ಕೂಡ ಅನ್ವಯಿಸುತ್ತದೆ. ಏನು ನಮ್ಮ ಕಮಿಟ್‌ಮೆಂಟ್ಸ್ ಇದೆ, ಅದನ್ನು ನಾವು ಉಳಿಸಿಕೊಳ್ಳುತ್ತೇವೆ. ರೈಲ್ವೆಯವರು ಉಳಿದುದ್ದನ್ನು ಮುಂದುವರಿಸಬೇಕು ಎನ್ನುವಂಥಾದ್ದು. ಇದರ ಬಗ್ಗೆ ಎರಡು ಅಭಿಪ್ರಾಯಗಳು ಬರಲಿಕ್ಕೆ ಸಾಧ್ಯ ಆಗುವುದಿಲ್ಲ. ಬಿಜಾಪುರ ಡಿ.ಸಿ.ಸಿ. ಬ್ಯಾಂಕನ್ನು ಒಡೆಯಬಾರದು ಎನ್ನತಕ್ಕಂಥ ಹಲವಾರು ಪ್ರಯತ್ನಗಳು ನಡೆಯಿತು. ನನ್ನ ಅಪ್ರೋಚ್ ಏನಾಗಿತ್ತು ಎಂದು ಹೇಳಿದರೆ ಒಂದೊಂದು ಜಿಲ್ಲೆಯನ್ನು ನಾವು ಹೊಸದಾಗಿ ಸೃಷ್ಟಿ ಮಾಡಿದಾಗ, ಆ ಜಿಲ್ಲೆಗೊಂದು ಡಿ.ಸಿ.ಸಿ. ಬ್ಯಾಂಕ್ ಇರಬೇಕೆಂದು ಇರತಕ್ಕಂಥ ಸಾಮಾನ್ಯ ತತ್ವವನ್ನು ನಾವು ಒಪ್ಪಿಕೊಂಡ ಮೇಲೆ ಬಿಜಾಪುರಕ್ಕೆ ಸ್ಪೆಷಲ್ dispensation ಕೊಡಲಿಕ್ಕೆ ಅಥವಾ ಬಾಗಲಕೋಟೆಯನ್ನು ಹೊಸ ಜಿಲ್ಲೆಯಾದ ಕಾರಣಕ್ಕೋಸ್ಕರ, ಅವರಿಗೆ ಶಿಕ್ಷೆ ಮಾಡಲಿಕ್ಕೆ ಸರಿಯಾದಂಥ ಅಪ್ರೋಚ್ ಅಲ್ಲ. ಆದ್ದರಿಂದಲೇ ಒಂದು ಸಮನ್ವಯ ದೃಷ್ಟಿ ಬರಬೇಕೆನ್ನುವ ಕಾರಣ, ನಾವು ಬಾಗಲಕೋಟೆಯಲ್ಲಿ ಒಂದು ಹೊಸ ಡಿ.ಸಿ.ಸಿ. ಬ್ಯಾಂಕ್‌ನ್ನು ಸೃಷ್ಟಿ ಮಾಡಬೇಕಾದಂಥ ಪರಿಸ್ಥಿತಿಯು ಬಂತು.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ಅದೇ ತರಹದಲ್ಲಿ ಬೇರೆ ಜಿಲ್ಲೆಗಳಲ್ಲಿಯೂ ಮಾಡಿದರೆ ಒಳ್ಳೆಯದು.

ಶ್ರೀ ಎಸ್.ಎಂ. ಕೃಷ್ಣ:- ಅದು ಈಗ ಆಗಿ ಹೋಗಿದೆ, ಕೆಲವರು ಕೋರ್ಟ್‌ಗೆ ಹೋದರು. ಕೋರ್ಟ್‌ನಲ್ಲಿಯೂ ಏನೂ ಆಗಲಿಲ್ಲ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ಬೇರೆ ಜಿಲ್ಲೆಗಳಲ್ಲೂ ಅದರಲ್ಲೂ ಹೊಸ ಜಿಲ್ಲೆಗಳಲ್ಲಿ ಡಿ.ಸಿ.ಸಿ. ಬ್ಯಾಂಕ್ ಮಾಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್:- ಧಾರವಾಡ ಜಿಲ್ಲೆಯಲ್ಲಿ ಡಿಸಿಸಿ ಬ್ಯಾಂಕ್ ಬೈಫರ್ ಕೇಟ್ ಆಗಲಿಲ್ಲ.

Sri Patil Shivananda Sidramegowda:- DCC Bank bifurcation, it is a purely prerogative of the general body of that jurisdiction. ಅದಕ್ಕೆ ಒಂದು ಸುಂದರ ವರ್ಧನ್ ಕಮಿಟಿ ಎಂದು ಹಿಂದಿನ ಸರಕಾರದವರು ಅಪಾಯಿಂಟ್ ಮಾಡಿದರು. ಆ ಕಮಿಟಿ ರಿಪೋರ್ಟ್‌ನ ಮೇಲೆ ಬ್ಯಾಂಕ್‌ಗಳನ್ನು ಬೈಫರ್‌ಕೇಟ್ ಮಾಡತಕ್ಕಂಥ ಇಶ್ಯೂಗಳು ಪ್ರಾರಂಭವಾದುವು. But in National scenario ದಲ್ಲಿ ನ್ಯಾಶನಲ್ ಬ್ಯಾಂಕ್‌ಗಳು ಅಮಾಲ್ಗಮೇಟ್ ಆಗುತ್ತವೆ. Because of Kapoor Committee report, V.K. Patil Committee report ಏನು ಹೇಳುತ್ತವೆ, ಬ್ಯಾಂಕ್ ಬೈಫರ್‌ಕೇಶನ್ ಮಾಡುವುದರಿಂದ

ವೀಕ್ ಆಗುತ್ತವೆ, ಅಮಾಲ್ಗಮೇಟ್ ಮಾಡುವುದು ಒಳ್ಳೆಯದು ಎಂದು ಹೇಳಿ. ಅದಕ್ಕೇ ಉಡುಪಿ ಜಿಲ್ಲೆಯವರು ಬೈಫರ್‌ಕೇಶನ್ ಮಾಡಲಿಲ್ಲ. ರಾಯಚೂರು ಡಿ.ಸಿ.ಸಿ. ಬ್ಯಾಂಕ್‌ನ್ನು ಬೈಫರ್‌ಕೇಶನ್ ಮಾಡಲಿಲ್ಲ. Because they are already weak. We can have a re-thought on that Committee report ಅಷ್ಟೇ. ಈಗ ಆಗಿದ್ದು ಆಗಿಹೋಗಿದೆ. ಅದನ್ನು ನಾವು ಪ್ರೆಸ್ ಮಾಡುವುದಿಲ್ಲ. ಆದರೆ ಬಿಜಾಪುರ ಡಿ.ಸಿ.ಸಿ. ಬ್ಯಾಂಕ್‌ನ ಎಲೆಕ್ಷನ್ ಮುಂದಕ್ಕೆ ಹಾಕಿದ್ದೀರಿ. ಅದು ತಪ್ಪಾಗುತ್ತದೆ, ಆದುದರಿಂದ ದಯಮಾಡಿ ಎಲ್ಲಿ ನಿಂತಿದೆ ಅಲ್ಲಿಂದ ಪ್ರೋಸಸ್ ಪ್ರಾರಂಭ ಮಾಡಿಸಿ. That is the request. ಅದೇ ಜ್ಯುರಿಸ್ ಡಿಕ್ಷನ್‌ನಲ್ಲಿ ಮೂರು ಷುಗರ್ ಫ್ಯಾಕ್ಟರಿಗಳ ಎಲೆಕ್ಷನ್ ನಡೆಯುತ್ತಿದೆ, ಬ್ಯಾಂಕ್‌ಗಳಿಗೆ ಎಲೆಷನ್ ನಡೆಯುತ್ತದೆ, ಆದರೆ ಕೇವಲ ಡಿಸಿಸಿ ಬ್ಯಾಂಕ್‌ಗೆ ಬರ ಬರುತ್ತದೆ ಎಂದು ರಿಪೋರ್ಟ್ ಕೊಟ್ಟರೆ, ನಾವು ನಾಳೆ ಕೋರ್ಟ್‌ಗೆ ಹಿಡಿದುಕೊಂಡು ಹೋದರೆ will it justify ನೀವೇ ಹೇಳಿ?

ಶ್ರೀ ಡಿ.ಬಿ. ಸದಾನಂದಗೌಡ:- ಮಾನ್ಯ ಮುಖ್ಯಮಂತ್ರಿಗಳು ಒಂದು ವಿಷಯವನ್ನು ಕ್ಲಾರಿಫೈ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಮಹಾರಾಷ್ಟ್ರ ಸರಕಾರದವರು ಗಡಿ ವಿಷಯದ ಬಗ್ಗೆ ಕೋರ್ಟ್‌ಗೆ ಹೋಗುತ್ತೇವೆ, ಎಂಬಿತ್ಯಾದಿಯಾಗಿ ಸಣ್ಣ ಥ್ರೆಟ್ ಕೊಟ್ಟಿದ್ದಾರೆ. ನಾವು ಕರ್ನಾಟಕದವರು ಕಾಸರಗೋಡಿನ ಬಗ್ಗೆ ಅಷ್ಟೇ ಕಾಳಜಿ ಇರತಕ್ಕಂಥ ಜನರು. ಕಾಸರಗೋಡು ನಮಗೆ ಸೇರಬೇಕೆಂದು ಮಹಾಜನ ವರದಿಯಲ್ಲಿರುವುದು ಎಲ್ಲಾ ಸರಿ. ಆದರೆ ಅದನ್ನು ತೆಗೆದುಕೊಳ್ಳುವುದಕ್ಕೆ ನಾವು ಯಾವ ರೀತಿಯಲ್ಲಿ ಮುಂದೆ ಹೋಗುತ್ತೇವೆ ಎನ್ನುವುದರ ಬಗ್ಗೆ ಕರ್ನಾಟಕ ಸರ್ಕಾರ ಹೇಳಬೇಕು. ಕೋರ್ಟ್‌ಗೆ ಹೋಗುವುದು ಇತ್ಯಾದಿಯಾಗಿ ಯಾವುದಾದರೂ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದಲ್ಲವೆ? ಆ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪ್ರಕಾಶ್ ಖಂಡ್ರೆ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಕರ್ನಾಟಕ ರಾಜ್ಯದ ಕಬ್ಬನ್ನು ಬೇರೆ ರಾಜ್ಯದವರು ಅರೆಯಬೇಕೆನ್ನುವುದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಬೀದರ್ ಜಿಲ್ಲೆಯ ಕಬ್ಬು ಏನಿದೆ ಅದು ಆಂಧ್ರ ಪ್ರದೇಶ, ಮಹಾರಾಷ್ಟ್ರಕ್ಕೆ ಹೋಗುವ ಸಲುರಾಗಿ, ಜಿಲ್ಲಾ ಬಂಧಿ ಮಾಡಿದ್ದರಿಂದ ರೈತರು ಬಹಳ ಸಮಸ್ಯೆಯಲ್ಲಿದ್ದಾರೆ. ನಮ್ಮಲ್ಲಿ ಕರೆಂಟ್ ಇಲ್ಲ, ನೀರು ಇಲ್ಲ, ಇದರ ಬಗ್ಗೆ ಮುಖ್ಯಮಂತ್ರಿಗಳು ಏನಾದರೂ ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:- ಬಿಜಾಪುರದ ಡಿಸಿಸಿ ಬ್ಯಾಂಕ್‌ನ ವಿಚಾರದಲ್ಲಿ ನಾವು ಏನೇ ಹೇಳಿದರೂ ಕೂಡ, ಅದು ಸಬ್‌ಜ್ಯುಡೀಸ್ ಆಗುತ್ತದೆ.

ಶ್ರೀ ಸಿ. ಬೈರೇಗೌಡ:- ಅಲ್ಲಿ ಚುನಾವಣೆ ಮಾಡುತ್ತೇವೆ ಎನ್ನುವುದು ಸಬ್‌ಜ್ಯುಡೀಸ್ ಆಗುವುದಿಲ್ಲ. ಇರುವುದೇ ಚುನಾವಣೆಯ ಸಮಸ್ಯೆ, ಅದನ್ನು ನಾವು ಒಪ್ಪಿಕೊಂಡಿದ್ದೇವೆ ಅಂದರೆ ಅದು ಸಬ್‌ಜ್ಯುಡೀಸ್ ಹೇಗಾಗುತ್ತದೆ? ನೀವು ಚುನಾವಣಾ ಕಾರ್ಯಕ್ರಮ ಎಲ್ಲಿ ನಿಂತಿದೆ ಅಲ್ಲಿಂದ ಮುಂದುವರಿಸಿಕೊಂಡು ಹೋಗುತ್ತೇವೆ ಅಂದರೆ ಅಲ್ಲಿಗೆ ಮುಗಿಯುತ್ತದೆ.

ಶ್ರೀ ಎಸ್.ಎಂ. ಕೃಷ್ಣ:- ಹಾಗೆಯೇ ಮಾನ್ಯ ಸದಾನಂದಗೌಡರು ಕಾಸರಗೋಡು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಒಂದು value based decision ತೆಗೆದುಕೊಳ್ಳಬೇಕಾಗುತ್ತದೆ. ಮಹಾಜನ್ ಕಮಿಶನ್ ರೆಕಮಂಡೇಶನ್‌ಗಳು ಸಂಪೂರ್ಣವಾಗಿ

ಜಾರಿಗೆ ಬರಬೇಕೆನ್ನುವುದು ಈ ಸದನ ಹಾಕಿಕೊಂಡಿರತಕ್ಕಂಥ ಅಂಗೀಕರಿಸಿರತಕ್ಕಂಥ ನಿರ್ಣಯ. ಅದು ಹತ್ತಾರು ವರ್ಷಗಳಲ್ಲಿ ಬಂದ ಸರಕಾರಗಳೆಲ್ಲವೂ ಕೂಡ, ಬದ್ಧವಾಗಿ ಕೆಲಸ ಕಾರ್ಯಗಳನ್ನು ಮುಂದುವರಿಸಿಕೊಂಡು ಬಂದಿವೆ. . ಈ ಸರಕಾರವೂ ಅದಕ್ಕೆ ಹೊರತಾಗಲಿಕ್ಕೆ ಸಾಧ್ಯವಿಲ್ಲ. ಹಲವಾರು ಗಡಿ ಪ್ರಶ್ನೆಗಳು ಇವೊತ್ತು ಇನ್ನೂ ನೆನೆಗುದಿಗೆ ಬಿದ್ದಿರತಕ್ಕಂಥ ಪ್ರಶ್ನೆ ಇದೆ. ಈಗ ಒಂದು ರಾಜ್ಯ ಸರಕಾರವು ಕೋರ್ಟ್‌ಗೆ ಹೋಗುತ್ತೇವೆ ಎನ್ನತಕ್ಕಂಥ ಮಾತುಗಳನ್ನು ಆಡುತ್ತಿದೆ. ವಿಧಿಯಿಲ್ಲದೆ ಯಾರಾದರೂ ಕೋರ್ಟ್‌ಗೆ ಗಡಿ ವಿಚಾರದಲ್ಲಿ ಹೋದರೆ, ನಾವು ನಮ್ಮ ನಿಲುವನ್ನು ಸೂಕ್ತವಾದಂಥ ಸಮಯದಲ್ಲಿ, ಸಮರ್ಥವಾದಂಥ ರೀತಿಯಲ್ಲಿ ಮಂಡಿಸಬೇಕಾಗಿರತಕ್ಕಂಥದ್ದು ನಮ್ಮ ಜವಾಬ್ದಾರಿ, ಆ ಜವಾಬ್ದಾರಿಯ ಚೌಕಟ್ಟಿನಲ್ಲಿ ನಾವು ಕಾಸರಗೋಡನ್ನೂ ಕೂಡ ಗಮನಿಸುತ್ತೇವೆ ಎಂದು ಹೇಳಬಯಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಏಕೆ ಈ ಮಾತನ್ನು ಉಲ್ಲೇಖ ಮಾಡಿದ್ದೇನೆ ಅಂದರೆ, ಪ್ರಾಯಶಃ ಎಲ್ಲಾ ಮುಖ್ಯಮಂತ್ರಿಗಳು ಒಮ್ಮೆ ಸಭೆ ಸೇರಿದ್ದೀರಿ. ಅದು ನಮ್ಮ ಲೋಕಸಭೆಯ ವಿರೋಧ ಪಕ್ಷದ ನಾಯಕತ್ವದಲ್ಲಿ ಎಂದು ಹೇಳಿದ್ದೀರಿ. ಈ ಎಲ್ಲಾ ವಿಚಾರಗಳನ್ನು ಸಮಗ್ರವಾಗಿ ಚಿಂತನೆ ಮಾಡುವಂಥ ಸಂದರ್ಭದಲ್ಲಿ ಕೇರಳದಲ್ಲಿಯೂ ಕೂಡ ನಿಮ್ಮದೇ ಪಕ್ಷದ ಸರಕಾರವಿದೆ. ಮಹಾರಾಷ್ಟ್ರದಲ್ಲಿಯೂ ಕೂಡ ನಿಮ್ಮದೇ ಪಕ್ಷದ ಸರಕಾರವಿದೆ, ಆದ್ದರಿಂದ ನೀವೆಲ್ಲ ಒಂದೇ ಪಕ್ಷಕ್ಕೆ ಸೇರಿದಂಥ ಮುಖ್ಯಮಂತ್ರಿಗಳು 2-3, ರಾಜ್ಯಗಳಲ್ಲಿರುವುದರಿಂದ, ಹಾಗೆಯೇ ಲೋಕಸಭೆಯ ವಿಪಕ್ಷದ ನಾಯಕಿಯವರಾದ ಶ್ರೀಮತಿ ಸೋನಿಯಾ ಗಾಂಧಿಯವರ ನೇತೃತ್ವದಲ್ಲಿ ತಾವುಗಳೆಲ್ಲರೂ ಸಭೆ ಸೇರಿದ್ದೀರಿ. ಇಂಥ ಸಂದರ್ಭಗಳನ್ನು ತಾವುಗಳು ಬಳಸಿಕೊಂಡು ಒಂದು ತೀರ್ಮಾನಕ್ಕೆ ಬರುವುದು ಸುಲಭವಾಗುತ್ತದೆ. ಒಂದೊಂದು ರಾಜ್ಯದಲ್ಲಿ ಒಂದೊಂದು ಪಕ್ಷದ ಮುಖ್ಯಮಂತ್ರಿ ಇದ್ದರೆ ಅಷ್ಟು ಸುಲಭವಾಗುವುದಿಲ್ಲ. ಇವೊತ್ತು ಆ ರೀತಿಯ ಸಮನ್ವಯತೆಯನ್ನು ಕಂಡು ಹಿಡಿಯಲು ಏನಾದರೂ ಪರಿಹಾರವನ್ನು ಕಂಡುಕೊಂಡು, ಕಾಸರಗೋಡನ್ನು ಅತ್ಯಂತ ಶೀಘ್ರದಲ್ಲಿ ಸೇರಿಸುವಂತಾದ್ದು ಅಥವಾ ಮಹಾರಾಷ್ಟ್ರ ಗಡಿಸಮಸ್ಯೆಯನ್ನು ಬಗೆ ಹರಿಸುವಂತಾದ್ದು, ಏನಾದರೂ ಮಾಡಬಹುದೇ ಎನ್ನುವಂಥಾದ್ದನ್ನು ಹಾಗೂ ಪರಿಹಾರವನ್ನು ಕಂಡುಕಳ್ಳಬಹುದೇ ಎಂಬುದು ನನ್ನ ಪ್ರಶ್ನೆ.

ಶ್ರೀ ಶ್ರೀನಿವಾಸಗೌಡ ಕುಡುವನಹಳ್ಳಿ:- ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತವು ನಮ್ಮ ರಾಜ್ಯದಲ್ಲಿ ಒಳ್ಳೆಯ ಕೆಲಸವನ್ನು ಮಾಡುತ್ತಾ ಇದೆ. ಅದಕ್ಕೆ ಅಂದರೆ, ಸೆಕ್ಷನ್-285-ಪ್ರಕಾರ ಅದಕ್ಷತೆಯ ಮೇಲೆ ಸಂಬಂಧಪಟ್ಟವರನ್ನು ಡಿಸ್‌ಮಿಸ್ ಮಾಡುವಂಥ ಅಧಿಕಾರವನ್ನು ಅವರಿಗೆ ಕೊಟ್ಟರೆ, ನಮ್ಮಲ್ಲಿ ಬೆಳೆದಿರುವ ಕರಪ್‌ಶನ್‌ಗಳು ಕಡಿಮೆಯಾಗಬಹುದೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಡುತ್ತಾ, ಎರಡನೇದಾಗಿ ಕ್ರಾಪ್ ಇನ್‌ಶೂರೆನ್ಸ್‌ನ್ನು ಸರಕಾರದಿಂದ ಸುಮಾರು 60 ಕೋಟಿ ರೂ. ಗಳಷ್ಟು ಕಟ್ಟಬೇಕಾಗುತ್ತದೆ. ಆ ಬಗ್ಗೆ ನನಗೆ ಮಾತನಾಡಲು ಅವಕಾಶ ಸಿಗದ ಕಾರಣ ಮಾತನಾಡಿಲ್ಲ. ದಯವಿಟ್ಟು ಕ್ರಾಪ್ ಇನ್‌ಶೂರೆನ್ಸ್ ಹಣವನ್ನು ಸಕಾರ ಕಟ್ಟುವಂಥ ಕೆಲಸವನ್ನು ಬೇಗನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ತಾವುಗಳು ಉತ್ತರ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿ. ಚೆನ್ನಿಗಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ರೈತರ ಸಾಲದ ಬಡ್ಡಿಮನ್ನಾ ವಿಷಯವನ್ನು ಹೇಳಿದ್ದಾರೆ. ಆದರೆ ಸ್ಪಷ್ಟವಾಗಿ ಪಿಎಲ್‌ಡಿ ಬ್ಯಾಂಕ್‌ನ

ಸಾಲವಸೂಲಾತಿಯನ್ನು ಮುಂದಕ್ಕೆ ಹಾಕುತ್ತೇವೆಂಬ ಮಾತನ್ನು ಅವರು ಹೇಳಿಲ್ಲ. ಅದೇ ರೀತಿಯಲ್ಲಿ ರೈತರಿಗೆ ಕರೆಂಟ್‌ನ್ನು ರಾತ್ರಿ ಹೊತ್ತು ಕೊಡುತ್ತಿದ್ದು ಅದನ್ನು ಹಗಲು ಹೊತ್ತಿನಲ್ಲಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ರೈತರ ಕಷ್ಟಗಳನ್ನು ನೋಡಿದ್ದಾರೆ. ರೈತರ ಹಿತದೃಷ್ಟಿಯಿಂದ ಹಗಲು ಹೊತ್ತಿನಲ್ಲಿ ಕರೆಂಟ್ ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಹೆಚ್. ರಾಜು ಆಲಗೂರ್:- ಬಿಡಿಸಿಸಿ ಬ್ಯಾಂಕ್‌ನವರು ಇಲ್ಲಿಯವರೆಗೂ ಅನಧಿಕೃತವಾಗಿ ಮುಂದುವರಿದಿದ್ದಾರೆ. ಹಾಗೆಯೇ ಅವರೇ ಕೋರ್ಟ್‌ಗೆ ಹೋಗಿದ್ದಾರೆ. ಆವಾಗಲೂ ಕೂಡ ಕ್ಯಾಲೆಂಡರ್ ಆಫ್ ಇವೆಂಟ್ಸ್ ಆಗಿತ್ತು. ಚುನಾವಣೆ ಘೋಷಣೆಯೂ ಆಗಿತ್ತು. ಈ ಚುನಾವಣೆಯು ನಡೆಯಬಾರದೆಂದು ಆಗಿನ ಅಧ್ಯಕ್ಷರಾಗಿರತಕ್ಕಂಥ ಶಿವಾನಂದ ಪಾಟೀಲ್‌ರವರೇ ಕೋರ್ಟ್‌ಗೆ ಹೋಗಿ ಮೂರು ವರ್ಷ ಚುನಾವಣೆಯನ್ನು ಮುಂದೂಡಿದ್ದಾರೆ. ಆಗಲೂ ಕೂಡ ಬರ ಇತ್ತು. ಕ್ಯಾಲೆಂಡರ್ ಆಫ್ ಇವೆಂಟ್ಸ್ ಇತ್ತು. ರಿಟರ್‍ನಿಂಗ್ ಅಧಿಕಾರಿಯನ್ನು ಹಾಕಿದ್ದರು. ಹಾಗೆ ಎಲ್ಲಾ ಚುನಾವಣೆ ಪಕ್ರಿಯೆ ನಡೆದರೂ ಕೂಡ, ಅವರು ಕೋರ್ಟ್‌ಗೆ ಹೋಗಿ ಚುನಾವಣೆ ಪ್ರಕ್ರಿಯೆಗೆ ಸ್ಟೇ ತಂದು ಅವರು ಇಲ್ಲಿಯವರೆಗೂ ಅನಧಿಕೃತವಾಗಿ ಅಧ್ಯಕ್ಷರಾಗಿ ಮುಂದುವರಿದಿದ್ದಾರೆ. ಅವರೇ ಇವೊತ್ತು ಹೇಳುತ್ತಿದ್ದಾರೆ ಸರಕಾರ ಚುನಾವಣೆಯನ್ನು ಮುಂದೂಡಿದೆ ಎಂದು ನಮ್ಮಲ್ಲಿ ಬರಗಾಲದ ಪರಿಸ್ಥಿತಿ ಇದೆ, ಕುಡಿಯುವ ನೀರಿಲ್ಲ. ಇವೊತ್ತು ಪಿಎಸ್‌ಎಸ್‌ನ ವೋಟರ್ಸ್ ಏನಿದ್ದಾರೆ, ಅವರೆಲ್ಲಾ ಮಹಾರಾಷ್ಟ್ರಕ್ಕೆ ದುಡಿಯಲು ಹೋಗಿದ್ದಾರೆ, ಈ ಕಾರಣಕ್ಕಾಗಿ ನಾವೆಲ್ಲಾ ವಿನಂತಿ ಮಾಡಿಕೊಂಡಾಗ, ಸರಕಾರವು ಚುನಾವಣೆಯನ್ನು ಮುಂದಕ್ಕೆ ಹಾಕಿದೆ. ನಮ್ಮಲ್ಲಿ ನಿಜವಾಗಿಯೂ ಬರಗಾಲದ ಪರಿಸ್ಥಿತಿಯಿದೆ. ಇದನ್ನು ಪ್ರಶ್ನೆ ಮಾಡತಕ್ಕಂಥ ಅವರು ಸುಮಾರು ಮೂರು ವರ್ಷಗಳ ಕಾಲ ಅನಧಿಕೃತವಾಗಿ ಅಧ್ಯಕ್ಷರಾಗಿ ಮುಂದುವರಿದಿದ್ದಾರೆ. ಇದರ ಬಗ್ಗೆ ಅವರು ಯಾಕೆ ಹೇಳುತ್ತಿಲ್ಲವೆಂಬ ಬಗ್ಗೆ ನಾನು ಅವರಲ್ಲಿ ಸ್ಪಷ್ಟನೆ ಕೇಳುತ್ತಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, He is charging on me. ನಾನು ಆಗಲೇ ಪ್ರಸ್ತಾಪ ಮಾಡಿದ್ದೇನೆ. ಸುಂದರವರ್ಧನ್ ಕಮಿಟಿ ರಿಪೋರ್ಟ್ it is for the bifurcation. ಒಂದು ಬ್ಯಾಂಕನ್ನು ಕಟ್ಟ ಬೇಕಾದರೆ ಎಷ್ಟು ಕಷ್ಟವಾಗುತ್ತದೆ, ಆ ಬ್ಯಾಂಕ್‌ನ ಶೇರ್ಸ್‌ದಾರರಿಗೆ ಮಾತ್ರ ಗೊತ್ತಾಗುತ್ತದೆ. This is not a healthy practice. ನಾನು ಮಾನ್ಯ ಅಧ್ಯಕ್ಷರಿಗೆ ಹೇಳುತ್ತೇನೆ. ಅವರಿಗೆ ಹೇಳಲು ನಾನು ಇಲ್ಲಿ ನಿಂತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ನನಗೆ ಉತ್ತರ ಹೇಳಲು ಅವರಿಗೆ ಎಬ್ಬಿಸಿ ನಿಲ್ಲಿಸುತ್ತೇನೆಂದು ಮೊನ್ನೆ ತಾನೇ ಹೇಳಿದ್ದೀರಿ. This is a passing remarks, I can sportily accept it. But this is not fair. ಸುಂದರ್ ವರ್ಧನ್ ಕಮಿಟಿ ರಿಪೋರ್ಟ್ ಬಗ್ಗೆ ಡಿಸ್ಪ್ಯೂಟ್ ಇದೆ. ಆ ಕಮಿಟಿ ರಿಪೋರ್ಟ್ ಸರಿಯಿಲ್ಲವೆಂದು ಮಾನ್ಯ ಮಂತ್ರಿಗಳೂ ಕೂಡ ಒಪ್ಪಿಕೊಳ್ಳುತ್ತಾರೆ. ಧಾರವಾಡ ಕೆಸಿಸಿ ಬ್ಯಾಂಕ್‌ನ್ನು ಬೈಫರ್‌ಕೇಟ್ ಮಾಡಬೇಕೆಂದು ಕಮಿಟಿ ರಿಪೋರ್ಟ್ ಕೊಟ್ಟಿದೆ. ಇವತ್ತು ಡಿಪಾಸಿಟರ್ಸ್‌ಗೆ ಕೊಡಲು ದುಡ್ಡಿಲ್ಲ. ಆ ಬ್ಯಾಂಕನ್ನು ಬೈಫರ್‌ಕೇಟ್ ಮಾಡಬೇಕೆಂದು ಕಮಿಟಿ ವರದಿ ಕೊಟ್ಟರೆ ಆ ಕಮಿಟಿ ರಿಪೋರ್ಟನ್ನು ಬೋರ್ಡ್ ಚಾಲೆಂಜ್ ಮಾಡಿ ಕೋರ್ಟಿಗೆ ಹೋಗಿದೆ. If court is in the process of finding the report of that Committee

ನಾನೇನು ಮಾಡುವುದಕ್ಕೆ ಬರುತ್ತದೆ? If Court stays the election ಅದನ್ನು ಬೇಕಾದರೆ ಮಂತ್ರಿಗಳು ಕ್ಲಾರಿಫೈ ಮಾಡಲಿ. ಅದನ್ನು ನಾನು ಮುಂದೆ ಹಾಕಿದ್ದೇನೋ ಕೋರ್ಟ್ ಮುಂದೆ ಹಾಕಿದೆಯೋ ಸಚಿವರೇ ಹೇಳಿಬಿಡಿ ದಯಮಾಡಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಅಧ್ಯಕ್ಷರೇ, ಹೊಸ ಪದ್ಧತಿ ಚಾಲೂ ಆಗಿದೆ ಸದನದಲ್ಲಿ ಮಂತ್ರಿಗಳು ಉತ್ತರ ಕೊಡುವ ಬದಲು ಶಾಸಕರೇ ಉತ್ತರ ಕೊಡುತ್ತಿದ್ದಾರೆ.

ಅಧ್ಯಕ್ಷರು:- ಸರ್ಕಾರದವರು ಉತ್ತರ ಹೇಳುತ್ತಾರೆ.

ಶ್ರೀ ಎಚ್. ವಿಶ್ವನಾಥ್ (ಸಹಕಾರ ಸಚಿವರು):- ಅಧ್ಯಕ್ಷರೆ, ಈ ಬಗ್ಗೆ ಗಮನ ಸೆಳೆಯುವ ಸೂಚನೆಯಲ್ಲಿ ಬಹಳ ವಿವರವಾಗಿ 1 ಗಂಟೆ 10 ನಿಮಿಷಗಳ ಕಾಲ ಚರ್ಚೆಯಾಗಿದೆ ಇಲ್ಲಿ ಉತ್ತರ ಕೂಡ ಕೊಟ್ಟಿದ್ದೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಚುನಾವಣೆ ಮತ್ತು ಆಡಳಿತಾಧಿಕಾರಿಗಳ ನೇಮಕ-ಇವರೆರಡೂ ಉಚ್ಚ ನ್ಯಾಯಾಲಯದ ಮುಂದಿದೆ. ಅದಕ್ಕಿಂತ ಮುಂಚೆ 17ನೇ ತಾರೀಖು ನಾವೇನು ಚುನಾವಣಾಧಿಕಾರಿಯನ್ನು ಅಲ್ಲಿ ಹಾಕಿದೆವು ಆದರೆ 16ನೇ ತಾರೀಖೇ ಬಿಜಾಪುರದ ಬಿಜೆಪಿ ಉಪಾಧ್ಯಕ್ಷರು ಮತ್ತು ಬಿಜೆಪಿಯ ತಾಲ್ಲೂಕು ಪಂಚಾಯ್ತಿ ಸದಸ್ಯರೊಬ್ಬರು ಉಚ್ಚನ್ಯಾಯಾಲಯಕ್ಕೆ ಹೋಗಿ, ಈ ಚುನಾವಣೆಯನ್ನು ನಿಲ್ಲಿಸಿ ಎಂದು ಅವರ ಪಾರ್ಟಿಯವರೇ ಹೋಗಿದ್ದಾರೆ. ಇವೆಲ್ಲವೂ ಕೂಡ ಕೋರ್ಟಿನಲ್ಲಿ ರಿಟ್ ಪಿಟಿಷನ್ ಇರುವುದರಿಂದ ಅದನ್ನು ಪದೇ ಪದೇ ಚರ್ಚೆ ಮಾಡತಕ್ಕಂತಹ ಪ್ರಮೇಯ ಕೂಡ ಇಲ್ಲ. ಇಲ್ಲಿನ ಚರ್ಚೆ ಅಲ್ಲಿನ ಫಲಿತಾಂಶಕ್ಕೆ ಪ್ರತಿಕೂಲ ಕೂಡ ಆಗಬಹುದು. ಆದ್ದರಿಂದ ಇದನ್ನು ಅನಾವಶ್ಯಕವಾಗಿ ಎಳೆಯುವುದು ಸರಿಯಲ್ಲ. ಕೋರ್ಟ್ ಏನು ತೀರ್ಮಾನ ಕೊಡುತ್ತದೆ ಅದಕ್ಕೆ ಸರ್ಕಾರ ಬದ್ಧವಾಗಿರುತ್ತದೆ.

ಅಧ್ಯಕ್ಷರು:- ಆಯಿತು ಅದನ್ನು ಇಲ್ಲಿಗೆ ಮುಗಿಸೋಣ.

ಶ್ರೀ ಸಿ. ಬೈರೇಗೌಡ:- ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಈ ರಾಜ್ಯದ ರೈತವರ್ಗಕ್ಕೆ ಸಂಬಂಧಿಸಿದಂತೆ ಎರಡು ವಿಚಾರವನ್ನು ತಾವು ಪ್ರಸ್ತಾಪಿಸಿದಿರಿ. ಒಂದು ಬೆಳೆ ವಿಮೆ ಬಗ್ಗೆ, ಇನ್ನೊಂದು ಬಡ್ಡಿ ಮನ್ನಾ ಬಗ್ಗೆ. ಉಳಿದಂತೆ ಬೇರೆ ವಿಚಾರಗಳನ್ನು ರೈತರು ಎದುರಿಸುತ್ತಿರುವಂತಹ ಕಷ್ಟ ಅವರ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪ್ರಸ್ತಾಪ ಮಾಡಲು ಹೋಗಲಿಲ್ಲ. 96-97ರಲ್ಲಿ ಜೀವವಿಮೆ ಎಷ್ಟಿತ್ತು ಅಂತ ಪ್ರಶ್ನೆ ಕೂಡ ಕೇಳಿದಿರಿ. ಯಾಕೆಂದರೆ ದಾಖಲೆಯನ್ನು ಸರಿಯಾಗಿ ಹೋಗಬೇಕು. ಅವತ್ತು insurance scheme ಏನಿತ್ತು ಬರೀ ಸಾಲ ಪಡೆದ ರೈತರಿಗೆ ಮಾತ್ರ ಇನ್ಶೂರೆನ್ಸ್ ಕೊಡತಕ್ಕಂತಹ ಪದ್ಧತಿ ಜಾರಿಯಲ್ಲಿತ್ತು. ಅದರಿಂದ ಅವತ್ತಿನ ದಿವಸ ಇನ್ಶೂರೆನ್ಸ್ ಕಡಿಮೆಯಾಗುತ್ತಿತ್ತು. ಈಗ ಅದು ಮಾಡಿಫೈ ಆಗಿರುವ ಕಾರಣದಿಂದ ಎಲ್ಲಾ ರೈತರಿಗೂ ಇನ್ಶೂರೆನ್ಸ್ ಮಾಡಲು ಅವಕಾಶ ಇದೆ. ಆ ಅವಕಾಶ ಹಿಂದೆ ಇರಲಿಲ್ಲ. ಈಗ ಹೆಚ್ಚು ಹಣವನ್ನು ಕೂಡ ಕೊಡಬೇಕಾದ ಅವಶ್ಯಕತೆ ಇದೆ. ಅದರಲ್ಲಿ ರಾಜ್ಯ ಮತ್ತು ಕೇಂದ್ರಗಳ ಪಾಲು ಇದೆ. ರಾಜ್ಯ ಸರ್ಕಾರದ ಪಾಲನ್ನು ದಯವಿಟ್ಟು ತಕ್ಷಣ ಬಿಡುಗಡೆ ಮಾಡಬೇಕೆಂಬುದು ಒಂದು. ಎರಡನೆಯದಾಗಿ ರೈತರು ಆರ್ಥಿಕವಾಗಿ ಸದೃಢವಾಗಬೇಕಾಗಿದ್ದರೆ ರೈತರು ಬೆಳೆದಿರುವ ಉತ್ಪನ್ನಗಳೇನಿವೆ ಅವು ಸಂಸ್ಕರಣೆಯಾಗಬೇಕು. ಆ ಸಂಸ್ಕರಣೆಯ ವಿವರವಾದ ಅಂಕಿಅಂಶಗಳನ್ನು ಇವತ್ತು ನಾನು ವಿವರವಾಗಿ ಹೇಳುವುದಕ್ಕೆ ಹೋಗುತ್ತಾ ಇಲ್ಲ. ಹಾಲಿ ಸಂಸ್ಕರಣೆಗೆ ಒಳಪಡುತ್ತಿರುವುದು ಶೇಕಡ 6ರಷ್ಟು ಮಾತ್ರ. ಅದರಿಂದ ಬೇರೆಬೇರೆ ದೇಶಗಳಲ್ಲಿ

ಹೆಚ್ಚು ಹೆಚ್ಚು ಸಂಸ್ಕರಣೆಯಾಗುತ್ತಾ ಇದೆ. ತಾವ್ಲು ನಾಳೆ ಬಜೆಟ್ ಮಂಡಿಸುವವರಿದ್ದೀರಿ. ಆ ಸಂದರ್ಭದಲ್ಲಿ ಆಹಾರ ಸಂಸ್ಕರಣೆಗೆ ಒತ್ತು ಕೊಡಬೇಕಾದ ಅವಶ್ಯಕತೆ ಇದೆ. ದಯವಿಟ್ಟು ಕೊಡಬೇಕು ಮತ್ತೆ ಸಂಸ್ಕರಿಸಿದ ಆಹಾರದ ಮೇಲೆ ಶೇಕಡ 14ರಷ್ಟು ಸೇಲ್ಸ್ ಟ್ಯಾಕ್ಸ್ ಹಾಕುತ್ತಿದ್ದೀರಿ. ವ್ಯಾಟ್ ಬಂದ ಮೇಲೆ ಏನಾಗುತ್ತದೋ ಗೊತ್ತಿಲ್ಲ 1-4-2003 ರಿಂದ ಏನಾಗುತ್ತದೋ ಗೊತ್ತಿಲ್ಲ. ಇವತ್ತು ಶೇಕಡ 14 ರಷ್ಟು ಸೇಲ್ಸ್ ಟ್ಯಾಕ್ಸ್ ಹಾಕುತ್ತೀರಿ ಇದಕ್ಕೆ ದಯವಿಟ್ಟು ಎಕ್ಸ್‌ಮಷನ್ ಕೊಡುವ ಅವಶ್ಯಕತೆ ಇದೆ. ಇದು ಬಹಳ ಮುಖ್ಯವಾಗಿರುವಂತಹದು. ದಯವಿಟ್ಟು ಈ ಕೆಲಸ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):- ಮಾನ್ಯ ಸದಸ್ಯರಾದ ಬೈರೇಗೌಡರು ಎರಡು ಪ್ರಚಲಿತ ವಿಚಾರಗಳಲ್ಲಿ ಒಂದು ಒಟ್ಟಾರೆ ರೈತಾಪಿ ಜನಗಳು ಇವತ್ತು ಬೆಳೆ ಕುಸಿತದ ಸುಳಿಗೇನು ಸಿಕ್ಕಿದ್ದಾರೆ ಆ ಸುಳಿಯಿಂದ ರೈತರು ಹೇಗೆ ಹೊರಬರಬೇಕು ಎಂಬುದರ ಬಗ್ಗೆ ನಾನು ಹೆಚ್ಚು ಲಂಬಿಸಲಿಲ್ಲ ಎಂದು ಹೇಳಿದರು. ಎರಡನೆಯದು ಸಂಸ್ಕರಣೆ ಘಟಕಗಳಿಗೆ ವಿಶೇಷವಾದ ಒತ್ತು ಕೊಡಬೇಕು ಎಂದು, ನಾವು cold storage ಗೆ ವಿಶೇಷವಾಗಿ power rebateನ್ನು ಘೋಷಣೆ ಮಾಡಿ ಅದರಿಂದ ನಿರೀಕ್ಷಿತವಾದ ಪರಿಣಾಮಗಳು ಬರಲಿಲ್ಲ. ಆದುದರಿಂದ cold storage ಗಳ ಸ್ಥಾಪನೆ ಮತ್ತು cold storage ಗಳನ್ನು ರೈತಾಪಿ ಜನಗಳು ಉಪಯೋಗಿಸತಕ್ಕಂಥಾದ್ದು, ಎಲ್ಲಿ horticultural crops ಬೆಳೆಯುತ್ತಿದ್ದೇವೆ ಬಿಜಾಪುರ, ಕೋಲಾರ, ಹಾಸನ ಈ ಭಾಗದಲ್ಲಿ ನಾವು ವಿಶೇಷವಾದ ಗಮನವನ್ನು ಕೊಡಬೇಕಾಗಿದೆ. ಇದಕ್ಕೆ ರಾಜ್ಯ ಸರ್ಕಾರ ಯಾರ್‍ಯಾರು cold storage ನ್ನು ಹಾಕಲಿಕ್ಕೆ ಮುಂದೆ ಬರುತ್ತಾರೆ ಅವರಿಗೆ ವಿಶೇಷವಾದ ಉತ್ತೇಜನ ಕೊಡುತ್ತೇವೆ ಆದರೆ ನಾವೇ cold storage ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಈ ಮಾತನ್ನು ತಾವು ಒಪ್ಪುತಾ ಇದ್ದೀರಿ. ಆದ್ದರಿಂದ enterprenuers ಮುಂದೆ ಬಂದರೆ ಈ cold storage ಗಳನ್ನು ನಾವು ಜಾಸ್ತಿ ಮಾಡಬಹುದು ಮತ್ತು ರೈತಾಪಿ ಜನಗಳ ಬೆಳೆಗಳಿಗೆ ಒಂದು ಯೋಗ್ಯವಾದ ಚೌಕಟ್ಟು ನಿರ್ಮಾಣ ಮಾಡುವಲ್ಲಿ ಆವರ್ತ ನಿಧಿ ಎಂದು ನಾವು ಪ್ರಾರಂಭ ಮಾಡಿದ್ದು, ಕಳೆದ ವರ್ಷ ಅದು ಬಹಳ ಯಶಸ್ವಿಯಾಗಿ ನಡೆದಿದೆ. ಈ ವರ್ಷ ಅದೇ ದಿಕ್ಕಿನಲ್ಲಿ ನಾವು ಮುಂದುವರೆಯುತ್ತೇವೆ. ಅದಕ್ಕೆ ಯಶಸ್ಸು ತಂದುಕೊಡಬೇಕು ಎಂಬ ಬಗ್ಗೆ ನಾನು ನಾಳೆ ಮಂಡಿಸುವ ಬಜೆಟ್‌ನಲ್ಲಿ ಕೆಲವು ವಿಶೇಷವಾದ ವ್ಯಾಖ್ಯಾನಗಳು ಬರಬಹುದು. ಇನ್ನು ಸೇಲ್ಸ್ ಟ್ಯಾಕ್ಸ್ ವಿಚಾರ ಬಜೆಟ್‌ಗೆ ಸಂಬಂಧಪಟ್ಟಿದ್ದು. ಆ ಸಂದರ್ಭದಲ್ಲಿ ಕೇಳಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಮಾನ್ಯ ಅಧ್ಯಕ್ಷರೆ, ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಗಮನಿಸಿದ್ದಾರೆ. ನಮ್ಮ regional imbalance ಸರಿ ಮಾಡಲು ಮುಖ್ಯಮಂತ್ರಿಗಳು ಹೊರಟಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ನಮ್ಮ ಕೊಪ್ಪಳ ಭಾಗದಲ್ಲಿ ಮುನಿರಾಬಾದ್‌ನಲ್ಲಿ 300 ಎಕರೆ ಭೂಮಿ ಇದೆ ಮತ್ತು water source ಇದೆ, ಅಲ್ಲಿ ಪಶು ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಿದರೆ ಹೇಗೆ ಎಂದು ನಿನ್ನೆ ಪಶುಮಂತ್ರಿಗಳ ಗಮನವನ್ನು ಸೆಳೆದಿದ್ದೇನೆ. ಅದಕ್ಕೊಂದು ಉತ್ತರ ಕೊಡಬೇಕು. ಎರಡನೆಯದು ರೈತ ಕಾಯಕ ಕೆರೆ, ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು 670 ಕೋಟಿ ರೂ. ಹಣ ಏನು ವಿಶ್ವಬ್ಯಾಂಕಿನಿಂದ ಪಡೆದುಕೊಂಡಿದ್ದಾರೆ 25 ಸಾವಿರ ಕೆರೆಗಳ ಹೂಳೆತ್ತಲಿಕ್ಕೆ

ಎಂದು. ಇದು ಇವರಿಗೆ ಹೇಗೆ ಸಾಧ್ಯವಾಗುತ್ತದೆ? ಅದಕ್ಕೆ ಅದನ್ನು ಮಾಡಿಷ್ಟೆ ಮಾಡುತ್ತಾರೋ ಹೇಗೆ ಅಂತ. ವರ್ಲ್ಡ್ ಬ್ಯಾಂಕ್ ಸಾಲ ಕೊಡುತ್ತದೆ ಅಂತ ಅವರ ಕಂಡಿಷನ್‌ಗೆ ನಾವು ಒಪ್ಪಿಕೊಂಡು ಹೋಗುವುದಾದರೆ ಕಾರ‍್ಯಕ್ರಮಗಳನ್ನು ಹೇಗೆ ಜಾರಿಗೊಳಿಸಲು ಆಗುತ್ತದೆ? ಅದರ ಬಗ್ಗೆ ಹೇಳಬೇಕಾಗುತ್ತದೆ. ಇನ್ನು ಮೂರನೆದು ಏನೂ ಅಂದರೆ ಶಾಸಕರ ಅನುದಾನ ತಾವು ಕೊಡಬೇಕಾಗುತ್ತದೆ. ಅನೇಕ ಹಿರಿಯ ನಾಯಕರು ಮಾತನಾಡಿದ್ದಾರೆ, ಇವತ್ತೇನು ಮೇಲ್ಮನೆ ಸದಸ್ಯರಿಗೇನು ಕೊಡುತ್ತಾ ಇದ್ದೀರಿ ಆದರೆ ಸ್ಥಳೀಯವಾಗಿ ಕೆಲಸ ಮಾಡುವ ನಮಗೆ ಏನು ಕಷ್ಟ ಇದೆ ಎಂಬುದು ಬಹಳ ಪೂರಕವಾಗುತ್ತದೆ. ಇನ್ನೊಂದು ಅಂದರೆ SC/ST Development Corporation ಮೂಲಕ ಪರಿಶಿಷ್ಟ ಜಾತಿ ಮತ್ತು ದೇವದಾಸಿ ಜನಾಂಗದವರಿಗೆ ಮಾಲೀಕರು ಏನು ಜಮೀನು ಕೊಡುತ್ತಾರೆ ಅದಕ್ಕೆ stamp exemption ಕೊಡಲಿಕ್ಕೆ ಕೂಡ ಬೇಡಿಕೆ ಇದೆ. ಇದಕ್ಕೆ ಉತ್ತರ ನಾನು ಸರ್ಕಾರದಿಂದ ಬಯಸುತ್ತೇನೆ.

ಅಧ್ಯಕ್ಷರು:- ಜಲಸಂವರ್ಧನೆ ಮತ್ತು ರೈತ ಕಾಯಕ ಕೆರೆ ಕಾರ್ಯಕ್ರಮಗಳೇನಿದೆ ಸರ್ಕಾರದವರು ಪ್ರಪಂಚ ಬ್ಯಾಂಕಿನ 650 ಕೋಟಿ ರೂ. ತಂದಿದ್ದಾರೆ. ಆದರೆ ನಿಮ್ಮ ನಿರೀಕ್ಷೆಗೆ ತಕ್ಕಂತೆ ಅಲ್ಲಿ ಕೆಲಸ ನಡೆಯುತ್ತಾ ಇಲ್ಲ. ಅಧಿಕಾರಿಗಳದೇ ಒಂದು ಧೋರಣೆ ಆಗಿದೆ motivators ದೇ ಒಂದು ಧೋರಣೆಯಾಗಿದೆ. elected representatives ನ್ನು ಯಾರೂ ಕೇಳುತ್ತಲೇ ಇಲ್ಲ. ಯಾವ ಕೆರೆ ತೆಗೆದುಕೊಳ್ಳಬೇಕು ಏನು ಕೆಲಸ ಅಂತ. ಸ್ವಲ್ಪ ಅವರಿಗೆ ಚುರುಕು ಮುಟ್ಟಿಸಿ ಇದೇ ರೀತಿ ನಡೆದರೆ ಇನ್ನು 10 ವರ್ಷ ಆದರೂ ಆಗುವುದಿಲ್ಲ. ಈ ಸಮಸ್ಯೆಯನ್ನು ಅನುಭವಿಸುತ್ತಿರುವವರು ನಾವು. ನಮ್ಮ ಕೋಲಾರ ಜಿಲ್ಲೆಯಲ್ಲಿ 8 ತಾಲ್ಲೂಕುಗಳಿಗೆ ಕೊಟ್ಟಿದ್ದಾರೆ. ಅದಕ್ಕೋಸ್ಕರವೇ ಕೇಳುತ್ತಿರುವುದು. ಇದೇ ಮಟ್ಟದಲ್ಲಿ ಹೋದರೆ ಇನ್ನು 10 ವರ್ಷ ಆದರೂ ಕೂಡ ಆಗುವುದಿಲ್ಲ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):- ಅಧ್ಯಕ್ಷರೇ, ತಾವು ನನಗೆ ಪೋಸ್ ಮಾಡಿದ ಪ್ರಶ್ನೆ ಬಹಳ ಗಹನವಾದದ್ದು. Worls Bank ಕೆಲವು ಷರತ್ತುಗಳನ್ನು ವಿಧಿಸಿದೆ.

1.10 ಪಿಎಂ

ಆ ಷರತ್ತುಗಳೇನೆಂದರೆ ನಾನ್ ಗೌರ್ನಮೆಂಟಲ್ ಆರ್ಗನೈಜೇಷನ್ ಸಹಕಾರದಿಂದ ನಾನ್ ಗೌರ್ನಮೆಂಟ್ ಆರ್ಗನೈಜೇಷನನ್ನೇ ನಾವು ಕ್ಯಾಟಲಿಸ್ಟ್ ಆಗಿ ಇಟ್ಟುಕೊಂಡು ಜಲಸಂವರ್ಧನ ಕಾರ್ಯಕ್ರಮವನ್ನು ಮುಂದುವರಿಸಬೇಕೆಂದು ಹೇಳಿ ಆ ಒಂದು ಚೌಕಟ್ಟಿನಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ. ವಿಶೇಷವಾಗಿ ತಮ್ಮ ಜಿಲ್ಲೆಗೆ ಈ ಕಾರ‍್ಯಕ್ರಮದ ಸಿಂಹಪಾಲು ಸಿಗತಕ್ಕಂಥ ವ್ಯವಸ್ಥೆ ಇದೆ.

ಅಧ್ಯಕ್ಷರು:- ಬಹಳ ಸಂತೋಷ.

ಶ್ರೀ ಎಸ್.ಎಂ. ಕೃಷ್ಣ:- ಅದರಲ್ಲಿ ಅಧಿಕಾರಿಗಳು ಕೊಂಚ ಇನ್ನು ಹೆಚ್ಚು ಚುರುಕಾಗಬೇಕು ಎಂದು ಹೇಳಿ ತಾವೇನು ಸಂಜೆ ಕೊಟ್ಟದ್ದೀರಿ, ಅದನ್ನು ನಾವು ಸಿರಸಾವಹಿಸಿ ಪರಿಪಾಲಿಸುತ್ತೇವೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತವಾದ ನಿರ್ದೇಶನವನ್ನು ನಾವು ಸೂಚನೆಗಳನ್ನು ಕೊಡುತ್ತೇವೆ ಎನ್ನತಕ್ಕಂಥ ವಿನಂತಿಯನ್ನು ತಮ್ಮಲ್ಲಿ ಮಾಡಿಕೊಂಡು ಮಾನ್ಯ ಕರಡಿ ಸಂಗಣ್ಣನವರು ಭಾಷಣ ಮಾಡಿದಂಥ ಕಾಲದಲ್ಲಿ ನಿನ್ನೆ ನಾನು ಇದ್ದೆ. ಯಾವುದೋ ಒಂದು ಕಾಲದಲ್ಲಿ 25 ಸಾವಿರ

ಕೆರೆಗಳು ಎಂದು ಹೇಳಿ ನಮ್ಮ ಬಜೆಟ್ ಭಾಷಣದಲ್ಲಿ ಬಂದಿತ್ತು. ಆದರೆ ಆ ಬಜೆಟ್ ಭಾಷಣ ಪ್ರಿಂಟ್ ಆಗತಕ್ಕಂಥ ಸಮಯದಲ್ಲಿ ಆ 25 ಸಾವಿರ ಕೆರೆಗಳಿಗೆ ಒಂದು ಸ್ಥೂಲವಾಗಿ ಮಾಡಬಹುದು. ಆದರೆ ನಮಗೆ ಬಂದಂಥ ಹಲವಾರು ಅಡ್ಡಿ ಆತಂಕಗಳು, ವಿಶೇಷವಾದಂಥ ಅಡ್ಡಿ ಆತಂಕ ಏನು ಎಂದು ಹೇಳಿದರೆ ಕೇಂದ್ರ ಸರ್ಕಾರದಿಂದ ಯಾವ ಪ್ರಮಾಣದ ಬೆಂಬಲವನ್ನು ನಾವು ನಿರೀಕ್ಷೆಯನ್ನು ಮಾಡಿದ್ದೆವೋ ಅದು ಬರಲಿಲ್ಲ. ಎರಡನೆಯದು, ಈ ದಕ್ಷಿಣ ಕರ್ನಾಟಕದಲ್ಲಿ ಕಾವೇರಿ ಜಲ ವಿವಾದದ ಕಾರಣ ತಮಿಳುನಾಡಿನವರು ಎತ್ತಿದಂಥ ಆಕ್ಷೇಪಣೆಯಿಂದ ಕೇಂದ್ರ ಸರ್ಕಾರದವರು ನಮಗೆ ನೀವು ಮುಂದುವರಿಯಬೇಡಿ ಹಾಗೆ ಎಂದು ಹೇಳಿದ್ದಾರೆ. ಅದಕ್ಕೆ ಪರ್ಯಾಯ ಆಲೋಚನೆಗಳನ್ನು ನಾವು ಮಾಡುತ್ತಿದ್ದೇವೆ. ಈಗ ರೈತ ಕಾಯಕ ಕೆರೆಗೆ ವಿಶೇಷವಾಗಿ ಹೆಚ್ಚು ಹಣ ಕೊಡಬೇಕು, ಅದೊಂದು ಒಳ್ಳೆಯ ಕಾರ್ಯಕ್ರಮ ಹಾಗೆ ಎಂದು ಹೇಳಿ ತಾವು ತಿಳಿಸಿದ್ದೀರಿ. ಅದನ್ನು ಸಂಪೂರ್ಣವಾಗಿ ಸರ್ಕಾರ ಒಪ್ಪುತ್ತದೆ. ನಮ್ಮ ಸಂಪನ್ಮೂಲಗಳ ಇತಿ ಮಿತಿಯನ್ನು ಗಮನಿಸಿ ನಾವು ಅದಕ್ಕೆ ವಿಶೇಷವಾದ ಗಮನವನ್ನು ಕೊಡುತ್ತೇವೆ.

ಅಧ್ಯಕ್ಷರು:- ಈಗ ಸೋಮಶೇಖರ್‌ರವರು. ಆಮೇಲೆ ರಾಜೇಂದ್ರ ವರ್ಮ ರವರು.

ಶ್ರೀ ರಾಜೇಂದ್ರ ವರ್ಮ:- ಮಾನ್ಯ ಅಧ್ಯಕ್ಷರೆ, ಇದು ಸರಿಯಲ್ಲ. ದಯವಿಟ್ಟು ಕ್ಷಮಿಸಬೇಕು. ಫ್ರಂಟ್ ಬೆಂಚ್‌ನಲ್ಲಿ ಕುಳಿತವರಿಗೆ ನೀವು ಪದೇ ಪದೇ ಅವಕಾಶ ಕೊಡುವುದು ಸರಿಯಲ್ಲ. ನಾವು ಮಾತನಾಡಬೇಕೆಂದು ಅಪೇಕ್ಷೆ ಇರುತ್ತದೆ.

ಅಧ್ಯಕ್ಷರು:- ಸೋಮಶೇಖರ್‌ರವರದು ಆದ ಮೇಲೆ ತಮ್ಮದೇ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಈ ಸಾಲಿನಲ್ಲಿ ಕುಳಿತಿರುವವರೆಲ್ಲಾ ಹಿಂದುಗಡೆ ಕುಳಿತುಕೊಳ್ಳುವುದಕ್ಕೆ ತಯಾರಿದ್ದೇವೆ. ಹಿಂದುಗಡೆ ಕುಳಿತಿರುವವರಿಗೆ ದಯವಿಟ್ಟು ತಾವು ಈ ಸೀಟುಗಳನ್ನು ಅಲಾಟ್ ಮಾಡಿ ಅವರನ್ನು ತಂದು ಕೂಡಿಸಿಬಿಡಿ. ಯಾವತ್ತು ನೋಡಿದರೂ ಇದೇನೇ. ನಾನು ಇದೇ ಕಾರಣಕ್ಕೋಸ್ಕರ ಇವತ್ತಿನ ದಿವಸ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೂ ಕೂಡ ಹೋಗಲಿಲ್ಲ. ಈ ಆಕ್ಷೇಪಣೆ ಬರುತ್ತದೆ ಎನ್ನುವ ಕಾರಣಕ್ಕೆ ನಾನು ಮಾತನಾಡುವುದಕ್ಕೂ ಹೋಗಲಿಲ್ಲ. ನಾವು ಇಷ್ಟೊಂದು ಸಹಕರಿಸಿಕೊಂಡು ಹೋಗುತ್ತಿದ್ದರೂ ಫ್ರಂಟ್ ಬೆಂಚಸ್ ಎಂದು ಹೇಳುತ್ತಿದ್ದಾರೆ ಏನು ಸ್ವಾಮಿ?

ಶ್ರೀ ಬಿ. ಸೋಮಶೇಖರ್:- ಮಾನ್ಯ ಅಧ್ಯಕ್ಷರೆ, ಈ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರತಕ್ಕಂಥ ಅಭಿವೃದ್ಧಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಾವೂ ಸಹ ಈ ಕಾವೇರಿ ಜಲಾನಯನ ಪ್ರದೇಶದೊಳಗಡೆ ಬರತಕ್ಕಂಥ ಶಾಸಕರು. ಅಲ್ಲಿ ನಾನ್ ಪ್ಲಾನ್‌ನಲ್ಲಿ ಹೆಚ್ಚಿಗೆ ಹಣ ಇಲ್ಲವೆಂದು ಹೇಳಿ ಈ ಕರ್ನಾಟಕ ನೀರಾವರಿ ನಿಗಮ ಎಂದು ಏನು ಹೇಳಿದ್ದಾರೆ, ಆ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರತಕ್ಕಂಥ ಕೆಲಸಗಳನ್ನು ಈ ಕರ್ನಾಟಕ ನೀರಾವರಿ ನಿಗಮಕ್ಕೆ ಸೇರಿಸುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಏಕೆಂದರೆ ನಾನ್ ಪ್ಲಾನ್‌ನಲ್ಲಿ ದುಡ್ಡಿಲ್ಲ. ಬೇರೆ ಕಡೆಯೆಲ್ಲಾ ಬಾಂಡ್ಸ್‌ಗಳ ಮುಖಾಂತರ ಬೇರೆ ಬೇರೆ ಕಡೆಯಿಂದ ಹಣವನ್ನು ತಂದು ಏನು ಅಭಿವೃದ್ಧಿ ಮಾಡುತ್ತಿದ್ದೀರಿ, ಅದೇ ರೀತಿ ಕಾವೇರಿ ಜಲಾನಯನ ಪ್ರದೇಶದಲ್ಲೂ ತಾವು ಇದನ್ನು ಸೇರಿಸುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಅದನ್ನು ಈ ಸಾರಿ ಅದಕ್ಕೆ ಅವಕಾಶ ಮಾಡಿಕೊಡುತ್ತೀರಾ ಎಂದು ತಮ್ಮಮುಖಾಂತರ ಕೇಳುತ್ತೇನೆ.

ಶ್ರೀ ರಾಜೇಂದ್ರ ವರ್ಮ:- ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆಯಲ್ಲಿ ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಅಲ್ಲಿ ಕಬ್ಬು ಅರೆಯುವಂಥ ಸಕ್ಕರೆ ಫ್ಯಾಕ್ಟರಿಗಳು ಕೇವಲ ಎರಡು ಇವೆ. ಕಬ್ಬು ಬೆಳೆ ಇವತ್ತು ಬಹಳಷ್ಟು ಇದೆ. ನೀರಿನ ಸಲುವಾಗಿ ಕಬ್ಬನ್ನು ಇಡುವುದಕ್ಕೆ ಬರುವುದಿಲ್ಲ. ಆದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಈ ಜಿಲ್ಲೆಯ ರೈತರ ಪರವಾಗಿ ಆ ಬ್ಯಾನ್ ಮಾಡಿರುವುದನ್ನು ಲಿಫ್ಟ್ ಮಾಡಿ ಅದನ್ನು ಹೊರ ರಾಜ್ಯಕ್ಕೆ ಕಳುಹಿಸುವ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಎರಡನೆಯದು, ನಾವು ಈ ಅಧಿವೇಶನ ಮುಗಿದ ಮೇಲೆ ಹಳ್ಳಿಗಳಿಗೆ ಹೋಗಬೇಕು. ಹಳ್ಳಿಗಳಲ್ಲಿ ಜನರು ಕುಡಿಯುವ ನೀರಿನ ಸಲುವಾಗಿ ಬಹಳಷ್ಟು ಕಷ್ಟದಲ್ಲಿದ್ದಾರೆ. ಈಗ ನಮಗೆ ಎಂಎಲ್ಎ ನಿಧಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನೂ ಹೇಳಲಿಲ್ಲ. ಅದಕ್ಕೇನಾದರೂ ಅವಕಾಶ ಮಾಡಿಕೊಟ್ಟಲ್ಲಿ ನಾವು ಅಲ್ಪ ಸ್ವಲ್ಪ ದುಡ್ಡನ್ನು ಕೊಟ್ಟು ನೀರಿನ ವ್ಯವಸ್ಥೆ ಮಾಡಬೇಕೆಂದು ಹೇಳಿ ನಮ್ಮದು ಆಸೆ ಇದೆ. ಆದಕ್ಕಾಗಿ ಉತ್ತರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಂದ ನಿರೀಕ್ಷೆ ಮಾಡುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ಕಬ್ಬು ಜಾಸ್ತಿ ಬೆಳೆಯುತ್ತಾರೆ ಎನ್ನತಕ್ಕಂಥದ್ದು ವಸ್ತು ಸ್ಥಿತಿ ನಿರೂಪಣೆ. ಅಲ್ಲಿ ಎರಡು ಕಾರ್ಖಾನೆಗಳಿವೆ, ಮೂರನೇ ಕಾರ್ಖಾನೆ ಕಟ್ಟಲ್ಪಡುತ್ತಿದೆ, ಈ ಯಾವ ಕಾರಣಕ್ಕೋಸ್ಕರ ಈ ದಿಗ್ಬಂಧನ ಕಬ್ಬಿನ ಸರಬರಾಜಿನ ಬಗ್ಗೆ ನಡೆಯಿತು ಎನ್ನತಕ್ಕದ್ದನ್ನು ಕೂಲಂಕಷವಾಗಿ ಪರಿಶೀಲಿಸಿ ಅನಂತರ ರೈತರ ಪರವಾದ ಒಂದು ನಿರ್ಧಾರವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಇದು ಪ್ರತಿ ವರ್ಷವೂ ಹೀಗೆ ಆಗುತ್ತಿದೆ. ಕಳೆದ ವಾರ ಕೂಡ ಇದರ ಬಗ್ಗೆ ತಮ್ಮ ಗಮನಕ್ಕೆ ತೆಗೆದುಕೊಂಡು ಬಂದಿದ್ದೇವೆ. ಆದರೆ ಇದುವರೆಗೂ ಆಗಿಲ್ಲ.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಅಧ್ಯಕ್ಷರೇ, ಹೌದು.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್:- ಮಾನ್ಯ ಅಧ್ಯಕ್ಷರೆ, ವಿಮೆ ಹಣವನ್ನು ಸರ್ಕಾರ ಕಟ್ಟಿಲ್ಲ ಎನ್ನತಕ್ಕದ್ದು. ಈಗಾಗಲೇ ಕಳೆದ ಬಾರಿಯಲ್ಲಿ ಏನು ವಿಮೆಯನ್ನು ಮಾಡಿದ್ದರು, ಅವರಿಗೆ ಸಂಪೂರ್ಣವಾದ ಹಣವನ್ನು ಕೊಟ್ಟಿಲ್ಲ ಎನ್ನುವುದು ಒಂದಾದರೆ, ಕಳೆದ ವರ್ಷ ಈಗ ರೈತರಿಗೆ ಬೀಜ ಹಾಕತಕ್ಕಂಥ ಸಮಯ ಬಂದಿದೆ. ಬೆಳೆ ವಿಮೆಯನ್ನು ಕೊಡುವುದನ್ನು ನಿರೀಕ್ಷೆ ಮಾಡುತ್ತಿದ್ದಾರೆ. ಬೆಳೆ ವಿಮೆ ಬಗ್ಗೆ ದಯಮಾಡಿ ಅದರ ಬಗ್ಗೆ ತಾವೇನಾದರೂ ಹೇಳಿದರೆ ಒಳ್ಳೆಯದೆಂದು ನನಗೆ ಅನಿಸುತ್ತದೆ. ಏಕೆಂದರೆ ನೀವೇ ಬೆಳೆ ವಿಮೆ ಮಾಡಿ ಎಂದು ಹೇಳಿ ಪ್ರಚಾರ ಮಾಡಿದ್ದೀರಿ. ಅವರು ಹಣವನ್ನು ಕಟ್ಟಿದ್ದಾರೆ. ಆದರೆ ಬೆಳೆ ವಿಮೆಗೆ ಮುಂಗಾರು ಸಿಗಲಿಲ್ಲವೆಂದರೆ ಬೀಜ ಹಾಕುವುದಕ್ಕೆ ಅವರಿಗೆ ತೊಂದರೆಯಾಗುತ್ತದೆ. ದಯಮಾಡಿ ತಮ್ಮ ಭಾಗದಿಂದ ಕಟ್ಟತಕ್ಕ ಹಣವನ್ನು ಕಟ್ಟಿದರೆ ಕೇಂದ್ರ ಸರ್ಕಾರದವರು ಕೊಡತಕ್ಕ ಹಣವನ್ನು ಅವರು ಯಾವಾಗ ಬೇಕಾದರೂ ನೀವು ಸರ್ಕಾರದವರು ಕಟ್ಟಲಿ, ನಾವು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಿರುವುದರಿಂದ ತಾವು ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನು ಹೇಳಬೇಕು.

ಅಧ್ಯಕ್ಷರು:- ಆಯಿತು ಬಿಡಿ.

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಕಾಂಪ್ಲಿಮೆಂಟ್ ಮಾಡಬೇಕು. ಕಾರಣವೇನೆಂದರೆ ನಿನ್ನೆ ದಿವಸವೇ ನಾನು ಭಾಷಣ ಶುರು

ಮಾಡುವುದಕ್ಕೆ ಮುಂಚೆ ತಮ್ಮ ಮುಂದೆ ಹೇಳಿದೆ. ನಾಳೆ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಎಲ್ಲಾ ವಿಚಾರವನ್ನು ಸಮಗ್ರವಾಗಿ ವಿಚಾರವನ್ನು ಹೇಳಿ ಯಾವುದೇ ವಿಷಯದ ಬಗ್ಗೆ ಪ್ರಸ್ತಾವವನ್ನು ಮಾಡಿದ್ದೇವೆ, ಅದಕ್ಕೆ ಪರ್ಟಿಕ್ಯುಲರ್ ಆಗಿ ಉತ್ತರ ಕೊಡದೇ ಇರತಕ್ಕ ವ್ಯವಸ್ಥೆಗಳಾಗುತ್ತದೆ. ಹಾಗಾಗಿ ಏನೂ ಸಮಸ್ಯೆಯಾಗುವುದಿಲ್ಲ ಎಂದು ನಿಮ್ಮ ಮುಂದೆ ಹೇಳಿದ್ದೆ. ಅದು ಯಶಸ್ವಿಯಾಗಿ ಆಗಿದೆ. ಅದು ಪ್ರಶ್ನೆ.

ಅಧ್ಯಕ್ಷರು:- ನಿಮಗೆ ಏನು ಕ್ಲಾರಿಫಿಕೇಷನ್ ಬೇಕೋ ಅದನ್ನು ಕೇಳಿ.

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೆ, ಅಲ್ಲ, ಏನು ಉತ್ತರ ಬಂದಿಲ್ಲ ಎಂದು ಹೇಳಬೇಕಾಗಿತ್ತಲ್ಲಾ, ಅದಕ್ಕೋಸ್ಕರ. ಇಲ್ಲಿ ಪ್ರಮುಖವಾಗಿ ನಾನು ನಿನ್ನೆ ಪ್ರಸ್ತಾಪ ಮಾಡುವಾಗ ಒಂದು ವಿಚಾರವನ್ನು ಮತ್ತೊಂದು ಬಾರಿಗೆ ಮುಖ್ಯಮಂತ್ರಿಗಳು ಹೇಳಿದರು. ಅದಕ್ಕೆ ನಾನು ಸಂತೋಷಪಡುತ್ತೇನೆ. ರಿಫಾರ್ಮ್ಸ್‌ನ್ನು ಏನು ತರಲಿಕ್ಕೆ ಹೋಗಿದ್ದೇವೆ, ಪೂರ್ಣವಾಗಿ ಯಶಸ್ವಿಯಾಗಿಲ್ಲವೆನ್ನುವ ಮಾತನ್ನು ಹೇಳಿದಿರಿ. ನಿಜವಾದ ವಿಚಾರವನ್ನು ಇಲ್ಲಿ ಸಭೆಯ ಮುಂದೆ ಹೇಳಿದ್ದಾರೆ. ಅದಕ್ಕೆ ನಾನು ಪರಿಹಾರ ಮಾಡುವಂಥದ್ದು ಅವರದ್ದು ಮಾತ್ರವಲ್ಲ. ನಮ್ಮದೂ ಕೂಡ ಕರ್ತವ್ಯ ಎನ್ನುವ ಭಾವನೆ ನನಗಿದೆ. ಇಲ್ಲಿ ರಿಫಾರ್ಮ್ಸ್‌ಗೋಸ್ಕರವಾಗಿ ಸರ್ಕಾರದವರು ಖರ್ಚು ಮಾಡಿದ ಹಣದ ಬಗ್ಗೆ ನಾನು ವಿಚಾರವನ್ನು ಹೇಳಿದೆ. ಫೈನಾನ್ಷಿಯಲ್ ಡಿಸಿಪ್ಲಿನ್ ಇಲ್ಲವೆಂದು ಹೇಳುವುದರ ಜೊತೆಯಲ್ಲಿ ಕಳೆದ ಬಾರಿ 28 ಪರ್‌ಸೆಂಟ್ ಒಂದು ಟ್ರಾನ್ಸ್‌ಮಿಷನ್ ಡಿಸ್ಟ್ರಿಬ್ಯೂಷನ್ ಲಾಸ್ ಇದ್ದದ್ದು. ಎಸ್ಕಾಂಗಳು ಆದ ನಂತರದಲ್ಲಿ 34.8 ಪರ್‌ಸೆಂಟ್ ಅಂದರೆ ಡಿಸ್ಟ್ರಿಬ್ಯೂಷನ್ ಲಾಸ್ 25 ಪರ್‌ಸೆಂಟ್, ಮತ್ತು ಟ್ರಾನ್ಸ್‌ಮಿಷನ್ ಲಾಸ್ 9 ಪರ್‌ಸೆಂಟ್. ಎರಡು ಸೇರಿ 34.9 ಪರ್‌ಸೆಂಟ್ ಟ್ರಾನ್ಸ್‌ಮಿಷನ್ ಡಿಸ್ಟ್ರಿಬ್ಯೂಷನ್ ಲಾಸಸ್ ಆಗಿದೆ. 1911 ಕೋಟಿ ರೂಪಾಯಿಗಳು ಇದರಿಂದ ಲಾಸ್ ಆಗಿದೆ ಎನ್ನುವ ವಿಚಾರ ಆಘಾತ ತಂದಿದೆ ಎಂದು ಹೇಳಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರದ ಕ್ರಮವೇನು ಎಂದು ಕೇಳಿದ್ದೆ. ನನಗೇನೂ ವಿಚಾರ ಬಂದಿಲ್ಲ. ಎರಡನೆಯದು ಪ್ರಮುಖವಾಗಿ ಮಾಸ್ ಮೀಟರೈಜೇಷನ್‌ನಲ್ಲಿ 840 ಕೋಟಿ ರೂಪಾಯಿಗಳು ಮತ್ತು ಎಪಿಡಿಪಿ ಪ್ರೋಗ್ರಾಮ್ ರಾಜ್ಯದಲ್ಲೇ, ದೇಶದಲ್ಲೇ ಮೊದಲನೇ ಪ್ರೋಗ್ರಾಮ್‌ನ್ನು ತಾವು ತಂದಿರಿ. ಅದನ್ನು ಮೈಸೂರು ಜೋನ್‌ನಲ್ಲಿ ತಂದಿರಿ. 192 ಕೋಟಿ ರೂಪಾಯಿ ಪ್ರೋಗ್ರಾಮ್. ಟೆಂಡರ್‌ನ್ನು ತಾವು ಕಾಲ್‌ಫಾರ್ ಮಾಡದೆ ಟ್ರಾನ್ಸ್‌ಫರೆನ್ಸಿ ಆಕ್ಟ್‌ನಲ್ಲೂ ಕೂಡ ವಯಲೇಷನ್ ಆಗಿ 192 ಕೋಟಿ ರೂಪಾಯಿಗಳ ಕೆಲಸವನ್ನು ಒಂದು ಕಡೆಗೆ ಎಂಟ್ರಸ್ಟ್ ಮಾಡಿ ಖಾಸಗಿ ಇಬ್ಬರು ವ್ಯಕ್ತಿಗಳಿಗೆ ಕೊಟ್ಟಿರಿ. ಒಂದು ಸಂತೋಷ. ತಾವು ಹಣ ಕೊಟ್ಟಿಲ್ಲ. ಏಕೆಂದರೆ ಕ್ವಾಲಿಟಿ ವರ್ಕ್ ಆಗಿಲ್ಲವೆಂದು ಹೇಳಿ ತಾನು ತಡೆಯನ್ನು ಮಾಡಿದ್ದೀರಿ, ಅಟ್‌ಲೀಸ್ಟ್. ಅಂದರೆ ಈ ಕೆಲಸಗಳಿಗೂ ಕೂಡ ಬಂದಂಥ ಹಣ ಈ ರೀತಿ ಮಿಸ್‌ಯೂಸ್ ಆಗುವಂಥ ವ್ಯವಸ್ಥೆಗಳಾಗಿದೆ ಎಂದು ನಾನು ಪರ್ಟಿಕ್ಯುಲರ್ ಆಗಿ ಈ ವಿಚಾರವನ್ನು ತಮ್ಮ ಮುಂದೆ ಇಟ್ಟೆ ಇದರ ಜೊತೆಯಲ್ಲಿ ಇನ್ನೊಂದು ಪ್ರಮುಖವಾಗಿ ಈ ಸಲದ ಒಂದು ವರದಿಯನ್ನು ಕೊಡುವಾಗ ಸರ್ಕಾರ ಹೇಳಿದೆ, 1 ಲಕ್ಷದ 25 ಸಾವಿರ ಕನ್‌ಸ್ಯೂಮರ್ಸ್ ಈ ರಾಜ್ಯದಲ್ಲಿದ್ದು 17 ಲಕ್ಷ ಕನ್‌ಸ್ಯೂಮರ್ಸ್ ಮಿಸ್ ಆಗಿದ್ದಾರೆಂದು ಇದೆ.

ಅಧ್ಯಕ್ಷರು:- ಒಬ್ಬೊಬ್ಬರು ಐದೈದು ಪ್ರಶ್ನೆಗಳನ್ನು ಕೇಳಿದರೆ ಡೀಟೈಲ್ಸ್ ಎಲ್ಲಿರುತ್ತೆ? ಜನರಲ್ ನೇಚರ್ ಆಫ್ ಕ್ವೆಶ್ಚನ್‌ಗಳನ್ನು ಕೇಳಿ. ಎಷ್ಟು ಮೀಟರ್‌ಗಳಿವೆ? ಯಾವಾಗ ಚೆಕ್ ಮಾಡಿದಿರಿ ಅಂದರೆ ಹೇಗೆ ಉತ್ತರ ಕೊಡಲು ಆಗುತ್ತದೆ?

ಶ್ರೀ ಎ. ರಾಮದಾಸ್:- ಅದನ್ನು ನಾನು ಕೇಳಲಿಲ್ಲ ಸಾರ್. ಅದು ಸರಿ ಮಾಡುವ ದೃಷ್ಟಿಯಲ್ಲಿ ಏನಾಗಿದೆ ಎಂದರೆ.

ಅಧ್ಯಕ್ಷರು:- ಮ್ಯಾಕ್ಸಿಮಮ್ ಒಂದು-ಎರಡು ಕೇಳಿ.

ಶ್ರೀ ಎ. ರಾಮದಾಸ್:- 3 ಎಂಎಂಡಿಗೆ ಸಂಬಂಧಪಟ್ಟ ಹಾಗೆ ಇವತ್ತು ಆಗಲೇ ಕೆಇಆರ್‌ಸಿ ಯಲ್ಲಿ ಅಜ್ಞಯಾಗಿದೆ, 3 ಎಂಎಂಡಿ ಬಂದು 2 ಎಂಎಂಡಿ ಮಾತ್ರ ಇಟ್ಟುಕೊಂಡು 1 ಎಂಎಂಡಿ ಏನು ಇದೆ, ಆ ಹಣವನ್ನು ಆ ಕನ್‌ಸ್ಯೂಮರ್ಸ್‌ಗಳಿಗೇ ಕೊಡಬೇಕೆನ್ನುವುದರ ಬಗ್ಗೆ ಒಂದು ವಿಚಾರವಾಗಿತ್ತು. ಅದು ತಮ್ಮ ಮುಂದೆ ವಿಚಾರವನ್ನು ಹೇಳಿದ್ದೆ. ಅಂದರೆ 3 ಎಂಎಂಡಿ ಬದಲು 2 ಎಂಎಂಡಿ ಮಾತ್ರ ಉಳಿಸಿಕೊಳ್ಳಬೇಕು ಎಂದು ಹೇಳಿದ್ದೆ. ಸರ್ಕಾರದ ನಿಲುವು ಏನು? ಇದರ ಬಗ್ಗೆ ನ್ಯಾಯಾಲಯಕ್ಕೆ ಏನಾದರೂ ಹೋಗುತ್ತಿದ್ದೀರಾ ಎಂಬುದನ್ನು ಹೇಳಬೇಕು.

ಅಧ್ಯಕ್ಷರು:- ನಮ್ಮ ಮುಂದೆ ಇನ್ನೂ 10 ನಿಮಿಷ ಇದೆ, ಅಷ್ಟರಲ್ಲಿ ಮುಗಿಸಬೇಕು.

ಶ್ರೀ ಎ.ಎಸ್. ಗುರುಸ್ವಾಮಿ:- ಮಾನ್ಯ ಅಧ್ಯಕ್ಷರೆ, ಸ್ಮಾಲ್ ಕ್ಲಾರಿಫಿಕೇಶನ್ ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಎರಡು ವಿಚಾರದಲ್ಲಿ ಕ್ಲಾರಿಫಿಕೇಶನ್ ಕೇಳಲು ಇಚ್ಛಿಪಡುತ್ತೇನೆ. ನಾನು ಭಾಷಣ ಮಾಡಿದಂತಹ ಸಂದರ್ಭದಲ್ಲಿ ಎರಡು ಪ್ರಶ್ನೆಗಳನ್ನು ಸಭೆಯ ಮುಂದೆ ಇಟ್ಟಿದ್ದೆ. ಒಂದು ಆಡಳಿತ ಸುಧಾರಣೆ ಬಗ್ಗೆ ನಮಗೆ ಅತ್ಯುತ್ತಮವಾದ ವರದಿ ಸರ್ಕಾರದ ಮುಂದೆ ಇದೆ. ಇದರ ಬಗ್ಗೆ ಸೀರಿಯಸ್ ಆಗಿ ಆ ಸುಧಾರಣೆಯನ್ನು ಯಾವಾಗ ತರಲಿಕ್ಕೆ ಸರ್ಕಾರ ಮುಂದೆ ಬರುತ್ತದೆ? ಇದು ಬಹಳ ಪ್ರಮುಖವಾದಂತಹದು, ಇದು ಜನಗಳ ಮೇಲೆ ಬೀರತಕ್ಕ ಪ್ರಭಾವ ಇದರಲ್ಲಿ ಇದೆ. ಇದನ್ನು ಎಫೆಕ್ಟೀವ್ ಆಗಿ ಆ ಸುಧಾರಣೆಯನ್ನು ಯಾವಾಗ ತರುತ್ತೀರಿ ಎನ್ನತಕ್ಕದ್ದು ಒಂದನೆಯದು. ಎರಡನೆಯದು ಈ ಎರಡು ಪರ್ಸೆಂಟ್ ಜನ ನಮ್ಮ 98 ಪರ್ಸೆಂಟ್ ಜನದ ಮೇಲೆ ಆಳತಕ್ಕ ಪರಿಸ್ಥಿತಿ. ಆ ಎರಡು ಪರ್ಸೆಂಟ್‌ನವರಿಗೆ 100ಕ್ಕೆ 60 ಪರ್ಸೆಂಟ್ ನಮ್ಮ ಸ್ಟೇಟ್ ಬಜೆಟ್‌ನಲ್ಲಿ ಖರ್ಚಾಗತಕ್ಕಂಥ ಏನು ಒಂದು ಅನ್‌ಪ್ರೊಡಕ್ಟೀವ್ ನಾನ್ ಪ್ಲಾನ್ ಸ್ಕೀಮ್‌ನಲ್ಲಿ ಖರ್ಚಾಗುತ್ತಿದೆ. ಇದರ ಬಗ್ಗೆ ಸರ್ಕಾರ ಕಿಂಚಿತ್ ಆದರೂ ಸೀರಿಯಸ್ ಆಗಿ ಯೋಚನೆ ಮಾಡಿದೆಯೇ ಎನ್ನತಕ್ಕದ್ದನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:- ಆಡಳಿತ ಸುಧಾರಣೆಗಳ ಬಗ್ಗೆ ಈಗ ಒಂದು ಆಯೋಗವನ್ನು ಏರ್ಪಾಡು ಮಾಡಿದ ತಕ್ಷಣ ಆ ಆಯೋಗ ಮಾಡತಕ್ಕ ಎಲ್ಲಾ ಶಿಫಾರಸ್ಸುಗಳನ್ನು ಕೂಡ ಒಂದು ವರ್ಷದಲ್ಲಿ ಜಾರಿಗೆ ತನ್ನಿ ಎಂದು ಹೇಳಿದರೆ, ಸಾಧ್ಯ ಇಲ್ಲದೇ ಇರತಕ್ಕ ವಿಚಾರ. Over a period of time ಈ ಎಲ್ಲಾ ಸುಧಾರಣೆಗಳನ್ನೂ ಕೂಡ ಹಂತ ಹಂತವಾಗಿ ನಾವು ಜಾರಿಗೆ ತರಲಿಕ್ಕೆ ಏನು ಅಡ್ಡಿ ಆತಂಕಗಳು ಇವೆ, ಆ ಅಡ್ಡಿ ಆತಂಕಗಳನ್ನು ನಿವಾರಣೆ ಮಾಡಲಿಕ್ಕೆ ನಾವು ಪ್ರಯತ್ನಗಳನ್ನು ಮುಂದುವರಿಸುತ್ತಿದ್ದೇವೆ. ಅದು ಆಡಳಿತ ಸುಧಾರಣೆ ಇರಬಹುದು, ತೆರಿಗೆ ಸುಧಾರಣೆ ಇರಬಹುದು. ತೆರಿಗೆ ಸುಧಾರಣೆ ಬಗ್ಗೆ ಮಾನ್ಯ ಸದಸ್ಯರೊಬ್ಬರು ಭಾಷಣ ಮಾಡುತ್ತಾ ಏನು ಮಾಡಿದಿರಿ ಹೇಳಿ ಎಂದು ಹೇಳಿದರು. ತೆರಿಗೆ ಸುಧಾರಣೆ ಆಯೋಗದವರು ಏನು ಶಿಫಾರಸ್ಸುಗಳನ್ನು ಮಾಡಿದ್ದಾರೆ, ಸಲಹೆಗಳನ್ನು ಮಾಡಿದ್ದಾರೆ. ಅವುಗಳನ್ನು ನಾವು ನಮ್ಮ ಬಜೆಟ್ ಮೇಕಿಂಗ್ ಸಂದರ್ಭದಲ್ಲಿ ಅವುಗಳೆಲ್ಲವನ್ನೂ ಅಳವಡಿಸಿ ಅದರಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಅಳವಡಿಸಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಆದರೆ ಒಟ್ಟಿಗೆ ಎಲ್ಲವನ್ನೂ ಇಂಪ್ಲಿಮೆಂಟ್ ಮಾಡತಕ್ಕದ್ದು, ಅದರ ಬಗ್ಗೆ ಎಕ್ಸ್‌ಪೆಕ್ಟ್ ಮಾಡತಕ್ಕದ್ದೂ ಕೂಡ ಬಹಳ ಅನ್‌ನ್ಯಾಚುರಲ್

ಹಾಗೆಂದು ತಿಳಿಯುತ್ತೇನೆ. ಪವರ್ ಬಗ್ಗೆ ನಿನ್ನೆ ನಿಮ್ಮ ಭಾಷಣವನ್ನು ನೋಡಿದ್ದೇನೆ. ನಿಮ್ಮ ಭಾಷಣದಲ್ಲಿ ತಣ್ಣೀರ್ ಬಾವಿ ಮತ್ತಿತರ ವಿಚಾರಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ತಣ್ಣೀರ್ ಬಾವಿ ಬಗ್ಗೆ ರೈಟ್ ನೌ ಆರ್ಬಿಟ್ರೇಷನ್ ನಡೆಯುತ್ತಿದೆ. ಹೈಕೋರ್ಟ್ ತೀರ್ಮಾನ ಮಾಡಿತ್ತು. ಅನಂತರ ತೀರ್ಮಾನ ಆಯಿತು. ಅನಂತರ ನಾವು ವಿದ್ಯುಚ್ಛಕ್ತಿಯನ್ನು ಕೊಳ್ಳಲಿಕ್ಕೆ ಪ್ರಾರಂಭ ಮಾಡಿದ್ದೇವೆ. 220 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಅವರು ನಮಗೆ ಕೊಡುತ್ತಿದ್ದಾರೆ. ಅದನ್ನು ಯಾವುದೋ ಒಂದು ನಿರ್ದಿಷ್ಟವಾದಂತಹ ಪ್ರೈಸ್‌ನಲ್ಲಿ ನಾವು ಕೊಳ್ಳುತ್ತಿದ್ದೇವೆ. ಇದು ಒದಗಿ ಬಂದಿರತಕ್ಕ ಅನಿವಾರ್ಯ ಹಾಗೆ ಎಂದು ಹೇಳಿ ನಾನು ತಿಳಿಯುತ್ತೇನೆ. ಎರಡನೆಯದು, ನೀವು ಹೇಳಿದಂತಹ ಪಾಯಿಂಟನ್ನು ನಾನು ಕನ್ಸೀಡ್ ಮಾಡುತ್ತೇನೆ. ನಿಮ್ಮ ಹೆಸರು ಹೇಳಿ ಕನ್ಸೀಡ್ ಮಾಡಿದೆ. ಅದೇನೆಂದರೆ ಈ ಟ್ರಾನ್ಸ್ ಮಿಷನ್ ಲಾಸಸ್ ಏನು ಇದೆ, ಯಾವ ಸುಧಾರಣೆಯನ್ನು ತರಬೇಕೆಂದು ನಾವು ಪ್ರಯತ್ನ ಪಟ್ಟೆವೋ ಆ ಸುಧಾರಣೆಗಳು ಯಾವ ರಾಜ್ಯದಲ್ಲೂ ಕೂಡ ಆಗಿಲ್ಲ. ಒರಿಸ್ಸಾ ರಾಜ್ಯವನ್ನೂ ಒಳಗೊಂಡಂತೆ ಯಾವ ರಾಜ್ಯಗಳೂ ಕೂಡ ಆ ಸುಧಾರಣೆಯಲ್ಲಿ ಯಶಸ್ವಿನ ಹಾದಿಯನ್ನು ಕಂಡು ಹಿಡಿಯಲಿಕ್ಕೆ ಇದುವರೆಗೂ ಸಾಧ್ಯವಾಗಿಲ್ಲ. ಆದರೆ ನಮ್ಮ ಉದ್ದೇಶ ಏನು ಅಂದರೆ ಈ ಟ್ರಾನ್ಸಮಿಷನ್ ಲಾಸಸ್ ಅನ್ನು ಪ್ರೋಗ್ರೆಸೀವ್ ಆಗಿ ಕಡಿಮೆ ಮಾಡಬೇಕು. ಕಡಿಮೆ ಮಾಡತಕ್ಕದ್ದು ನಾವು ಹಾಕಿಕೊಂಡಿರತಕ್ಕಂಥಗುರಿ. ಆ ಗುರಿಯತ್ತ ನಾವು ಕೆಲವೊಂದು ವೇಳೆ ವೇಗದಲ್ಲಿ ಹೋಗುತ್ತೇನೆ. ಅಕ್ಸಿಲರೇಟೆಡ್ ಪವರ್ ಡೆವೆಲಪ್‌ಮೆಂಟ್ ಪ್ರಾಜೆಕ್ಟ್ ವಿಚಾರ ತಾವು ಹೇಳಿದ್ದೀರಿ. ಕರ್ನಾಟಕ ರಾಜ್ಯ ಮೊಟ್ಟಮೊದಲನೆಯ ರಾಜ್ಯ ಅಕ್ಸಿಲರೇಟೆಡ್ ಪವರ್ ಡೆವಲಪ್‌ಮೆಂಟ್ ಪ್ರಾಜೆಕ್ಟ್‌ನ್ನು ಕೇಂದ್ರ ಸರ್ಕಾರದ ಬೆನಿಫಿಟ್ಸ್ ಕೊಡುತ್ತಾರೆ, ಉಪಯೋಗಿಸಲಿಕ್ಕೆ, ಅಳವಡಿಸಲಿಕ್ಕೆ. ಇದಕ್ಕೆ ಕೇಂದ್ರ ಸರ್ಕಾರದ ಬೆನಿಫಿಟ್ಸ್ ಸಿಗುತ್ತದೆ. ಮೊನ್ನೆ ತಾನೇ ಕೇಂದ್ರ ಸರ್ಕಾರದ ಎನರ್ಜಿ ಸೆಕ್ರೆಟರಿಯವರು ಬೆಂಗಳೂರಿಗೆ ಬಂದಿದ್ದರು. ನಾವು ಎನರ್ಜಿಯ ಎಲ್ಲಾ ವಿಚಾರಗಳನ್ನೂ ಕೂಡ ಕೂಲಂಕಷವಾಗಿ ರಿವ್ಯೂ ಮಾಡಿದ್ದೇವೆ. ಈ ಅಕ್ಸಿಲರೇಟೆಡ್ ಪವರ್ ಡೆವಲಪ್‌ಮೆಂಟ್ ಪ್ರಾಜೆಕ್ಟ್‌ನಲ್ಲಿ ಈಗಾಗಲೇ ಏನು ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ, ಈ ನಿರ್ಧಾರಗಳು ಎಲ್ಲವೂ ಕೇಂದ್ರ ಸರ್ಕಾರದವರ ಪೂರ್ಣ ಗಮನಕ್ಕೆ ಬಂದು, ಆ ನಂತರ ತೆಗೆದುಕೊಂಡಿರತಕ್ಕ ನಿರ್ಧಾರಗಳು. ಅದರಲ್ಲಿ ಏನಾದರೂ ಲೋಪದೋಷಗಳು ಆಗಿದೆ ಎಂದು ಹೇಳತಕ್ಕದ್ದು ತಮ್ಮ ಇರಾದೆ ಆದರೆ, ತಮ್ಮ ಉದ್ದೇಶವಾಗಿದ್ದರೆ ಅದನ್ನು ಖಂಡಿತವಾಗಿಯೂ ನಾವು ವಿಚಾರಿಸುತ್ತೇವೆ.

ಶ್ರೀ ಎ. ರಾಮದಾಸ್:- 3 ಎಂಎಂಡಿ ಬಗ್ಗೆ ಹೇಳಲಿಲ್ಲ.

ಅಧ್ಯಕ್ಷರು:- ಮಾನ್ಯ ಯೋಗೀಶ್ ಭಟರು, ರೇವುನಾಯಕ್ ಬೆಳಮನಿ, ಆ ಮೇಲೆ ಸುಬ್ಬಾರೆಡ್ಡಿಯವರು ಕೇಳಿ ಒಬ್ಬೊಬ್ಬರು ಐದು ಪ್ರಶ್ನೆ ಕೇಳಿದರೆ ಹೇಗೆ? ಅವರು ಉತ್ತರ ಹೇಳುವುದಕ್ಕೆ ಸಾಧ್ಯವಾಗುತ್ತದೆ ಹೇಳಿ. ಎಷ್ಟು ಜನ ಇದ್ದಾರೆ, ಅದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಾನು 1.30ಕ್ಕೆ ಕ್ಲೋಸ್ ಮಾಡುತ್ತೇನೆ.

ಶ್ರೀ ಎ. ರಾಮದಾಸ್:- 3 ಎಂಎಂಡಿ ಬಗ್ಗೆ ರಾಜ್ಯ ಸರ್ಕಾರದ ನಿಲುವೇನು ಎಂದು ನಾನು ಕೇಳಿದ್ದೆ.

ಶ್ರೀ ಎನ್. ಯೋಗೀಶ್ ಭಟ್:- ಮಾನ್ಯ ಅಧ್ಯಕ್ಷರೆ, ಮಂಗಳೂರು ರೈಲ್ವೆ ಹಾಸನ ಇದು ಬ್ರಾಡ್‌ಗೇಜ್ ವಿಷಯ.

ಅಧ್ಯಕ್ಷರು:- ಅದರ ಬಗ್ಗೆ ಹೇಳಿದ್ದಾರಲ್ಲಾ. ಆಗಲೇ ಹೇಳಿದ್ದಾರೆ. ಏಕೆ ರಿಪೀಟ್ ಮಾಡುತ್ತೀರಿ?

ಶ್ರೀ ಎನ್. ಯೋಗೀಶ್ ಭಟ್:- 26 ಪರ್ಸೆಂಟ್

ಅಧ್ಯಕ್ಷರು:- ನೋ, ನಾನು ಅಕ್ಸೆಪ್ಟ್ ಮಾಡಿಕೊಳ್ಳುವುದಿಲ್ಲ. ಮಂಗಳೂರು ಬೆಂಗಳೂರು ರೈಲ್ವೆ ಬಗ್ಗೆ ಹೇಳಿದ್ದಾರೆ. ಮಂಗಳೂರು-ಹಾಸನ ವಿಚಾರ ಹೇಳಿದ್ದಾರೆ.

ಶ್ರೀ ಎನ್. ಯೋಗೀಶ್ ಭಟ್:- ಎರಡು ವರ್ಷಗಳ ಘೋಷಣೆ ಇದೆ.

ಅಧ್ಯಕ್ಷರು:- ಅದು ಬೇಕಾಗಿಲ್ಲ, ಮತ್ತೆ ಅದಕ್ಕೆ ಸಪ್ಲಿಮೆಂಟರಿ ಬೇಡಿ. ಬೇರೆ ಏನಾದರೂ ಕೇಳುವುದಿದ್ದರೆ ಕೇಳಿ. ದಯವಿಟ್ಟು ಬೇರೆ ಕೇಳಿ. ನಾನು ಬೇರೆಯವರನ್ನು ಕರೆಯುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್:- ಕನಿಷ್ಟ ಈ ಬಜೆಟ್‌ನಲ್ಲಾದರೂ ಬರಲಿ ಎಂದು ಆಸೆಯಿಂದ ಕೇಳುತ್ತಿದ್ದೇನೆ. ಎರಡನೆಯದಾಗಿ ಸಣ್ಣ ಕೈಗಾರಿಕೆಗೆ ಸಂಬಂಧಪಟ್ಟಿದ್ದು, ಒನ್ ಟೈಮ್ ಸೆಟಲ್‌ಮೆಂಟಿಗೆ ಸಂಬಂಧಪಟ್ಟದ್ದು ಮತ್ತು ಟ್ಯಾರಿಫ್ ರೇಟ್. ಕನಿಷ್ಟ ಆನ್ ಪಾರ್ ವಿತ್ ಅದರ್ಸ್ ಸ್ಟೇಟ್ ವಿಧಿಸುವ ರೀತಿಯಲ್ಲಿ ಒಂದು ಯೂನಿಟ್‌ಗೆ ಮತ್ತು ಇದಕ್ಕೆ ಸಂಬಂಧಪಟ್ಟ ಒಂದು ಎಕ್ಸಿಟ್ ಪಾಲಿಸಿ ಬಗ್ಗೆ ಮತ್ತು ಸಬ್ಸಿಡಿಯನ್ನು ನಾಲ್ಕು ನೂರು ಕೋಟಿ ರೂಪಾಯಿ ಬಿಡುಗಡೆ ಮಾಡುವ ವಿಚಾರದ ಬಗ್ಗೆ ಹೇಳಿದರೆ ಒಳ್ಳೆಯದು. ಸಬ್ಸಿಡಿ 400 ಕೋಟಿ ರೂಪಾಯಿ ಬಿಡುಗಡೆ ಮಾಡುವುದಕ್ಕೆ ಸುಮಾರು 16 ಲಕ್ಷ ಕಾರ್ಮಿಕರ ಪರವಾಗಿ ಹಾಗೂ 2 ಲಕ್ಷ 92 ಇಂಡಸ್ಟ್ರೀಗಳ ಪರವಾಗಿ ವಿಶೇಷ ವಿನಂತಿಯನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಯೋಗೀಶ್ ಭಟ್ ಅವರು ಭಾಷಣ ಮಾಡಿದಂತಹ ಕಾಲದಲ್ಲಿ ನಿನ್ನೆ ನಾನು ಇದ್ದೆ. ಈ ಎರಡು ಮೂರು ವಿಚಾರಗಳನ್ನು ನೀವು ಪ್ರಸ್ತಾಪ ಮಾಡಿದ್ದೀರಿ. ಈಗಾಗಲೇ ನಾನು ಮಂಗಳೂರು-ಹಾಸನ ರೈಲ್ವೆ ವಿಚಾರದಲ್ಲಿ ಹೇಳಿದ್ದೇನೆ. ಎರಡು ಕೈ ಸೇರಿದರೆ ಚಪ್ಪಾಳೆ ಆಗುತ್ತದೆ. ಇಲ್ಲದೇ ಇದ್ದರೆ ಒಂದೇ ಕೈನಲ್ಲಿ ಚಪ್ಪಾಳೆ ಆಗುವುದಿಲ್ಲ. ರೈಲ್ವೆ ಮಿನಿಸ್ಟರ್ ಮತ್ತು ಸ್ಟೇಟ್ ಗವರ್ನಮೆಂಟ್ ಮಧ್ಯೆ ಟೋಟಲ್ ಕೋಆರ್ಡಿನೇಷನ್ ಬೇಕಾಗುತ್ತದೆ. ನಾನು ಮತ್ತೆ ಈ ಸದನದ ಮೂಲಕ ಕೇಂದ್ರ ಸರ್ಕಾರದ ರೈಲ್ವೆ ಸಚಿವ ಶಾಖೆಗೆ ಆಗ್ರಹ ಪೂರ್ವಕವಾಗಿ ನಿವೇದನೆ ಮಾಡುತ್ತೇನೆ. ನಾವು ಏನು ಭರವಸೆಗಳನ್ನು ಕೊಟ್ಟಿದ್ದೇವೆ. ಆ ಭರವಸೆಗಳನ್ನು ಪೂರೈಸುತ್ತೇವೆ. ನೀವು ಈ ಲೈನ್‌ಗಳನ್ನು ಮುಗಿಸಲಿಕ್ಕೆ ನೀವು ಪ್ರಯತ್ನ ಮಾಡಬೇಕು ಹಾಗೆ ಎಂದು ಹೇಳಿದ್ದೇವೆ. ಸ್ಮಾಲ್ ಇಂಡಸ್ಟ್ರೀಸ್ ಬಗ್ಗೆ ಹೇಳಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರತಿಪಾದನೆ ಮಾಡಿದ್ದರು, ನಾನು ಹೇಳಿದ್ದೇನೆ. ಮುಂದೆ ಬರತಕ್ಕ ಹಣಕಾಸಿನ ವರ್ಷದಲ್ಲಿ ಇದರ ಬಗ್ಗೆ ನಾವೊಂದು ಕಾಂಪ್ರಹೆನ್ಸೀವ್ ರೆಸ್ಪಾನ್ಸನ್ನು ಫ್ರೇಮ್ ಮಾಡಿ, ಅದಕ್ಕೆ ಒಂದು ಹಂತ ಹಂತದಲ್ಲಿ ನಾವು ಜಾರಿಗೆ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ರೇವು ನಾಯಕ್ ಬೆಳಮಗಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು ಬೆಳೆ ಸಾಲದ ಬಗ್ಗೆ, ಬಡ್ಡಿ ಮನ್ನಾದ ಬಗ್ಗೆ ಹೇಳಿದ್ದಾರೆ. ಆದಕ್ಕಾಗಿ ನಾನು ಕೇಳುತ್ತೇನೆ ಸರಿಯಾಗಿ ನಮಗೆ ಗೊತ್ತಾಗಿಲ್ಲ. ಸಹಕಾರಿ ಬ್ಯಾಂಕ್‌ನೊಳಗೆ ಬಡ್ಡಿ ಮನ್ನಾ ಆಗುತ್ತದೆ ಎಂದು ಹೇಳಿದರು. ನಮ್ಮ ಹಳ್ಳಿಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಕೃಷ್ಣಾ ಗ್ರಾಮೀಣ ಬ್ಯಾಂಕ್ ಮತ್ತು ಬೇರೆ ಬೇರೆ ಬ್ಯಾಂಕುಗಳಿಂದ ರೈತರು ಬೆಳೆ ಸಾಲ ತೆಗೆದುಕೊಂಡಿದ್ದಾರೆ. ಅವುಗಳ ಬಡ್ಡಿ ಮನ್ನಾ ಆಗುತ್ತದೋ ಇಲ್ಲವೊ ಎಂಬುದನ್ನು ಖಚಿತವಾಗಿ ತಿಳಿಸಬೇಕು. ಮತ್ತೊಂದು ಮಾತು ಎಂದರೆ ರೈತರು

ಎಂದರೆ ಎಲ್ಲರನ್ನೂ ಸಮಾನವಾಗಿ ನೋಡಿಕೊಳ್ಳಬೇಕು. ಯಾವುದೇ ಬ್ಯಾಂಕಿನಿಂದ ಅವರು ಬೆಳೆ ಸಾಲ ತೆಗೆದುಕೊಳ್ಳಬಹುದು. ಬೆಳೆ ಸಾಲ ತೆಗೆದುಕೊಂಡು ಅವರು ತೊಂದರೆಗೆ ಈಡಾಗಿದ್ದಾರೆ. ಅದಕ್ಕೆ ಸರಿ ಸಮಾನವಾಗಿ ಎಲ್ಲಾ ರೈತರಿಗೆ ಬೆಳೆ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಬೇಕು ಎಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಹಡಗಲಿ, ಮುಂಡರಗಿ ಮತ್ತು ಕೊಪ್ಪಳ ತಾಲ್ಲೂಕಿಗೆ ಶಾಶ್ವತವಾದಂತಹ ಬರಗಾಲ ನಿವಾರಣೆ ಯೋಜನೆ ಅಂಗವಾಗಿ ಅಲ್ಲೊಂದು ಹೂಲಿಗುಡ್ಡ, ಸಿಂಗಟಾಲೂರು ಏತ ನೀರಾವರಿ ಯೋಜನೆ ಪ್ರಾರಂಭವಾಗಿ ಇಷ್ಟು ಹೊತ್ತಿಗೆ ನೀರು ಕೊಟ್ಟಿದ್ದರೆ ಆ ಮೂರು ತಾಲ್ಲೂಕಿಗೆ ಬರ ಇರುತ್ತಿರಲಿಲ್ಲ. ದುರ್ದೈವದಿಂದ ತಮ್ಮ ಸರ್ಕಾರ ಬಂದ ಮೇಲೆ ಸಂಪೂರ್ಣವಾಗಿ ಅದನ್ನು ನಿಲ್ಲಿಸಿಬಿಟ್ಟಿದ್ದೀರಿ. ಈಗಾಗಲೇ ಅರ್ಧ ಕೆಲಸ ಆಗಿದೆ ಹಣ ಖರ್ಚಾಗಿದೆ. ತಾವು ಸ್ವಲ್ಪ ಹಣ ಬಿಡುಗಡೆ ಮಾಡಿದರೆ ಮುಗಿದು ಇಷ್ಟು ಹೊತ್ತಿಗೆ ಮೂರು ತಾಲ್ಲೂಕಿನ ಬರ ನಿವಾರಣೆ ಆಗುತ್ತಿತ್ತು. ದಯವಿಟ್ಟು ಅದನ್ನು ತೀವ್ರದಲ್ಲಿ ಪ್ರಾರಂಭ ಮಾಡುತ್ತೀರಾ ಎಂಬುದನ್ನು ಕೂಡ ತಾವು ಹೇಳಬೇಕಾಗುತ್ತದೆ.

ಶ್ರೀ ಬಿ.ಆರ್. ನೀಲಕಂಠಪ್ಪ- ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲಾ ಶಾಸಕರ ಬೇಡಿಕೆಯಂತೆ ಶಾಸಕರ ನಿಧಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಣ ಬಿಡುಗಡೆ ಕುರಿತಂತೆ ಸ್ಪಷ್ಟವಾದ ಉತ್ತರ ನೀಡಿದರೆ ನಾವೆಲ್ಲರೂ ನಮ್ಮ ಕ್ಷೇತ್ರಗಳ ಕೆಲಸ-ಕಾರ್ಯಗಳನ್ನು ನೆಮ್ಮದಿಯಿಂದ ಮಾಡಬಹುದು.

ಶ್ರೀ ಎಸ್.ಎಂ. ಕೃಷ್ಣ:- ವಿವರಣೆ ಕೇಳತಕ್ಕಂಥಾದ್ದು ನಾನು ಭಾಷಣ ಮಾಡಿ ನಮೂದಿಸಿರತಕ್ಕ ವಿಚಾರಗಳಲ್ಲಿ ಉದ್ಭವವಾಗಬಹುದಾದಂಥ ಸಂಶಯಗಳನ್ನು ನಿವಾರಣೆ ಮಾಡತಕ್ಕಂಥಾದ್ದು ಹೊಸ ಹೊಸ ಆಲೋಚನೆ, ವಿಚಾರಗಳನ್ನು ಪ್ರಸ್ತಾಪಿಸಿದರೆ ಅದಕ್ಕೆ ಕೊನೆ ಮೊದಲೆಲ್ಲಿ? ಮಾನ್ಯ ಸದಸ್ಯರಾದ ರೇವುನಾಕ್ ಬೆಳಮಗಿಯವರು ಕೇಳಿರುವುದಕ್ಕೆ ನಾನು ಅದರ ಬಗ್ಗೆ ಆಗಲೇ ಸ್ಪಷ್ಟಪಡಿಸಿರುವಂತೆ, ಕೋ-ಆಪರೇಟಿವ್ ಸಾಲ 2002-03ನೇ ಸಾಲಿನ Khariff ಬೆಳೆಗೆ ಮಾತ್ರ ಅನ್ವಯಿಸುವಂಥ ಸರ್ಕಾರಿ ಆದೇಶವನ್ನು ಹೊರಡಿಸಿದ್ದು, ಅದಕ್ಕೆ ನಾವು ಬದ್ಧವಾಗಿದ್ದೇವೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಐದು ಕೋರ್ಟ್‌ಗಳನ್ನು ಸ್ಯಾಂಕ್ಷನ್ ಮಾಡಬೇಕೆಂದು ಸರ್ಕಾರಕ್ಕೆ ಪ್ರಧಾನ ಕಳುಹಿಸಿಕೊಡಲಾಗಿತ್ತು. ಸರ್ಕಾರದವರು ಸ್ಯಾಂಕ್ಷನ್ ಮಾಡಿ ಮೂರು ವರ್ಷಗಳಾದವು. ಕೋರ್ಟ್ ಕಟ್ಟಡ ಇಲ್ಲದೇ ಇರುವುದರಿಂದ ಕೋರ್ಟನ್ನು ಪ್ರಾರಂಭಿಸುವುದಕ್ಕಾಗಲಿಲ್ಲ. ಎರಡನೆಯದಾಗಿ, ಶಿಡ್ಲಘಟ್ಟದಲ್ಲಿ ಕೋರ್ಟ್ ಕಾಂಪ್ಲೆಕ್ಸ್ ಇಲ್ಲದ್ದರಿಂದ ಮಿನಿ ವಿಧಾನಸೌಧಕ್ಕೆ ವರ್ಗಾಯಿಸಬೇಕೆಂದು ಹೇಳಲಾಗಿತ್ತು. ಅದನ್ನು ಆದಷ್ಟು ಬೇಗ ಮಾಡಬೇಕು. ಮೂರನೆಯದಾಗಿ, Metro Train in Bangalore City ಇದು ಬಹಳ ಮುಖ್ಯವಾದುದು. ಈ ಮೂರು ವಿಷಯಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕ್ಲಾರಿಫೈ ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ:- ನಿನ್ನೆ ಮಾನ್ಯ ಸದಸ್ಯರು ಶಿಡ್ಲಘಟ್ಟದ ಬಗ್ಗೆ ಮಾಡಿರುವ ಭಾಷಣವನ್ನು ನಾನು ಕೇಳಿದೆ. ಕೋರ್ಟ್ ಪ್ರಾರಂಭೋತ್ಸವ ಉದ್ದೇಶಕ್ಕಾಗಿ ಹಾಗೇ ಇರುವುದಾಗಿ ಹೇಳಿದರು. ನಾನು ಈ ಬಗ್ಗೆ ಒಂದು ವಿಚಾರವನ್ನು ಸ್ಪಷ್ಟಪಡಿಸುತ್ತೇನೆ. ಏನೆಂದರೆ, ಮುಖ್ಯಮಂತ್ರಿಗಳ ಬರುವಿಕೆಗೋಸ್ಕರ ಇಂತಹ ಕಾರ್ಯಕ್ರಮಗಳು ನಿಲ್ಲಬಾರದು. ಮುಖ್ಯಮಂತ್ರಿಗಳಾದವರು ಬರುತ್ತಾರೆ, ಹೋಗುತ್ತಾರೆ. ಕಟ್ಟಡದ ಕೆಲಸ-ಕಾರ್ಯಗಳು ಯಾವಾಗ ಪೂರ್ಣಗೊಳ್ಳುತ್ತದೋ, ಆ ತಕ್ಷಣದಲ್ಲಿ

ಕಟ್ಟಡದ ಸಂಪೂರ್ಣ ಉಪಯೋಗವನ್ನು ಜನರು ಪಡೆದುಕೊಳ್ಳಲು ಅಗತ್ಯವಾದ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳಬೇಕು. ಇನ್ನು ಹೊಸ ಕೋರ್ಟ್ ಕಟ್ಟಡಗಳ ವಿಚಾರವಾಗಿ ತಾವು ಪ್ರಸ್ತಾಪಿಸಿರುವುದಕ್ಕೆ, ಇದು ರಾಜ್ಯ ಸರ್ಕಾರದ ಸಂಪನ್ಮೂಲವನ್ನು ಅವಲಂಬಿಸಿರುವ ವಿಚಾರವಾಗಿದೆ. ಆದುದರಿಂದ, ಆ ಪ್ರಶ್ನೆ ಬಂದಾಗ ಅದಕ್ಕೊಂದು ಪರಿಹಾರ ಹುಡುಕಬೇಕು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಮುಂಗಾರು ಬೆಳೆ ವಿಮೆ ಕುರಿತಂತೆ ಸ್ಪಷ್ಟವಾಗಿ ಏನನ್ನೂ ಹೇಳಲಿಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರಾದ ಪುಟ್ಟರಂಗನಾಥ್‌ರವರು ಸಾಕಷ್ಟು ಬಾರಿ ಕೇಳಿದರು. ಮುಂಗಾರು ಬೆಳೆ ವಿಮೆ ಹಣ ಬಿಡುಗಡೆ ಬಗ್ಗೆ ಏನನ್ನೂ ಹೇಳಿಲ್ಲ ನಂತರ, ಒಂದು ವರ್ಷ ಕಾಲ ಬಡ್ಡಿ ಮನ್ನಾ ಮಾಡುವಂತಾದ್ದು. Khariff ಬೆಳೆಗೆ ಸಂಬಂಧಿಸಿದಂತೆಯೂ ಮುಖ್ಯಮಂತ್ರಿಗಳು ಅಷ್ಟೇ ಹೇಳಿದರು. ಆದರೆ, ಮುಂಗಾರು ಬೆಳೆಗಾಗಿ ರೈತರು ಮಾಡಿರುವ ಸಾಲವೇನಿದೆ, ಅದರ ಮೇಲೆ ವಿಧಿಸಿರುವ ಬಡ್ಡಿಯನ್ನು ಮನ್ನಾ ಮಾಡಬೇಕು. ಇನ್ನು ವಿದ್ಯುತ್ ಅಭಾವದ ಕುರಿತಂತೆ ಪರಿಹಾರ ಹುಡುಕುವ ಬಗ್ಗೆ ಏನೂ ಹೇಳಿರುವುದಿಲ್ಲ. K-RIDE ಬಗ್ಗೆ ಅವರ ಕಾಂಟ್ರಿಬ್ಯೂಷನ್ ಏನೂ ಇಲ್ಲ. ಇದನ್ನು ಕೇವಲ ಕೇಂದ್ರ ಸರ್ಕಾರದ ಮೇಲೆ ಹಾಕುವಂತಾದ್ದು ಅಲ್ಲದೆ, ಇವೊತ್ತು ರೈತರ ಆತ್ಮಹತ್ಯೆ ಕುರಿತಂತೆ ಅವರ ಕುಟುಂಬದವರಿಗೆ ಪರಿಹಾರ ಧನ ಕೊಡುವ ವಿಷಯದಲ್ಲಿ ಚಕಾರವೆತ್ತಿಲ್ಲ. ಹೀಗಾಗಿ ಇವೊತ್ತು ಸರ್ಕಾರ ಸರಿಯಾದಂಥ ಉತ್ತರ ಕೊಟ್ಟಿಲ್ಲ, ರೈತರಿಗೆ ಅನುಕೂಲವಾಗುವಂಥ ಕೆಲಸವನ್ನೂ ಮಾಡಲಿಲ್ಲ ಸರ್ಕಾರದ ಈ ಧೋರಣೆಯನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

(ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸದನದಿಂದ ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಪಕ್ಷಕ್ಕೋಸ್ಕರ, ಸಾರ್ವಜನಿಕರಿಗೆ ತಿಳಿವಳಿಕೆ ಕೊಡುವುದಕ್ಕೋಸ್ಕರ ಅವರು ಸಭಾತ್ಯಾಗ ಮಾಡಲಿ. ಈ ಗಲಭೆಯಲ್ಲಿ ಪತ್ರಿಕೆಯಲ್ಲಿ ಏನು ವರದಿಯಾಗುತ್ತದೆಂದರೆ, 'ಗೊಂದಲವಾಯಿತು, ಬರಲೇ ಇಲ್ಲ' ಎಂದು ಬರುತ್ತದೆ. ಅವರು ಹೋದ ನಂತರ ಈಗ ಮಾಡಿ.

ವಂದನಾ ನಿರ್ಣಯ ಪ್ರಸ್ತಾವದ ಅಂಗೀಕಾರ

ಅಧ್ಯಕ್ಷರು:- "ಫೆಬ್ರವರಿ 27, 2003 ರಂದು ವಿಧಾನ ಮಂಡಲದ ಸದಸ್ಯರನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎನ್ನುವ ಪ್ರಸ್ತಾವವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಂದನಾ ನಿರ್ಣಯ ಪ್ರಸ್ತಾವಕ್ಕೆ ಸಭೆಯು ಅನುಮತಿ ನೀಡಿತು.

ಅಧ್ಯಕ್ಷರು:- ಈ ಸದನವು ಅಂಗೀಕರಿಸಿದ ವಂದನಾ ನಿರ್ಣಯವನ್ನು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

ಈಗ ಭೋಜನ ವಿರಾಮ. ಮಾನ್ಯ ಮಂತ್ರಿಗಳಾದ ಮಲ್ಲಿಕಾರ್ಜುನ್ ಖರ್ಗೆಯವರು ತಮಗೆಲ್ಲರಿಗೂ ಬಾಂಕ್ವೆಟ್ ಹಾಲ್‌ನಲ್ಲಿ ಭೋಜನ ಏರ್ಪಡಿಸಿದ್ದಾರೆ. ದಯಮಾಡಿ ತಾವೆಲ್ಲರೂ ಪಾಲ್ಗೊಳ್ಳಬೇಕೆಂದು ನನ್ನ ವಿನಂತಿ.

ಈಗ ಸದನವನ್ನು 2.30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನ ಮಧ್ಯಾಹ್ನ 1 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 2.30 ಗಂಟೆಗೆ ಸೇರಲು ನಿಶ್ಚಯಿಸಿತು).

(ಸದನವು ಮಧ್ಯಾಹ್ನ 3.00 ಗಂಟೆಗೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷರ ಪೀಠದಲ್ಲಿ ಉಪಾಧ್ಯಕ್ಷ ಶ್ರೀ ಮನೋಹರ್ ಹೆಚ್. ತಹಶೀಲ್ದಾರ್‌ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು).

2. ಪ್ರಕಟಣೆ

ಮಾನ್ಯ ಉಪಾಧ್ಯಕ್ಷರು:- ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 19ನೇ ಮಾರ್ಚ್ 2003 ರಂದು ಹಾಗೂ 20-3-2003 ರಂದು ಈ ಕೆಳಕಂಡ ವಿಧೇಯಕಗಳನ್ನು ವಿಧಾನ ಪರಿಷತ್ತಿನಲ್ಲಿ ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

1) "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2003"
2) "ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) (ತಿದ್ದುಪಡಿ) ವಿಧೇಯಕ, 2002"
3) "ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ, 2002."
4) "ಕರ್ನಾಟಕ ಗೃಹ ರಕ್ಷಕದಳ (ತಿದ್ದುಪಡಿ) ವಿಧೇಯಕ, 2003"

3. ಪ್ರಶ್ನೋತ್ತರ

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಎಥೆನಾಲ್ ಉತ್ಪಾದನೆ

192 (2257) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ 'ಎಥೆನಾಲ್' ಉತ್ಪಾದನೆ ಮಾಡಲು ಸಂಬಂಧಿಸಿದವರಿಂದ ಅನುಮತಿ ದೊರಕಿದೆಯೇ?

ಆ) ದೊರಕಿದ್ದಲ್ಲಿ, ಪೂರ್ವ ಸಿದ್ಧತಾ ಕ್ರಮಗಳನ್ನೇನಾದರೂ ಕೈಗೊಳ್ಳಲಾಗಿದೆಯೇ?

ಇ) ಕೈಗೊಳ್ಳಲಾಗಿದ್ದಲ್ಲಿ, ಅದರ ಬಗೆಗಿನ ಮಾಹಿತಿಗಳೇನು?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು):

ಅ) ಕಾರ್ಖಾನೆಯಲ್ಲಿ ಈಗಾಗಲೇ ಒಂದು ಕಿಲೋ ಲೀಟರ್‌ನಷ್ಟು ಎಥೆನಾಲ್‌ನ್ನು ಆಸ್ಪತ್ರೆಯಲ್ಲಿ ಉಪಯೋಗಿಸಲು ಅನುಮತಿ ಪಡೆದು ತಯಾರಿಸಲಾಗುತ್ತಿದೆ. ಪೆಟ್ರೋಲ್ ಜೊತೆ ಮಿಶ್ರಣ ಮಾಡಲು ಅನುಮತಿ ಪಡೆದಿಲ್ಲ.